(No. Member dissented)

MR. SPEAKER.—Permission to remain absent is granted.

ವಿತ್ತೀಯ ಕಾರ್ಯಕಲಾಪಗಳು

ವಿಷಯ: 1983–84 ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲೆ ಚರ್ಚೆ.

ಅಧ್ಯಕ್ಷರು.—ನಿನ್ನೆ ತಾವು ಬೇಡಿಕೆಯ ಬಗ್ಗೆ ಚರ್ಚೆ ಪ್ರಾರಂಭಿಸಿ ಸುಮಾರು 50 ನಿಮಿಷಗಳ ಕಾಲ ಮಾತನಾಡಿದ್ದೀರಿ. ಈ ಬೇಡಿಕೆ ಮೇಲೆ ಇನ್ನೂ 15–16 ಜನರು ಮಾತನಾಡುವವರಿದ್ದಾರೆ. ಆದ್ದರಿಂದ ತಾವು ಕಾಲಮಿತಿಯನ್ನು ನೀವೇ ಹಾಕಿಕೊಂಡು ತಮ್ಮ ಭಾಷಣವನ್ನು ಮುಗಿಸುವುದಕ್ಕೆ ಪ್ರಯತ್ನಪಡಿ.

* ಶ್ರೀ ವೈ. ರಾಮಕೃಷ್ಣ.—I will try.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯದಿವಸ ಈ ಮನೆಯ ಶಾಸಕಾಂಗದ ವಿಚಾರದಲ್ಲಿ ಕೆಲವಾರು ಮಾತುಗಳನ್ನು ಆಡಿದ್ದೇನೆ. ಮತ್ತೆ ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್ ಅವರು ನನ್ನನ್ನು ರಾಜ್ಯಾಂಗದ ಅನುಚ್ಛೇದವನ್ನು ಮತ್ತೊಮ್ಮೆ ಓದಿ ಎಂದು ಹೇಳಿದರು. ಅದನ್ನು ಮತ್ತೊಮ್ಮೆ ಮಗದೊಮ್ಮೆ ಓದಿದ್ದೇನೆ. ನನ್ನ ಮುಂದೆ ಕಾಂಪ್ರಹೆನ್ಸೀವ್ ನೋಟ್ ಇದೆ. ಆದರೆ ಇದು ಚರ್ಚಾಸ್ಪದ ವಿಷಯ ಆಗಬಾರದು. to make Legislature as independent one, there should not be any debate on the floor of the House. ಈಗಾಗಲೇ ತಮಗೆ ಪತ್ರ ವ್ಯವಹಾರ ಬಂದಿದೆ ಎಂದು ಗೊತ್ತಾಯಿತು. ಸಂಬಂಧಪಟ್ಟ ಸ್ಪೀಕರ್ ಅವರೇ, ಚೇರ್ಮನ್ ಅವರು ಒಂದು ಶಿಫಾರಸ್ಸನ್ನು ಮಾಡಿ ತಮ್ಮ ಹತ್ತಿರ ಕಳುಹಿಸಿದ್ದಾರೆ. ಅದು ತಮ್ಮ ಆಫೀಸಿನಲ್ಲಿ ಪೆಂಡಿಂಗ್ ಇದೆ. ಅದರ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳುವುದಕ್ಕೆ ಕಷ್ಟ ಆಗಿರಬಹುದು. ಏಕೆಂದರೆ ಒಂದೊಂದು ಹೈಕೋರ್ಟ್‌ನಲ್ಲಿ ಒಂದೊಂದು ರೀತಿಯ ತೀರ್ಪುಗಳು ಇರುತ್ತವೆ. ಪಂಜಾಬ್ ಹೈಕೋರ್ಟ್ ಒಂದು ರೀತಿ ತೀರ್ಪು ಕೊಟ್ಟಿದ್ದರೆ ಅಲಹಾಬಾದ್ ಹೈಕೋರ್ಟ್ ಒಂದು ರೀತಿಯ ತೀರ್ಪು ಕೊಟ್ಟಿರುತ್ತದೆ. ಆದರೆ ಇದನ್ನು ಇಷ್ಯೂ ಮಾಡದೇ ತಾವು ಅತಿ ಶೀಘ್ರವಾಗಿ ಎಷ್ಟರಮಟ್ಟಿಗೆ ಸರ್ವ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಸಾಧ್ಯ ಎಂದು ಅರಿತು ಸಹಕರಿಸಿದ್ದರೆ ನಾನು ವಿಷಯವನ್ನು ಎತ್ತುತ್ತಲೇ ಇರಲೇ ಇಲ್ಲ. ನಾನು ನಿನ್ನೆಯೇ ಇದನ್ನು ಮುಗಿಸುತ್ತಿದ್ದೆ. ಆದರೆ ತಾವು ಮಧ್ಯದಲ್ಲಿ ಎದ್ದು ಓದಿ ಎಂದು ಹೇಳಿದ್ದರಿಂದ ನಾನು ಮತ್ತೊಮ್ಮೆ ಮನೆಗೆ ಹೋಗಿ ಎಲ್ಲವನ್ನೂ ಓದಿದ್ದೇನೆ. ತಾವು ಇದನ್ನೆಲ್ಲಾ ನೋಡದೇನೇ, ಜಡ್ಜ್‌ಮೆಂಟ್ ಓದದೇನೇ ಪತ್ರಿಕೆಯವರಿಗೆ ಏಕೆ ಸ್ಟೇಟ್‌ಮೆಂಟ್ ಕೊಟ್ಟಿರಿ? ಸರ್ವ ಸ್ವತಂತ್ರ ಲೆಜಿಸ್ಲೇಚರ್ ಕೊಟ್ಟಿದ್ದೇವೆ, ಪ್ರತ್ಯೇಕ ಇಲಾಖೆ ಮಾಡಿದ್ದೇವೆ ಎಂದು ಹೇಳದಿದ್ದರೆ ಈ ಪ್ರಶ್ನೆಯೇ ಉದ್ಭವವಾಗುತ್ತಿರಲಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಲೆಜಿಸ್ಲೇಚರ್‌ಗೆ ಈ ಸಾರಿ 20 ಕೋಟಿ ರೂಪಾಯಿ ಕೊಡಲಾಗಿದೆ ಎಂದು ಪತ್ರಿಕೆಯಲ್ಲಿ ಮಾನ್ಯ ರಘುಪತಿಯವರು ಹೇಳಿರುವುದನ್ನು ನೋಡಿದೆ. ಅಧ್ಯಕ್ಷರೇ, ಇದು ತಮಗೆ ಗೊತ್ತಿರಬಹುದಲ್ಲವೇ?

ಶ್ರೀ ಎಂ. ರಘುಪತಿ.—ಯಾವ ಪತ್ರಿಕೆಯಲ್ಲಿ ಬಂದಿದೆ ತೋರಿಸಿ?

ಉಪಾಧ್ಯಕ್ಷರು.—ರಂಗನಾಥ್ ಅವರೇ. ಬಹುಶಃ ಅವರು...

ಶ್ರೀ ಕೆ. ಹೆಚ್. ರಂಗನಾಥ್.—ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದ್ದೇನೆ. ಅವರು ತರಿಸಿ ನೋಡಲಿ. ನಾನೇ ಅದನ್ನು ತರಿಸಿ ತೋರಿಸಬೇಕೆಂದು ಹೇಳಿದರೆ ಹೇಗೆ? "In courts burden of proof lines on him". ಎಂದ ಹಾಗೆ ಆಗುತ್ತದೆ. ಅದನ್ನು ನಾನು ತರಿಸಲು ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ಹೇಳಿ ಕಳುಹಿಸಿದರೆ ಅವರು ಜಾಗ್ರತೆ ತಂದುಕೊಡುತ್ತಾರೆ. ನಾವು ಕೇಳಿದರೆ ಅವರು ಅಲ್ಲೆಲ್ಲೋ ಹೋಗಿ ನಿಂತುಬಿಡುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಈ ವಿಷಯವನ್ನು ಇಲ್ಲಿಗೇ ಬಿಡುತ್ತೇನೆ. ಮತ್ತೊಂದು ವಿಷಯ ಏನೆಂದರೆ ನಮ್ಮ ಶಾಸನ ಸಭೆ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಅಸೋಸಿಯೇಷನ್‌ನ ಒಂದು ಭಾಗ. Ours is a Branch and we have got our own Constitution. ಇದರ ಅಡಿಯಲ್ಲಿ ಅನೇಕ ಜನ ಹೊರದೇಶಕ್ಕೆ ಹೋಗಿ ಅಲ್ಲಿ ಯಾವ ರೀತಿ ಪಾರ್ಲಿಮೆಂಟರಿ ಡೆಮಾಕ್ರಸಿ, ಕೆಲಸ ಮಾಡುತ್ತದೆ ಮತ್ತು ಯಾವ ರೀತಿ ನ್ಯಾಯಾಂಗ ಕೆಲಸ ಮಾಡುತ್ತದೆ ಎಂಬುದನ್ನು ನೋಡಿಕೊಂಡ ಬಂದಿದ್ದಾರೆ. ಪ್ರತಿ ರಾಜ್ಯದಲ್ಲೂ ಕೂಡ ಪ್ರತಿ ವರ್ಷ ಸುಮಾರು 20–25 ಜನ ಹೋಗುವುದಕ್ಕೆ ಅವಕಾಶ ಇದೆ. ನಾನು ಕಳೆದ ವರ್ಷ ಈ ವಿಚಾರವನ್ನು ಪ್ರಸ್ತಾಪ ಮಾಡಿ ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಕಳೆದ ವರ್ಷ ಆಂಧ್ರದಲ್ಲಿ ಕಳುಹಿಸಿದ್ದರು. ಇದಕ್ಕೆ ಸರ್ಕಾರದಿಂದ ಖರ್ಚು ಏನೂ ಬೀಳುವುದಿಲ್ಲ. ಭಾರತ ಸರ್ಕಾರ ಅನುಮತಿ ಕೊಟ್ಟ ಕೆಲವು ದೇಶಗಳಿಗೆ ಹೋಗಿ ಅಲ್ಲಿನ ನ್ಯಾಯಾಂಗದ ಬಗ್ಗೆ, ಶಾಸಕಾಂಗದ ಬಗ್ಗೆ ತಿಳಿದುಕೊಂಡು ಬರಲು ಒಂದು ಅನುಕೂಲ. ಈ ಬಗ್ಗೆ ತಮಗೆ ಈಗಾಗಲೇ

ಮಾಹಿತಿ ಬಂದಿರಬಹುದೆಂದು ಕಾಣುತ್ತದೆ. ಹೋದ ವರ್ಷ ಈ ಬಗ್ಗೆ ಪ್ರಯತ್ನಗಳು ಆಗಿದ್ದವು. ಇದರ ಬಗ್ಗೆ ಗಮನ ಕೊಡಿ. ಕಳೆದ ವರ್ಷ ಆಂಧ್ರದವರು ಹೋಗಿದ್ದರು. ಈ ವರ್ಷ ಕರ್ನಾಟಕದಿಂದ ಆಸಕ್ತಿ ಉಳ್ಳವರಿಗೆ ಅವಕಾಶ ಕಲ್ಪಿಸಿಕೊಟ್ಟರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ. ತಾವು ನಗುತ್ತಿದ್ದೀರಿ, ನಾನು ಏಕೆ ಹೇಳಿದೆನು ಎಂದರೆ Dispensation of justice according to law. It is Indian system. ಇದನ್ನು ನಾನು ಓಪನ್ನಾಗಿ ಹೇಳುತ್ತಿದ್ದೇನೆ. It renders only legal justice and not social justice. Without social justice, there will not be legal justice. ಇದನ್ನು ಹೊರದೇಶಗಳಲ್ಲಿ ಹೋಗಿ ನೋಡಬೇಕು. ಸಾಮಾಜಿಕ ನ್ಯಾಯವನ್ನು ಒದಗಿಸುವ ದಿಸೆಯಲ್ಲಿ ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಸೋಷಲಿಸ್ಟ್ ಕಂಟ್ರಿಗಳಲ್ಲಿ, ಕಮ್ಯೂನಿಸ್ಟ್ ಕಂಟ್ರಿಗಳಲ್ಲಿ, ಇಸ್ಲಾಮಿಕ್ ಕಂಟ್ರಿಗಳಲ್ಲಿ ಹೋಗಿ ನೋಡಬೇಕು. ಇದು ಬಹಳ ಪ್ರಾಮುಖ್ಯವಾದುದು. ಇದರ ಒಂದು ಆಧಾರದ ಮೇಲೆ ನ್ಯಾಯಾಂಗವನ್ನು ನಡೆಸಬೇಕಾಗುತ್ತದೆ. ಬ್ರಿಟಿಷರು ಬಿಟ್ಟಂಥ ಸಂಪ್ರದಾಯವನ್ನು ನಾವು ನಡೆಸಿಕೊಂಡು ಹೋಗುತ್ತಿದ್ದೇವೆ. ಇದರಿಂದ ಅನೇಕ ಸಮಸ್ಯೆಗಳಿಗೆ ಸಿಕ್ಕಿಬಿದ್ದಿದ್ದೇವೆ. ಅದನ್ನು ಬಿಡಿಸಲಿಕ್ಕೆ ಕಷ್ಟವಾಗುತ್ತಿದೆ. ಡೆಲ್ಲಿ ಮತ್ತು ಕಾಶ್ಮೀರದಲ್ಲಿ ಅಖಿಲ ಭಾರತ ಕಾನೂನು ಮಂತ್ರಿಗಳ ಸಮ್ಮೇಳನ ನಡೆಯಿತು. ತಾವು ಹೋಗಿದ್ದಿರೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಆಮಂತ್ರಣ ಬಂದಿರಲಿಲ್ಲ. ಪತ್ರಿಕೆಯಲ್ಲಿ ಬಂದಿದ್ದನ್ನು ನೋಡಿದ್ದೆ.

ಶ್ರೀ ವೈ ರಾಮಕೃಷ್ಣ.—1982-83 ರ ವಾರ್ಷಿಕ ವರದಿಯನ್ನು ಅಂದರೆ ನನ್ನ ಕಾಲದ ವರದಿಯನ್ನು ನನ್ನ ಕೈಯಲ್ಲಿಟ್ಟು ಭಾಷಣ ಮಾಡಿ ಎಂದು ಹೇಳುತ್ತಿದ್ದೀರಿ. Their Performance Report is not being placed on the floor of the House. That shows lack of interest. He has no interest about these matters. ನಿಮ್ಮ ಇಂಟರೆಸ್ಟ್ ಎಲ್ಲಾ ಬೇರೆ ಕಡೆ ಇದೆ. ಸ್ವಾಮಿ, ಇದರಲ್ಲಿ ಎರಡು ಹೊಸ ವಿಭಾಗಗಳನ್ನು ಸೇರಿಸಿದ್ದೀರಿ. ಕೋಡಿಫಿಕೇಷನ್ ವಿಂಗ್ ಎಂದು ಮಾಡಿದ್ದೀರಿ. ಕನ್ನಡ ವಿಂಗ್ ವಿಚಾರದಲ್ಲಿ ಈಗಾಗಲೇ ಹೇಳಿದ್ದೇನೆ. ಜನವರಿ ತಿಂಗಳು 19 ನೇ ತಾರೀಖು 1983 ರಲ್ಲಿ ಈ ವಿಭಾಗವನ್ನು ತೆಗೆದರೂ ಕೂಡ ಬಹಳ ಸೈಲೆಂಟ್ ಆಗಿದೆ. ಇದನ್ನು ಚುರುಕುಗೊಳಿಸುವಂಥ ಕಾರ್ಯಕ್ರಮಗಳನ್ನು ತಾವು ಹಾಕಿಕೊಳ್ಳಬೇಕು. ಇಲ್ಲದೇ ಹೋದರೆ ಮುಚ್ಚಿಬಿಡಿ. ಸರ್ಕಾರದ ಆಜ್ಞೆ ಹೊರಡಿಸಿ, ನಂತರ ಪತ್ರಿಕೆಗಳಿಗೆ ಹೇಳಿಕೆ ಕೊಡಿ. ತಾವು ಈ ರೀತಿ ಮಾಡಿದರೆ ತಮ್ಮನ್ನು ಜನ ಕ್ಷಮಿಸುವುದಿಲ್ಲ. ಕೋಡಿಫಿಕೇಷನ್ ವಿಂಗ್‌ನ ಕೆಲಸಕಾರ್ಯಗಳೇನು ? ಸುಪ್ರೀಂ ಕೋರ್ಟು ಮತ್ತು ಹೈಕೋರ್ಟು ಜಡ್ಜ್‌ಮೆಂಟುಗಳನ್ನು ಕ್ರೋಢೀಕರಿಸಿ ಇಲಾಖೆಗಳಿಗೆ ಹಂಚುತ್ತೀರಾ ? ತಾವು ಉತ್ತರ ಕೊಡುವಾಗ ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಕಾನೂನು ಇಲಾಖೆಯ ಮುಖ್ಯವಾದ ಹುದ್ದೆಗಳಲ್ಲಿ ಒಟ್ಟು 28 ಜನರು ಇದ್ದು, ಇವರಲ್ಲಿ 20 ಜನ ಹೈಕೋರ್ಟಿನಿಂದ ಬಂದವರು ; 8 ಜನ ಮಾತ್ರ ಕಾನೂನು ಇಲಾಖೆಗೆ ಸಂಬಂಧಪಟ್ಟವರು ಇದ್ದಾರೆ. ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒಂದು ಸಲಹೆ ಕೊಡುತ್ತೇನೆ. ಎಲ್ಲಾ ಇಲಾಖೆಗಳೂ ಇರುವಂತೆ ಕಾನೂನು ಇಲಾಖೆಯನ್ನು ಸ್ವತಂತ್ರವಾದ ಇಲಾಖೆಯನ್ನಾಗಿ ಮಾಡಬೇಕು. ತಾವೇ ನೇಮಕಾತಿ ಕಾನೂನುಗಳನ್ನು ಮಾಡಿಕೊಂಡು, ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಬಡ್ತಿ ಕೊಡುವಂಥ ಅವಕಾಶವನ್ನು ಕಲ್ಪಿಸಿಕೊಡಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಾನೂನು ಇಲಾಖೆ ಖಾಯಂ ಆಗಿರತಕ್ಕ ಹಾಗೂ ಬೆಳೆಯುತಕ್ಕ ಇಲಾಖೆ. ಒಪಿನಿಯನ್ ವಿಂಗ್ ಎಂದು ಇದೆ ; ಕೋರ್ಟಿನಲ್ಲಿ ಕೇಸುಗಳು ಇರುವಾಗ ಸಾಮಾನ್ಯವಾಗಿ ಕಾನೂನು ಇಲಾಖೆಗೆ ರೆಫರ್ ಮಾಡುತ್ತಾರೆ. ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ಅದರ ಪ್ರಕಾರ ನಡೆದುಕೊಳ್ಳುವುದು ನ್ಯಾಯ. ಇವತ್ತು ಇದು ಯಾವ ಮಟ್ಟಕ್ಕೆ ಬಂದಿದೆ ಅಂದರೆ,

"During the year 1982, the Department has received 3464 files and tendered legal advice in about 2897 cases and scrutinised non-statutory orders, notifications and notices in accordance with legal opinion tendered in some of the said files."

ಈ ಒಪಿನಿಯನ್ ಕೊಡುವುದರಲ್ಲಿ ಬಹಳ ನಿಧಾನವಾಗುತ್ತಿದೆ. ಕಾನೂನು ಇಲಾಖೆಯುವರು ತಮ್ಮ ಅಭಿಪ್ರಾಯವನ್ನು ತುರ್ತಾಗಿ ಕೊಡಬೇಕು. ಕೇಸುಗಳು ನಡೆಯುತ್ತಿರುತ್ತವೆ: ಕಂಟ್ರಾಕ್ಟ್ ಡೇಟ್ ಮುಗಿದಿರುತ್ತದೆ. ಪ್ರಾಸಿಕ್ಯೂಷನ್‌ನಲ್ಲಿ ವಿತ್‌ಡ್ರಾ ಮಾಡಬೇಕಾಗುತ್ತದೆ. ಜರೂರಾಗಿ ಅಭಿಪ್ರಾಯಗಳನ್ನು ಕೊಡಬೇಕು. ವರ್ಷಾನುಗಟ್ಟಲೆ ಇಟ್ಟುಕೊಂಡು ಕುಳಿತರೆ ಎಂಥ ಅನಾಹುತವಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಇದನ್ನು ತಪ್ಪಿಸಬೇಕಾದರೆ ಪ್ರತಿಯೊಂದು ಇಲಾಖೆಯಲ್ಲಿಯೂ ಕಾನೂನು ತಿಳಿದಿರತಕ್ಕ ಜನರಿಂದ ಕೂಡಿದ ಒಂದು ಲೀಗಲ್ ಸೆಲ್ ಮಾಡಬೇಕೆಂದು ಹೇಳುತ್ತೇನೆ. ಇಲಾಖೆಗಳಿಗೆ ಸಂಬಂಧಪಟ್ಟ ವಿಷಯದಲ್ಲಿ ಹಾಗೂ ಕಾನೂನು ವಿಷಯದಲ್ಲಿ ಪರಿಣತಿ ಹೊಂದಿರುವವರನ್ನು ಹಾಕಿ ಅವರು ಕೊಟ್ಟಂಥ ಅಭಿಪ್ರಾಯವನ್ನು ಒಪ್ಪಿಕೊಂಡರೆ ಒಳ್ಳೆಯದಾಗುತ್ತದೆ. ಇವತ್ತು ಏನಾಗಿದೆ ಅಂದರೆ ಸಣ್ಣ ಸಣ್ಣ ವಿಚಾರಗಳ

ಬಗ್ಗೆಯೂ ಕಾನೂನು ಇಲಾಖೆಗೆ ಒಪಿನಿಯನ್‌ಗಾಗಿ ಕಳುಹಿಸಿ, ವಿನಾಕಾರಣ ಕಾಲಹರಣ ಮಾಡುತ್ತಾರೆ. ಹಣಕಾಸಿನ ಇಲಾಖೆಗೆ ಕಳುಹಿಸಿ ಕಾಲಹರಣ ಮಾಡುತ್ತಾರೆ; ಇದು ತಪ್ಪಿದರೆ ಆಡಳಿತ ಸ್ವಚ್ಛವಾಗುತ್ತದೆ. ಕೋಡಿಫಿಕೇಶನ್ ವಿಂಗ್‌ಗೆ ಆಡಳಿತಕ್ಕೆ ಸಂಬಂಧಪಟ್ಟ ಹಾಗೂ ಸೇವೆಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಹಾಕಿದರೆ ಉತ್ತಮ ಎಂದು ಹೇಳುತ್ತೇನೆ. ಇನ್ನು ಲಿಟಿಗೇಷನ್ ವಿಂಗ್ ಕೂಡ ಬಹಳ ಮುಖ್ಯವಾದುದು. The Government is the biggest litigant in the State ಎಂದು ತಾವೇ ಹೇಳಿದ್ದೀರಿ. ಜಗಳ ಮಾಡುವವರು ಯಾರು? ವ್ಯಾಜ್ಯಗಳನ್ನು ಮಾಡಿ, ಕೋರ್ಟಿಗೆ ಹೋಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದರ ಬಗ್ಗೆ ಬಹಳ ಮಾತನಾಡುವುದು ಇದೆ. ಲಿಟಿಗೇಷನ್ ಬಹಳ ಜಾಸ್ತಿಯಾಗಿವೆ. ಪ್ರಸ್ ಆಗುತ್ತಿಪ; ಪ್ರೈಸಸ್ ಆಗಿದ್ದರೆ ಸಂತೋಷಪಡುತ್ತಿದ್ದೆ. ಲಿಟಿಗೇಷನ್‌ಗೆ ಸಂಬಂಧಪಟ್ಟಂತೆ ಎಷ್ಟು ಪೆಂಡಿಂಗ್ ಇದೆ ಎನ್ನುವುದನ್ನು ದಯಪಟ್ಟು ತಿಳಿಸಬೇಕು.

ಇಲ್ಲಿ ಇನ್ನೊಂದು ಹೇಳಿದ್ದೀರಿ: Pendency under Karnataka Agricultural Debt Relief 4,53,536. ಇದರ ಅವಶ್ಯಕತೆ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಬಗ್ಗೆ ಚರ್ಚೆ ನಡೆಸಿದ್ದೇವೆ. ಆ್ಯಕ್ಟನ್ನು ರಿಪೀಲ್ ಮಾಡಲಿಕ್ಕೆ ಸಾಧಕಬಾಧಕ ಏನಿದೆ? ನೀವು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನಾನು ಕೂಡಿ ಹೇಳುತ್ತಿದ್ದೇನೆ. ಹೋದ ವರ್ಷ ಇದೇ ವಿಚಾರದಲ್ಲಿ ಹೈಕೋರ್ಟಿಗೂ ನಮಗೂ ಮಾತುಕತೆ ನಡೆಯಿತು. ಅದರ ಬಗ್ಗೆ ತಾವು ಪರ್‌ಸ್ಯೂ ಮಾಡಬೇಕಾಗಿತ್ತು. ಅಲ್ಲಿ ಹೇಳುವುದೆಲ್ಲಾ ನ್ಯಾಯ ಅಲ್ಲ. ನಾವು ಸುಪ್ರೀಂ ಕೋರ್ಟಿನಲ್ಲಿ ಎತ್ತಿಹಿಡಿದಿದ್ದರ ದೆಸೆಯಿಂದ ಇದಕ್ಕೆ ಜೀವ ಬಂದಿದೆ. ಕರ್ನಾಟಕ ಡೆಟ್ ರಿಲೀಫ್ ಆ್ಯಕ್ಟ್‌ನಿಂದ ಅದರಲ್ಲಿ ಸಿಕ್ಕತಕ್ಕ ಪರಿಹಾರ ಸಿಕ್ಕಿದೆಯೇ? 4,53,536 ಕೇಸುಗಳನ್ನು ಬಗೆಹರಿಸಬೇಕಾದರೆ ಕಷ್ಟ. ದಯವಿಟ್ಟು ರಿಪೀಲಿಂಗ್ ಆ್ಯಕ್ಟ್ ತೆಗೆದುಕೊಂಡು ಬನ್ನಿ. ತಾವು ರಿಪೀಲಿಂಗ್ ಆ್ಯಕ್ಟ್ ತೆಗೆದುಕೊಂಡು ಬಂದರೆ ಇಷ್ಟು ಕೇಸುಗಳು ಒಂದೇ ಸಾರಿ ಫೈಸಲ್ ಆಗುತ್ತವೆ. ಇಲ್ಲ ಅಂದರೆ ಜಾರಿಗೆ ತರಲಿಕ್ಕೆ ಸಾಧ್ಯವೇ? ಒಂದೊಂದು ಕೋರ್ಟಿನಲ್ಲಿಯೂ ಎಷ್ಟೆಷ್ಟು ಕೇಸುಗಳು ಪೆಂಡಿಂಗ್ ಇವೆಯೋ ಗೊತ್ತಿಲ್ಲ. ಅದರಲ್ಲಿ ಎಷ್ಟು ಜನರು ಸತ್ತಿದ್ದಾರೋ, ಎಷ್ಟು ಜನರು ಊರು ಬಿಟ್ಟಿದ್ದಾರೋ, ಎಷ್ಟು ಜನರು ನಾಪತ್ತೆಯಾಗಿದ್ದಾರೋ ಗೊತ್ತಿಲ್ಲ. ಇದು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಇದನ್ನು ರಿಪೀಲ್ ಮಾಡಲಿಕ್ಕೋಸ್ಕರ ಆರ್ಡಿನೆನ್ಸ್ ಆದರೂ ತರಬಹುದಾಗಿತ್ತು. ತಾವು ಅದರ ಕಡೆ ಗಮನ ಹರಿಸಬೇಕಾಗಿತ್ತು. ಈಗ ಹೌಸ್ ನಡೆಯುತ್ತಿರುವುದರಿಂದ ಆರ್ಡಿನೆನ್ಸ್ ತರಲಿಕ್ಕೆ ಬರುವುದಿಲ್ಲ. ತಾವು ರಿಪೀಲ್ ಮಾಡಿಕೊಂಡು ತೆಗೆದುಕೊಂಡು ಬನ್ನಿ, ಅದಕ್ಕೆ ನಾವು ಅಬ್ಜೆಕ್ಷನ್ ಮಾಡುವುದಿಲ್ಲ. This is the fittest case which deserves Ordinance.

ಇನ್ನು ಸಿವಿಲ್ ಮ್ಯಾಟರ್ಸ್ ಬಗ್ಗೆ ಹೇಳಬೇಕೆಂದರೆ 1 ಲಕ್ಷದ 85 ಸಾವಿರ ಕೇಸುಗಳು ಬಹುಶಃ 2 ಲಕ್ಷ ಆಗಿರಬಹುದು. ಇನ್ನು ಕ್ರಿಮಿನಲ್ ಕೇಸ್ 2,30,718, ಇದಕ್ಕೆ ಎಕ್ಸ್‌ಕ್ಯೂಸ್ ಇಲ್ಲ. ನಾನು ಆ ಖಾತೆ ವಹಿಸಿಕೊಂಡಿದ್ದೆ... We have to sit together and find out som means.

2 ಲಕ್ಷದ 30 ಸಾವಿರ ಜನ ಕ್ರಿಮಿನಲ್ ಕೇಸ್‌ನಲ್ಲಿ ಇನ್‌ವಾಲ್ವ್‌ಗಿರುವವರು ಇದ್ದಾರೆ ಅಂದರೆ, ಆ ಒಂದೊಂದು ಕೇಸ್‌ನಲ್ಲಿ 10–15 ಜನ ಇರುತ್ತಾರೆ. ಒಂದೊಂದು ಕೇಸ್‌ನಲ್ಲಿ 100 ಜನರವರೆಗೆ ಬರುತ್ತದೆ. ಅಂದರೆ ಎಷ್ಟು ಲಕ್ಷ ಜನ ಆಗುತ್ತಾರೆ ಎನ್ನುವುದನ್ನು ತಾವೇ ಯೋಚನೆ ಮಾಡಬೇಕು. ತಾವು ಕೋರ್ಟ್‌ಗಳನ್ನು ಏತಕ್ಕೆ ಜಾಸ್ತಿ ಮಾಡಬಾರದು? ಇದನ್ನು ನಾನು ತಮ್ಮನ್ನು ಡೈರೆಕ್ಟ್ ಆಗಿ ಕೇಳುತ್ತಿದ್ದೇನೆ. ನಮ್ಮ ಸರ್ಕಾರ ಇದ್ದಾಗ ನಾವು ಎಷ್ಟು ಕೋರ್ಟ್‌ಗಳನ್ನು ಕೊಟ್ಟಿದ್ದೇವೆ ಅದರಲ್ಲಿದೆ, ತಾವು ತೆಗೆದು ನೋಡಬೇಕು. ತಾಲ್ಲೂಕಿಗೆ ಒಂದೊಂದು ಕೊಡಬೇಕೆಂದು ಮಫ್ಯೂಸಿಲ್ ಏರಿಯಾಸ್‌ನಲ್ಲಿ ಕೊಟ್ಟಿದ್ದೇವೆ. ತಾವು ಅಧಿಕಾರ ವಹಿಸಿಕೊಂಡು ನಾಳೆಗೆ ಒಂಭತ್ತು ತಿಂಗಳಿಗೆ ಬರುತ್ತದೆ. ಎಷ್ಟು ಕಡೆ ಕೋರ್ಟುಗಳನ್ನು ಕೊಟ್ಟಿದ್ದೀರಿ? ದಯಮಾಡಿ ತಿಳಿಸಬೇಕು. ನಾವು ಹಿಂದೆ ಒಂದು ಪಾಲಿಸಿ ಹಾಕಿಕೊಂಡಿದ್ದೆವು...Sanctioning of courts to each taluk. ಅದನ್ನು ತಾವು ಕೈಬಿಟ್ಟಿದ್ದೀರಿ. ಈಗ ತಾವು ಎಷ್ಟು ಕೋರ್ಟ್‌ಗಳನ್ನು ಕೊಡಲಿಕ್ಕೆ ಯೋಚಿಸಿದ್ದೀರಿ. ತಾವು ಬೇರೆ ಕೋರ್ಟ್‌ಗಳನ್ನು ಕೊಡದಿದ್ದರೆ, ಯಾವ ರೀತಿಯಲ್ಲಿ ಡಿಸ್‌ಪೋಸ್ ತೋರಿಸುತ್ತೀರ? ಜನ ಡೀಸೆಂಟ್ರಲೈಸ್ ಆಗಬೇಕು, ನ್ಯಾಯ ಅವರ ಭಾಷೆಯಲ್ಲಿ ಅವರ ಮನೆಯ ಬಾಗಿಲಿಗೆ ಹೋಗಬೇಕೆಂದು ಹೇಳುತ್ತೇವೆ. ಇದನ್ನು ಕಾರ್ಯಗತ ಮಾಡುವುದರಲ್ಲಿ ಏನಾಗಿದೆ? ಕಾರ್ಯಗತ ಮಾಡುವುದರಲ್ಲಿ ಪ್ರಾಮಾಣಿಕತೆ ತೋರಿಸಬೇಕು. ಆದ್ದರಿಂದ, ತಾವು ಎಷ್ಟು ಕೋರ್ಟ್‌ಗಳನ್ನು ಕೊಡುತ್ತೀರ? ಯಾವ ಯಾವ ತಾಲ್ಲೂಕಿಗೆ ಕೊಡುತ್ತೀರ? ಎಷ್ಟು ಕ್ವಾರ್ಟರ್ಸ್ ಕಟ್ಟುತ್ತೀರ? ಎಷ್ಟು ಮನೆಗಳನ್ನು ತಾವು ಒದಗಿಸುತ್ತೀರಾ? ಇದರ ಬಗ್ಗೆ ಎಲ್ಲಾ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದರೆ ನನಗೆ ಅದು ಮನವರಿಕೆಯಾಗುತ್ತದೆ. ಇನ್ನು ಹೆಚ್.ಆರ್.ಸಿ. ಕೇಸ್ ಬಗ್ಗೆ ಹೇಳಬೇಕೆಂದರೆ, ಅದು ತಮಗೆ ಬರುವುದಿಲ್ಲ ಎಂದು ಕಾಣುತ್ತದೆ. ಇದರಲ್ಲಿ 12,924 ಕೇಸುಗಳು ಇವೆ. ಇದರ ಬಗ್ಗೆ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ, ಹೌಸ್ ರೆಂಟ್ ಕಂಟ್ರೋಲ್ ಕೇಸಸ್, ಇದರ ಅಪೀಲ್ಸ್ ನಡೆಸತಕ್ಕವರು ಎಕ್ಸಿಕ್ಯುಟಿವ್, ನಾಟ್ ಜ್ಯುಡಿಷಿಯರಿ. ಹೆಚ್.ಆರ್.ಸಿ. ಅಪೀಲು ಎಷ್ಟು ವರ್ಷ ಇರಬೇಕು?

ಅವರು ಮನೆಗೆ ಬೀಗ ಹಾಕಿಕೊಂಡಿರುತ್ತಾರೆ. 5–6 ಸಾವಿರ ರೂಪಾಯಿ ಬಾಡಿಗೆ ಬಿಲ್ಡಿಂಗ್‌ಗಳು ಇರುತ್ತವೆ. ಒಂದೊಂದು ಕೇಸಿನಲ್ಲಿಯೂ ಎರಡೆರಡು ನಿಮಿಷಗಳ ಕಾಲ ಹೆಚ್.ಆರ್.ಸಿ. ಅಪೀಲ್ ಕೇಳತಕ್ಕವರನ್ನು ಕರೆದು ಕೇಳಿದರೆ, ಎಲ್ಲರಿಗೂ ಅನುಕೂಲವಾಗುತ್ತದೆ. ನ್ಯಾಯ ದೊರಕಿಸುವುದರಲ್ಲಿ, ಅತಿ ವಿಳಂಬವಾಗಿ ನಡೆಯುತ್ತಿದೆ. ಇನ್‌ಸ್ಟೆನ್ಸಸ್ ತಮಗೆ ಎಷ್ಟು ಬೇಕಾದರೂ ಕೊಡುತ್ತೇನೆ. ಇಂತಹವರಿಗೆ ಕೊಡಿ ಎಂದು ಹೇಳತಕ್ಕದ್ದಲ್ಲ, ಅವರು ಕೊಡತಕ್ಕ ನ್ಯಾಯವನ್ನು ಶೀಘ್ರವಾಗಿ ಕೊಡಬೇಕು. ಈ ಅಡ್ಜರ್ನ್‌ಮೆಂಟ್ ಏತಕ್ಕೆ ಬೇಕು? ಪ್ರತಿಯೊಂದು ಕೇಸ್‌ನಲ್ಲಿ ಐದು ನಿಮಿಷದಲ್ಲಿ ಡಿಕ್ಟೇಷನ್ ಕೊಟ್ಟು ಮುಗಿಸಬಹುದು. ಇದು ಅನೇಕ ವರ್ಷಗಳಿಂದ ಹಾಗೇ ಬಂದಿದೆ. ಉದಾಹರಣೆಗೆ ಬೆಂಗಳೂರು ಸಿಟಿಯಲ್ಲಿಯೇ ತೆಗೆದುಕೊಳ್ಳಿ. ಎಷ್ಟೋ ಮನೆಗಳು, ಅಲಾಟಾಗಿ ಅವುಗಳಿಗೆ ಬೀಗ ಹಾಕಿಕೊಂಡು ಅಪೀಲ್ ಹಿಯರಿಂಗ್ ಮಾಡದೆ ಹಾಗೇ ಇವೆ. It requires about five minutes for hearing and five minutes for dictation. But it has become the whims and fancies of the officers who sit there as the Presiding Officers. ಮುಂದುವರಿಯುವುದಾದರೆ, ಜುಡಿಷಿಯರಿಗೆ ಏತಕ್ಕೆ ತೆಗೆದುಕೊಳ್ಳುತ್ತಿದ್ದೀರಿ. ಕರ್ನಾಟಕದಲ್ಲಿ ಇರತಕ್ಕ, ನಗರ ಪ್ರದೇಶದಲ್ಲಿರತಕ್ಕ, ಹೆಚ್.ಆರ್.ಸಿ. ಕೇಸಸ್ ಮತ್ತು ಅಪೀಲ್ಸ್ ಯಾವ ರೀತಿಯಲ್ಲಿ ಇವು ಕೊನೆಗಾಣುತ್ತವೆ? ತಮಗೆ ಮನವರಿಕೆ ಆದರೆ ಟೇಕ್ ಔಟ್. ಇಲ್ಲದಿದ್ದರೆ ಬಹುಶಃ ಸಾಮಾಜಿಕ ನ್ಯಾಯ ದೊರಕಲಾರದು. ತಾವು ಯಾರಿಗೆ ಅಲಾಟ್ ಮಾಡುತ್ತೀರಿ? ರಿಸರ್ವೇಷನ್ ಪಾಲಿಸಿ ಏನಾದರೂ ಇದೆಯೇ? ಹೌಸ್ ರೆಂಟ್ ಕಂಟ್ರೋಲ್ ಕೇಸಸ್‌ನಲ್ಲಿ ಬಡವರಿಗೆ ಸರ್ಟನ್ ಪರ್‌ಸೆಂಟೇಜ್ ಏತಕ್ಕೆ ಇಡಬಾರದು? Based on the income, you must reserve certain percentage for the poor, ಅಥವಾ ಷೆಡ್ಯೂಲ್ ಕ್ಯಾಸ್ಟ್. ಅಲ್ಲಿ ಪ್ರಭಾವ ಬೀರತಕ್ಕದ್ದು, ಪ್ರಭಾವಶಾಲಿ ಯಾರು ಇರುತ್ತಾರೆ ಅವರಿಗೆ ಅಲ್ಲಿ ಸಿಕ್ಕುತ್ತದೆ. ಬೇರೆಯವರಿಗೆ ಯಾರಿಗೂ ಸಿಕ್ಕುವುದಿಲ್ಲ. ತಾವು ಗವರ್ನ್‌ಮೆಂಟ್ ಸರ್ವೆಂಟ್ಸ್‌ಗೆ ಪ್ರಿಫರೆನ್ಸ್ ಕೊಡುತ್ತೀರಿ. ಅವರಿಗೆ ಬೇಕಾದರೆ ಕಟ್ಟಿಸಿ ಕೊಡಿ, ಹುಡ್ಕೋ ಸ್ಕೀಮ್ ಇದೆ, ಗವರ್ನ್‌ಮೆಂಟ್ ಕ್ವಾರ್ಟರ್ಸ್ ಕಟ್ಟಿಸಿ. ತಾವು ಪ್ರಿವಲೇಜ್ಡ್ ಕ್ಲಾಸ್‌ಗೆ ಪ್ರಿವಿಲೇಜ್ ಕೊಡಲಿಕ್ಕೆ ಹೋಗುತ್ತಿದ್ದೀರಿ... A deeper study is necessary on this point as to whether it should be handled by the Executive or the judiciary. ಇದರ ಕಡೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೋಟಾರ್ ವೆಹಿಕಲ್ಸ್ ಕೇಸಸ್. 8,475 ಕೇಸುಗಳು, ಇವು ಆಕ್ಸಿಡೆಂಟ್ ಕೇಸುಗಳು. ಅವರು ಸತ್ತು ವೈಕುಂಠದಲ್ಲಿದ್ದರೂ ಅವರುಗಳ ಇನ್‌ಷ್ಯೂರೆನ್ಸ್ ಸೆಟಲ್ ಆಗಿಲ್ಲ. ಅದಕ್ಕೆ ಏನಾದರೂ ಒಂದು ಪ್ರಿಸೀಡೆನ್ಸ್ ಹಾಕಬೇಕು. ಎಲ್ಲಾ ಕೇಸುಗಳಿಗಿಂತಲೂ ಫಸ್ಟ್ ಇವುಗಳನ್ನು ತೆಗೆದುಕೊಳ್ಳತಕ್ಕಂತಾಗಿದ್ದು ನಿಯಮಾವಳಿ ಚೌಕಟ್ಟಿನಲ್ಲಿ ಸಾಧ್ಯವೇ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿದರೆ ಒಳ್ಳೆಯದು.

ಇನ್ನು ಲ್ಯಾಂಡ್ ಅಕ್ವಿಸಿಷನ್ ಕೇಸುಗಳ ಬಗ್ಗೆ ಹೇಳಬೇಕೆಂದರೆ, 19,667 ಕೇಸುಗಳಿವೆ. ನನ್ನ ಕಾನ್‌ಸ್ಟಿಟ್ಯುಯೆನ್ಸಿ ವಿಚಾರ ಹೇಳಬೇಕೆಂದರೆ, ಅಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಮಾಡಿದ್ದಾರೆ. ಅಲ್ಲಿ ಅಕ್ವೈರ್ ಮಾಡಿ ಬಿಲ್ಡಿಂಗ್ಸ್ ಬಂದಿದೆ, ಆ ಬಿಲ್ಡಿಂಗ್ ಇಂಡಸ್ಟ್ರಿಯಲಿಸ್ಟ್‌ಗೆ ಅಲಾಟ್ ಮಾಡಿ ಅದು ನಡೆಯುತ್ತಿದೆ. ಆದರೆ ಕಾಂಪೆನ್‌ಸೇಷನ್ ಇದುವರೆಗೂ ಕೊಟ್ಟಿಲ್ಲ. ನಾಲ್ಕು ವರ್ಷ ಆಯಿತು. ಅದರ ಬಡ್ಡಿ ಎಷ್ಟಾಗುತ್ತದೆ, ಲೆಕ್ಕ ಹಾಕಿದ್ದೀರಾ? ಇದು ನೇರವಾದ ಹೆಡ್‌ನಲ್ಲಿ ಇರತಕ್ಕ ಹಣ. ಯಾರು ಲ್ಯಾಂಡ್ ಅಕ್ವಿಸಿಷನ್ ಮಾಡತಕ್ಕ ಅಧಿಕಾರಿ ಇರುತ್ತಾರೆ ಅವರ ಮೇಲೆ ಅದರ ಜವಾಬ್ದಾರಿ ಹಾಕಿ. ಆತ ಫಸ್ಟ್ ಟ್ರೆಜರಿಯಲ್ಲಿ ಹಣ ಇಟ್ಟು ಅನಂತರ ಪೊಸೆಷನ್ ತೆಗೆದುಕೊಳ್ಳಬೇಕು. ನಾನು ಪೂರರ್ ಸೆಕ್ಷನ್‌ಗೆ, ಅಂಥ ಕಡೆ ಹೆಚ್ಚು ಇನ್‌ಸಿಸ್ಟ್ ಮಾಡಲಿಕ್ಕೆ ಹೋಗುವುದಿಲ್ಲ. ಇಂಥ ಸ್ಕೀಮುಗಳಲ್ಲಿ, ಉದಾಹರಣೆಗೆ ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಲ್ಲಿ ಸಾವಿರಾರು ಎಕರೆ ಅಕ್ವೈರ್ ಮಾಡಿಕೊಳ್ಳಬೇಕಾಗುತ್ತದೆ, ಅಂಥ ಸಂದರ್ಭದಲ್ಲಿ ಅಲ್ಲಿ ವಿಶೇಷವಾಗಿ ಅಸಿಸ್ಟೆಂಟ್ ಕಮಿಷನರ್ ಅಥವಾ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಯಾರು ಇರುತ್ತಾರೆ ಕೌಂಟರ್ ಸಿಗ್‌ನೇಚರ್ ಮಾಡತಕ್ಕವರು ಯಾರು ಇರುತ್ತಾರೆ ಅವರಿಗೆ ತಾವು ಕಡ್ಡಾಯವಾಗಿ ಹೇಳಬೇಕು. ಅಷ್ಟೇ ಅಲ್ಲ, ಅದರ ಮೇಲೆ ತಾವು ನಿಗಾ ಕೂಡ ಇಡಬೇಕು. ಅದು ಕಾನೂನು ಇಲಾಖೆಯೇ ಇರಬಹುದು, ಕಂದಾಯ ಇಲಾಖೆಯೇ ಇರಬಹುದು, ಅಥವಾ ಬೇರೆ ಯಾವುದೇ ಇಲಾಖೆ ಇರಬಹುದು. ಇಲ್ಲಿ ಏನು ಹೇಳಿದ್ದೀರೆ ಎಂದರೆ "A close watch is kept on the progress of litigation at every stage". ಇದನ್ನು ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದು ಅನಾವಶ್ಯಕ. ನಾನೇ ಗೌರ್ನ್‌ಮೆಂಟ್ ಪ್ಲೀಡರ್ ಆಫೀಸಿನಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಸಿವಿಲ್ ಪ್ರೊಸೀಜರ್ ಕೋಡಿನ ಸೆಕ್ಷನ್ 80ರ ಪ್ರಕಾರ ನೋಟೀಸನ್ನು ಕೊಟ್ಟಾಗ ನಾವು ಅವರಿಗೆ ಪ್ರಾಮಾಣಿಕವಾಗಿ ಉತ್ತರವನ್ನು ಕೊಟ್ಟರೆ ಸುಮಾರು 50 ಭಾಗ ಕೇಸುಗಳು ಹೊರಟುಹೋಗುತ್ತವೆ. He will not be the biggest litigant. ಆದರೆ ಸಿವಿಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 80ರ ಪ್ರಕಾರ ಪ್ರತಿಸಾರಿ ಎರಡೆರಡು ತಿಂಗಳು ಕೊಟ್ಟರೂ ಕೂಡ ನಿಮಗೆ ಅವರಿಂದ ಏನೂ ಲಾಭ ಸಿಕ್ಕುವುದಿಲ್ಲ

ಇವನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಇವತ್ತು ಯಾವ ಅಧಿಕಾರಿಗಳೂ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. They are anxious to shift their responsiblities on the higher authorities. ನನಗೆ ಏತಕ್ಕೆ ಈ ಜವಾಬ್ದಾರಿ ಬೇಕು. ಮೇಲಿನವರು ಮಾಡಿಕೊಳ್ಳಲಿ ಎಂದು ಕೆಳಗಿನವರು ಅಂದುಕೊಳ್ಳುವುದು ಆಗಿದೆ. ಉದಾಹರಣೆಗೆ ಹೇಳುವುದಾದರೆ, ಜಿಲ್ಲಾಧಿಕಾರಿಗಳು ನಾನು ಏತಕ್ಕೆ ಮಾಡಬೇಕು ? ವಿಭಾಗಾಧಿಕಾರಿಗಳೇ ಮಾಡಿಕೊಳ್ಳಲಿ ಎಂದು ಹೇಳುವುದು ; ವಿಭಾಗಾಧಿಕಾರಿಗಳು ನಾನು ಏತಕ್ಕೆ ಮಾಡಬೇಕು ? ಸರ್ಕಾರದವರೇ ಮಾಡಿಕೊಳ್ಳಲಿ ಎಂದು ಹೇಳುವುದು ; ಸರ್ಕಾರದವರು ನಾವು ಏತಕ್ಕೆ ಮಾಡಬೇಕು ? ಕಾನೂನು ಇಲಾಖೆಯೇ ಮಾಡಿಕೊಳ್ಳಲಿ ಎಂದು ಹೇಳುವುದು ; ದುಡ್ಡಿನದಾದರೆ ಹಣಕಾಸಿನ ಇಲಾಖೆಗೆ ಕಳಿಸಿಕೊಡಿ ಎಂದು ಕಾನೂನು ಇಲಾಖೆಯವರು ಹೇಳುತ್ತಾರೆ. ಇಷ್ಟೆಲ್ಲಾ ಆಗುವ ಹೊತ್ತಿಗೆ ಕನಿಷ್ಠ 5 ವರ್ಷವಾದರೂ ಆಗಿರುತ್ತದೆ. ಆದ್ದರಿಂದ ನಾನು ತಮಗೆ ಹೇಳುತ್ತೇನೆ, ಇಂಥ ಒಂದು ಮನೋಭಾವನೆಯನ್ನು ಅಧಿಕಾರಿಗಳ ಮನಸ್ಸಿನಿಂದ ಹೋಗಲಾಡಿಸದಿದ್ದರೆ ಪ್ರತಿವರ್ಷ ಈ ಕೇಸುಗಳ ಪೆಂಡೆನ್ಸಿ ಜಾಸ್ತಿಯಾಗುತ್ತಾ ಹೋಗುತ್ತದೆ. ಇದರ ಜೊತೆಗೆ ಪ್ಲೀಡಿಂಗ್ ಬೇರೆ. ಗೌರ್ನ್‌ಮೆಂಟ್ ಪ್ಲೀಡರ್‌ಗಳು, ಅಸಿಸ್ಟೆಂಟ್ ಗೌರ್ನ್‌ಮೆಂಟ್ ಪ್ಲೀಡರ್‌ಗಳು ಕಳುಹಿಸತಕ್ಕ ಪ್ಲೀಡಿಂಗ್ಸ್ ತಮ್ಮ ಕಾನೂನು ಇಲಾಖೆಗೆ ಬಂದು ಅವು ಅಪ್ರೂವ್ ಆಗದಿದ್ದರೆ ಬಹಳ ಕಷ್ಟವಾಗುತ್ತದೆ. ಅದುವರೆಗೂ ಇವರು ಅಡ್ಜರ್ನ್‌ಮೆಂಟ್ ಮಾಡುತ್ತಾರೆ. ನಾವೇ ಹೇಳುತ್ತೇವೆ, ಅಡ್ಜರ್ನ್‌ಮೆಂಟ್ ಕೇಳಬಾರದು ಎಂದು. ಇದು ನ್ಯಾಯಾಂಗದಲ್ಲಿರತಕ್ಕ ಮೂಲ ತೊಡಕು. ಇವತ್ತು ಅಡ್ಜರ್ನ್‌ಮೆಂಟ್ ಕೇಳುವವರು ಯಾರು ? ಎಂದರೆ ಖಾಸಗೀ ವಕೀಲರಲ್ಲ, ನಮ್ಮ ಸರ್ಕಾರೀ ವಕೀಲರು. ಏತಕ್ಕೆಂದರೆ, ಸರ್ಕಾರದಿಂದ ಪ್ಲೆಯಿಂಟ್ ಅಪ್ರೂವ್ ಆಗಿ ಬಂದಿಲ್ಲ, ಡಿಫೆನ್ಸ್ ಸ್ಟೇಟ್‌ಮೆಂಟ್ ಇನ್ನೂ ಅಪ್ರೂವ್ ಆಗಿ ಬಂದಿಲ್ಲ, ಇಷ್ಯೂಸ್ ಇನ್ನೂ ಅಪ್ರೂವ್ ಆಗಿ ಬಂದಿಲ್ಲ ಎಂದು ಪ್ರತಿಯೊಂದು ಸ್ಟೇಜ್‌ನಲ್ಲೂ ತೊಂದರೆಗಳಿರುತ್ತವೆ. ಇದನ್ನು ಸರಳ ಮಾಡುವುದು ಹೇಗೆ ? ಇದಕ್ಕೆ ನಾನು ಹೇಳುತ್ತೇನೆ, ಇದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಿ. ಇವಕ್ಕೆ ಸಿವಿಲ್ ಪ್ರೊಸೀಜರ್ ಕೋಡ್ ತಿದ್ದುಪಡಿ ಏನೂ ಆಗಬೇಕಾಗಿಲ್ಲ. These are procedural matters wherein you can exercise your discretion for the speedy disposal of Government cases. ಈ ಕೇಸುಗಳನ್ನು ಯಾವ ರೀತಿ ಆದಷ್ಟು ಶೀಘ್ರವಾಗಿ ಇತ್ಯರ್ಥಮಾಡಬೇಕೆಂದು ಆಸಕ್ತಿಯಿಂದ, ದಕ್ಷತೆಯಿಂದ ಕೆಲಸ ಮಾಡುವವರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿ, ಅವರಿಂದ ಒಂದು ವರದಿಯನ್ನು ತರಿಸಿಕೊಳ್ಳಿ. ನೀವು ಎರಡು ತಿಂಗಳೊಳಗಾಗಿ ಸಿವಿಲ್ ಪ್ರೊಸೀಜರ್ ಕೋಡ್‌ನ ಪ್ರಕಾರ ಉತ್ತರವನ್ನು ಕೊಡದಿದ್ದರೆ ಯಾರ ಮೇಲೆ ಜವಾಬ್ದಾರಿಯನ್ನು ಹಾಕಬೇಕು ? ಯಾರಿಂದ ದಂಡ ವಸೂಲ್ಮಾಡಬೇಕು ? ಕಾಲಕ್ಕೆ ಸರಿಯಾಗಿ ಪ್ಲೆಯಿಂಟ್ ಆಗಲಿ, ರಿಟನ್ ಸ್ಟೇಟ್‌ಮೆಂಟ್ ಆಗಲಿ ಸರ್ಕಾರದಿಂದ ಅಪ್ರೂವ್ ಆಗಿ ಬರದಿದ್ದರೆ ಇದಕ್ಕೆ ಯಾರನ್ನು ಜವಾಬ್ದಾರರನ್ನಾಗಿ ಮಾಡಬೇಕೆಂದು ತೀರ್ಮಾನ ಮಾಡಬೇಕು. ಆಗ ಕೇಸುಗಳು ಕಡಿಮೆಯಾಗುತ್ತವೆ. ಸ್ವಾಮಿ, ಇವತ್ತು ಕೇಸ್ ಹಾಕಿ ಡಿಕ್ರಿ ತೆಗೆದುಕೊಳ್ಳುವುದಕ್ಕೇ 10–15 ವರ್ಷ ಆಗುತ್ತದೆ. ಕಷ್ಟಪಟ್ಟು ಡಿಕ್ರಿ ತೆಗೆದುಕೊಂಡಮೇಲೆ ಎಕ್ಸಿಕ್ಯೂಷನ್‌ಗೆ ಬಂದಾಗ ಪ್ರತಿಯೊಂದು ಕೇಸಿಗೂ ಒಂದೇ ಆರ್ಡರ್. ಅದು ಏನೆಂದರೆ, ಅಸಿಸ್ಟೆಂಟ್ ಕಮಿಷನರ್‌ರವರ ಟೇಬಲ್, ಕುರ್ಚಿ, ಫ್ಯಾನ್, ಲೇಖನಿಗಳನ್ನು ಅಟ್ಯಾಚ್‌ಮೆಂಟ್ ಮಾಡುವುದು. ಇದು ತಮಗೂ ಗೊತ್ತಿದೆ. ಇವತ್ತು ತಾವು ಅಲ್ಲಿ ಕುಳಿತಿರುವುದರಿಂದ ತಮಗೆ ಇದು ಗೊತ್ತಾಗುವುದಿಲ್ಲ. ಇವತ್ತು ಸರ್ಕಾರದ ವಿರುದ್ಧ ಅಟ್ಯಾಚ್‌ಮೆಂಟ್ ಮಾಡುವುದು ಬಹಳ ಸುಲಭ ಮಾಡಿಕೊಂಡಿದ್ದಾರೆ. ಇದು ನಿಲ್ಲಬೇಕು. ಇದರ ಬಗ್ಗೆ ಜನರು ಲಘುವಾಗಿ ತಿಳಿದುಕೊಳ್ಳುವುದಕ್ಕೆ ಅವಕಾಶವನ್ನು ಕೊಡಬೇಡಿ. ಇವತ್ತು ಚರಸ್ವತ್ತುಗಳನ್ನು ಅಟ್ಯಾಚ್‌ಮೆಂಟ್ ಮಾಡಿಸುತ್ತಾರೆ, ಅನಂತರ ಒಂದೆರಡು ವರ್ಷ ಕಳೆದ ಮೇಲೆ ಸರ್ಕಾರದ ಸೈಟು ಎಲ್ಲಿದೆ, ಸರ್ಕಾರೀ ಕಟ್ಟಡ ಎಲ್ಲಿದೆ ಎಂದು ನೋಡಿ ಜನರು ಅಟ್ಯಾಚ್‌ಮೆಂಟ್ ಮಾಡಿಸುವುದಕ್ಕೆ ಪ್ರಾರಂಭ ಮಾಡುತ್ತಾರೆ. Without giving room for the court to take such recourse, please see that orders are properly executed and amounts are paid to the respective parties. ಆಗ ಅವರಿಗೂ ನ್ಯಾಯ ಸಿಕ್ಕುತ್ತದೆ. ಇಲ್ಲದಿದ್ದರೆ ಈ ಕಡೆ ಜಮೀನೂ ಹೋಗುತ್ತದೆ, ಮನೆಯೂ ಹೋಗುತ್ತದೆ, ಆ ಕಡೆ ದುಡ್ಡೂ ಇಲ್ಲ. ಹಾಗಾದರೆ ಅವರು ಎಲ್ಲಿಗೆ ಹೋಗಬೇಕು ? ವೈಕುಂಠಕ್ಕೆ ಹೋಗಬೇಕೆ ? ಆದ್ದರಿಂದ ಇಂಥ ಕೇಸುಗಳಲ್ಲಿ ಜನರಿಗೆ ಕೊಡಬೇಕಾದ ಪರಿಹಾರವನ್ನು ದಯವಿಟ್ಟು ಕೊಡಿಸಿ. " During the year under Report out of 18,587 writ petitions received 6,115 have been disposed of leaving a balance of 12,472. " ಇದು Land Reforms cases, High Court ನಲ್ಲಿ ಪೆಂಡಿಂಗ್ ಇರತಕ್ಕ ವಿಚಾರ. ಅಂದರೆ. ಇದು ಒಂದು ತಿಂಗಳಿಗೆ 1500 ರಿಟ್ ಪಿಟಿಷನ್ಸ್ ಆದಂತಾಯಿತು. ಇವರಲ್ಲಿ 500 ಕಳುಹಿಸಬಹುದು. ಮತ್ತೆ 12 ಸಾವಿರ ರಿಟ್ ಪಿಟಿಷನ್‌ಗಳು ಹಾಗೆಯೇ ಬಾಕಿ ಉಳಿಯುತ್ತವೆ. ಈ ರೀತಿ ಆದರೆ ಈ ಪೆಂಡಿಂಗ್ ಕೇಸುಗಳು ಯಾವ ಯುಗದಲ್ಲಿ ಮುಗಿಯುತ್ತವೋ ಗೊತ್ತಿಲ್ಲ. ಈ ಯುಗದಲ್ಲಂತೂ ಮುಗಿಯುವುದಕ್ಕೆ

ಸಾಧ್ಯವಿಲ್ಲ. ಇದನ್ನು ನೋಡಿದರೆ ಇವತ್ತು ಕ್ಲೈಂಟ್ ಆದವನು ಸತ್ತು, ಅವರ ಮಗ ಸತ್ತು. ಅವನ ಮೊಮ್ಮಗ ಕೇಸ್‌ಗೆ ಅಪಿಯರ್ ಆಗಬೇಕಾಗಬಹುದು.

ಶ್ರೀ ಕೆ. ಹೆಚ್. ರಂಗನಾಥ್.—ಮುಂದಿನ ಯುಗದಲ್ಲಿ ಕೋರ್ಟ್ ಇರುತ್ತವೆಂದು ಯಾರಿಗೆ ಗೊತ್ತು ? ಬಹುಶಃ ಕೋರ್ಟೇ ಇರುವುದಿಲ್ಲವೆಂದು ಕಾಣುತ್ತದೆ.

ಶ್ರೀ ವೈ. ರಾಮಕೃಷ್ಣ.—ಅಂದರೆ ಮೂರು ತಲೆವಾರು ಕಳೆದರೂ ಅವನಿಗೆ ಪರಿಹಾರ ಸಿಕ್ಕುವುದು ಕಷ್ಟವಿದೆ. ಆದ್ದರಿಂದ ತಮಗೆ ಒಂದು ಮಾತನ್ನು ಹೇಳುತ್ತೇನೆ. ತಾವು ತಮ್ಮಲ್ಲಿರತಕ್ಕ ಶಕ್ತಿಯನ್ನೆಲ್ಲಾ ಉಪಯೋಗ ಮಾಡಿ ರಾಜ್ಯಾಂಗಬದ್ಧವಾಗಿ ಏನು ಮಾಡಬೇಕೆಂಬ ಬಗ್ಗೆ ತಾವು ಕೂತು ಯೋಚನೆ ಮಾಡಿ. ತಮ್ಮ ಕಷ್ಟ ಏನೆಂದು ನನಗೆ ಗೊತ್ತು. ಇವೆಲ್ಲಾ ಒಂದೊಂದು ಸಮಸ್ಯೆಗಳು. ತಾವು ಲಾ ಪ್ರೊಫೆಸರ್ ಆಗಿ ಕೆಲಸ ಮಾಡಿದ್ದೀರಿ. ಅಡ್ವೋಕೇಟ್ ಆಗಿ ಕೆಲಸ ಮಾಡಿದ್ದೀರಿ. ಕ್ಲೈಂಟ್ಸ್ ಕಷ್ಟ ಏನೆಂದು ತಮಗೂ ಗೊತ್ತಿದೆ. ಆದ್ದರಿಂದ ಹೇಳುತ್ತಿದ್ದೇನೆ. ತಮಗೆ ಈ ದಿವಸ ಇಂಥ ಒಂದು ಅವಕಾಶ ಸಿಕ್ಕಿರುವುದರಿಂದ ತಾವೇ ಹೋಗಿ ಅಲ್ಲಿ ಕೂತು ಮಾತನಾಡಿ ಒಂದು ಸ್ಪೆಷಲ್ ಬೆಂಚನ್ನು ಕ್ರಿಯೇಟ್ ಮಾಡುವಂತೆ ಹೇಳಿ. ಅದರ ಕೀರ್ತಿಯನ್ನು ತಾವೇ ತೆಗೆದುಕೊಳ್ಳಿ. ಸ್ವಾಮಿ, ಈ ಲ್ಯಾಂಡ್ ರೀಫಾರಂಸ್ ಕೇಸ್‌ನಲ್ಲಿ ಅಧ್ಯಕ್ಷರು ಎವಿಡೆನ್ಸನ್ನು ರೆಕಾರ್ಡ್ ಮಾಡಿಲ್ಲ. It affects natural justice. ಇದು ಮಾಡಿರುವುದು ಅನ್ಯಾಯ. ಈ ಜಮೀನು ಇಂಥವರಿಗೇ ಹೋಗಬೇಕೆಂದು ಫೈನಲ್ ಆರ್ಡರ್ ಮಾಡುವ ಅಧಿಕಾರ ಅವರಿಗೆ ಇಲ್ಲ. ಆದ್ದರಿಂದ ಈ 35–40 ಸಾವಿರ ಕೇಸುಗಳು ಏನಿವೆ ಇವುಗಳನ್ನು ಕ್ಯಾಟೆಗರೈಸೇಷನ್ ಮಾಡಿಸಿ ಒಂದು ಸ್ಪೆಷಲ್ ಬೆಂಚನ್ನು ಕ್ರಿಯೇಟ್ ಮಾಡಿ ಆದಷ್ಟು ಶೀಘ್ರವಾಗಿ ಇದನ್ನು ಇತ್ಯರ್ಥ ಮಾಡಿ ಎಂದು ತಾವು ಕೇಳಿಕೊಂಡರೆ ಅವರು ಮಾಡಿಕೊಡುತ್ತಾರೆ.

ಇನ್ನು ಡ್ರಾಫ್ಟಿಂಗ್ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರ ಮಾಡಿರತಕ್ಕ ಕೆಲಸಕ್ಕೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಆದರೆ ಈ ಸರ್ಕಾರವನ್ನಲ್ಲ. 1982–83 ನೇ ಸಾಲಿನಲ್ಲಿ ರಾಜ್ಯದ ಶಾಸಕಾಂಗದಿಂದ ಅಂಗೀಕೃತವಾಗಿ ರಾಜ್ಯಪಾಲರಿಂದ ಪ್ರಾಖ್ಯಾಪಿಸಲ್ಪಟ್ಟ 37 ಅಧಿನಿಯಮ ಹಾಗೂ 10 ಆಧ್ಯಾದೇಶಗಳನ್ನು ಹೊರಡಿಸಿರುವುದರಿಂದ ನಾನು ಹಿಂದಿನ ಸರ್ಕಾರವನ್ನು ಅಭಿನಂದಿಸ ಬೇಡವೆ ? ಈವತ್ತು ಸ್ವಾಮಿ, ಯಾವ ಬಿಲ್ ಆಗಲಿ, ನಮ್ಮ ಸರ್ಕಾರವೇ ಇರಲಿ, ನಿಮ್ಮ ಸರ್ಕಾರವೇ ಇರಲಿ. ಉಪಯುಕ್ತವಾಗಿ ಸಲಹೆಗಳನ್ನು ಸ್ವೀಕರಿಸಿ ಕಾನೂನುಗಳನ್ನು ಮಾಡಿದರೆ ಶಾಶ್ವತವಾಗಿ ಇರುತ್ತದೆ. ಹರಿ ಬರಿಯಾಗಿ ಕಾನೂನನ್ನು ತಂದು ಹರಿಬರಿಯಾಗಿ ಪಾಸ್ ಮಾಡತಕ್ಕಂಥ ಪ್ರವೃತ್ತಿ ಒಳ್ಳೆಯದಲ್ಲವೆಂದು ಹೇಳುತ್ತೇನೆ. I don't want to comment upon the Bills that are introduced. ಇಷ್ಟು ಹೇಳಿದರೆ ಸಾಕು ಎಂದು ಕಾಣಿಸುತ್ತದೆ. ಮತ್ತು ಪಬ್ಲಿಕೇಶನ್ ವಿಂಗ್ ವಿಚಾರದಲ್ಲಿ ಹೇಳಬೇಕಾಗಿದೆ. ಕಳೆದ ವರ್ಷ ಈ ಲಾಂಗ್‌ವೇಜ್ ಕಮಿಷನ್ ಅನ್ನು ರದ್ದು ಮಾಡಿದ್ದಕ್ಕೆ ಕಾರಣವೇನೆಂದು ಹೇಳಿದರೆ, ಲಾಂಗ್‌ವೇಜ್ ಕಮಿಷನರ್‌ರವರಿಗೆ ಕೊಟ್ಟಿರತಕ್ಕಂಥ ಟರ್ಮ್ಸ್ ಮತ್ತು ರೆಫರೆನ್ಸ್‌ನಂತೆ ಅವರು ತಮ್ಮ ಕರ್ತವ್ಯವನ್ನು ಸಂಪೂರ್ಣವಾಗಿ ದಕ್ಷತೆಯಿಂದ ಮಾಡಿದ್ದಾರೆ. ಆದ್ದರಿಂದ ಅವರ ಅವಶ್ಯಕತೆ ಇರಲಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ತಮ್ಮ ಭಾಷಣದಲ್ಲಿ ಕಾನೂನು ಸಲಹೆಗಳ ನಿಘಂಟು 40,000 ವರ್ಡ್ಸ್ ಇರತಕ್ಕಂಥದ್ದು ಪ್ರಿಪೇರ್ ಮಾಡಿದ್ದಾರೆ. Prepared by 40,000 words and phrases if my information is correct. It is still gathering dust perhaps in the office of the Law Minister. Am I correct ? ಅದನ್ನು ಶೀಘ್ರವಾಗಿ ಪ್ರಿಂಟಿಂಗ್‌ಗೆ ಕಳುಹಿಸಿಕೊಡಿ. ದಯವಿಟ್ಟು ಅದು ಡಸ್ಟ್ ಆಗುವುದಕ್ಕೆ ಬಿಡಬೇಡಿ. ಎಲ್ಲವೂ ಕನ್ನಡದಲ್ಲಿಯೇ ತೀರ್ಮಾನವಾಗಬೇಕೆಂದು ಇರುವುದರಿಂದ ದಯವಿಟ್ಟು ಇದನ್ನು ಕಳುಹಿಸಿಕೊಡುವ ಬಗ್ಗೆ ತಮ್ಮ ಉತ್ತರದಲ್ಲಿ ಹೇಳುತ್ತೀರೆಂದು ನಂಬಿರುತ್ತೇನೆ.

ಇನ್ನು ಲೇಬರ್ ಟ್ರಿಬ್ಯೂನಲ್ಸ್‌ನಲ್ಲಿ ಬಹಳ ಕಾಲದಿಂದ ಕೇಸ್‌ಗಳು ಪೆಂಡಿಂಗ್ ಇದೆ. ಕಾರ್ಮಿಕರ ಕೇಸುಗಳನ್ನು ತೆಗೆದುಕೊಳ್ಳುವಾಗ ಈವತ್ತಿನ ದಿವಸ ಹೇಳಬೇಕಾದರೆ. ಟ್ರಿಬ್ಯೂನಲ್ಸ್‌ಗಳಲ್ಲಿ ಜಡ್ಜ್‌ಗಳು ಇಲ್ಲದೆ ಕೇಸ್‌ಗಳು ಹಾಗೆಯೇ ಉಳಿದಿವೆ. ಆದ್ದರಿಂದ ಬಹಳ ಶೀಘ್ರವಾಗಿ ಜಡ್ಜ್‌ಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರೆಂದು ನಾನು ತಿಳಿದುಕೊಂಡಿರುತ್ತೇನೆ.

ಮತ್ತೊಂದು ವಿಚಾರ ಹೇಳಿದಿರಿ : ಕೋರ್ಟ್ ಫೀಸ್ ತೆಗೆದುಬಿಡುತ್ತೇವೆಂದು. ಇದು ಬಹಳ ಕಾಲ ದಿಂದಲೂ ಇದೆ. ಹಿಂದಿನ ಸರ್ಕಾರದಿಂದ ಪೆಂಡಿಂಗ್ ಇದೆ. ಏತಕ್ಕೆ ಇನು ಆಯಿತು ಎಂದರೆ ಡಿಸ್ಟ್ರಿಕ್ಟ್ ಜಡ್ಜಸ್ ಸಂಖ್ಯೆ ಬಹಳ ಕಡಿಮೆ ಇದೆ. ಬಹಳ ಕಾಲದಿಂದ ಭರ್ತಿ ಮಾಡುವುದಕ್ಕಾಗಿ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ರೆಫರ್‌ಮಾಡಿ, ಮುನ್‌ಸೀಫರ್‌ಗಳನ್ನು ನೇಮಕಮಾಡಿದ್ದೇವೆ. ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನು ನೇಮಕ ಮಾಡಲಿಕ್ಕೆ ತಕ್ಷಣವೇ ಕಳುಹಿಸಿ ಕೊಡಿ. ಅದರಲ್ಲಿ ತಪ್ಪೇನೂ ಇಲ್ಲ. ಇವಕ್ಕೆ ಹೇಳಬೇಕೆಂದರೆ ಇಲ್ಲಿ ಅವರಿಗೆ ಕೊಡತಕ್ಕಂಥ ಸಂಬಳ ಬಹಳ ಕಡಿಮೆ. ಯಾವುದೋ ಕಾಲವಲ್ಲಿ ತಿಂಗಳಿಗೆ ಮುನ್ನೂರು ರೂಪಾಯಿ

ಕೊಡುತ್ತಿರುವುದು ಇರುತ್ತದೆ. ಆದ್ದರಿಂದ ಡಿಸ್ಟ್ರಿಕ್ಟ್ ಗೌವರ್ನ್‌ಮೆಂಟ್ ಪ್ಲೀಡರ್‌ಗಳಿಗೆ ಕೊಡತಕ್ಕಂಥ ಸಂಬಳವನ್ನು ದಯವಿಟ್ಟು ರಿವೈಸ್ ಮಾಡಿ.

ಶ್ರೀ ಎಂ. ಮಲ್ಲಪ್ಪ.—ಡಿಸ್ಟ್ರಿಕ್ಟ್ ಗೌವರ್ನ್‌ಮೆಂಟ್ ಪ್ಲೀಡರ್‌ಗಳು ಖಾಸಗಿಯಾಗಿ ಮೊಕದ್ದಮೆಗಳನ್ನು ನಡೆಸಲು ಅವಕಾಶ ಇದೆ. ಅವರಿಗೆ ಕೊಡತಕ್ಕಂಥದ್ದು ಗೌರವಧನ.

ಶ್ರೀ ವೈ. ರಾಮಕೃಷ್ಣ.—ಈಗ ಮತ್ತೊಂದು ಮಾತನ್ನು ಹೇಳುತ್ತೇನೆ, ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಈ ಸ್ಟೈಪಂಡರಿ ಸ್ಕೀಮ್ ಬಗ್ಗೆ ಹೇಳುವುದಾದರೆ, ಇಡೀ ಇಂಡಿಯಾ ದೇಶದಲ್ಲಿ ಯಾವ ರಾಜ್ಯ ಸರ್ಕಾರ ಕೂಡ ಮಾಡಿರಲಿಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಒಬ್ಬರಿಗೆ 5 ನೂರು ರೂಪಾಯಿಗಳನ್ನು ಸ್ಟೈಪಂಡರಿ ಕೊಟ್ಟು, ತರಬೇತಿ ಕೊಟ್ಟು, ನಾಲ್ಕು ವರ್ಷಗಳ ಕಾಲ ಅವರ ಭಾರವನ್ನು ವಹಿಸಿಕೊಂಡು ಟ್ರೈನಿಂಗ್ ಕೊಟ್ಟಿದೆ. ಇದು ಬಹಳ ಶ್ಲಾಘನೀಯವಾದ ಕಾರ್ಯ. ಇದನ್ನು ಮುಂದುವರೆಸಿಕೊಂಡು ಹೋಗಬೇಕು. ಸದ್ಯಕ್ಕೆ ಈ ಹೌಸಿಂಗ್ ಸ್ಕೀಮನ್ನು ಮುಂದುವರೆಸಲು ಕೈಬಿಟ್ಟ ಹಾಗೆ ಇದನ್ನು ಕೈಬಿಡಬೇಡಿ. ಇದರಲ್ಲಿ ಜಸ್ಟೀಸ್ ಇದೆ. ಇದನ್ನು ನಾವು 143 ಜನರಿಗೆ ಕೊಟ್ಟಿದ್ದೆವು. ನೀವು ಇನ್ನೂರು ಜನರಿಗೆ ಕೊಡಿ. Show your generosity. Show that your Government is having more generosity towards stipendary graduates. Then only you deserve congratulations, not otherwise.

ಇನ್ನು ಲೀಗಲ್ ಏಡ್ ವಿಚಾರದಲ್ಲಿ, ಬಡಜನರ ವಿಚಾರದಲ್ಲಿ ಬಹಳ ಅಭಿಮಾನ ಇರತಕ್ಕಂಥವರು, ಸೇವಾ ಮನೋಭಾವ ಉಳ್ಳವರು. ಎಲ್ಲರಿಗೂ ಸೋಶಿಯಲ್ ಜಸ್ಟೀಸ್ ದೊರಕಬೇಕೆಂದು ಹಿಂದಿನ ಸರ್ಕಾರವಿದ್ದಾಗ ಒಂದು ಕಾನೂನನ್ನು ಪಾಸ್ ಮಾಡಿದ್ದೆವು. ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ಸರ್ಕಾರ ಬದಲಾಯಿತು. ತಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಬಡವರಲ್ಲಿ ಅನುಕಂಪವಿದ್ದರೆ, ಬಡವರಿಗಾಗಿ ಕೆಲಸ ಮಾಡಬೇಕು ಎನ್ನುವ ಮನೋಭಾವನೆ ಇದ್ದರೆ, ಅಂಥವರನ್ನು ಹುಡುಕಿ ಅನುಕೂಲತೆಗಳನ್ನು ಕಲ್ಪಿಸಬೇಕೆಂಬ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಮುಂದುವರಿದ ದೇಶಗಳಾದ ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ಬೇರೆ ಬೇರೆ ದೇಶಗಳಲ್ಲಿ ಎಷ್ಟೋಷ್ಟೋ ಕೇಸಸ್‌ಗಳು ಲೀಗಲ್ ಏಡ್‌ನಿಂದ ರಕ್ಷಣೆ ಪಡೆದಿದ್ದಾರೆ. ಮುಂದುವರಿದ ದೇಶಗಳಲ್ಲಿ, ಎಜುಕೇಷನ್ ಇರತಕ್ಕಂಥ ದೇಶದಲ್ಲಿ, ಆರ್ಥಿಕವಾಗಿ ಮುಂದುವರಿದಂಥ ದೇಶಗಳಲ್ಲಿ ಬಹಳಮಟ್ಟಿಗೆ ಶಿಕ್ಷಕರಿರಬೇಕಾದರೆ ನಮ್ಮಂಥ ಬಡದೇಶದಲ್ಲಿ ಪ್ರಾಸಿಕ್ಯೂಷನ್ ಬಗ್ಗೆ ಎಷ್ಟರಮಟ್ಟಿಗೆ ಕೆಲಸ ಮಾಡಬೇಕು ಎನ್ನುವುದನ್ನು ತಾವೇ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಚಾರ ಹೇಳುವುದೇನೆಂದರೆ, ಪ್ರಾಸಿಕ್ಯೂಷನ್ ಬಗ್ಗೆ ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ಅವರು ತಮ್ಮ ಅಭಿಪ್ರಾಯವನ್ನು ಕೊಟ್ಟು ಚಾರ್ಜ್‌ಶೀಟ್ ಹಾಕಬೇಕೋ ಬೇಡವೆ ಹೇಳಿ ? ಚಾರ್ಜ್‌ಶೀಟ್ ಹಾಕಬೇಕಾದರೆ ಅವರ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕಾದರೆ ಅವರಿಗೆ ಸಂಪೂರ್ಣವಾದ ಸ್ವಾತಂತ್ರ್ಯ ಇರಬೇಕು. ಅವರಿಗೆ ಆ ಸ್ವಾತಂತ್ರ್ಯ ಇಲ್ಲದೇಹೋದರೆ ಏನಾಗುತ್ತದೆ ? ಈವತ್ತು ನಾನು ಕೇಳುತ್ತೇನೆ ಎಷ್ಟು ಕೇಸಸ್ ಸಕ್ಸೀಡ್ ಆಗಿದೆ. ವಿಷಯ ವಿಮರ್ಶೆ ಮಾಡೋಣ. 50 ಪರ್ಸೆಂಟ್ ಕೇಳುತ್ತಾ ಇದ್ದಾರೆ, 25 ಪರ್ಸೆಂಟ್ ಕೇಳುತ್ತಿದ್ದಾರೆ, 10 ಪರ್ಸೆಂಟ್ ಕನ್‌ವಿಕ್ಷನ್ ಕೊಡುತ್ತಾ ಇದ್ದಾರೆ, ಅದಕ್ಕೆ ಏನು ಕಾರಣ ?

ಶ್ರೀ ಎಂ. ರಘುಪತಿ.—ಒಂದು ವಿಷಯವನ್ನು ಹೇಳುತ್ತೇನೆ. ಶಾಸಕಾಂಗ ಕೇರಳದಲ್ಲಿ ಇದ್ದಹಾಗೆ ಇಲ್ಲೂ ಕೂಡ ಅದನ್ನು ಸ್ವಯತ್ತ ಸಂಸ್ಥೆಯನ್ನಾಗಿ ಮಾಡಬೇಕೆಂದು ನಮ್ಮ ಧೋರಣೆ ಇರುತ್ತದೆ. ಅದನ್ನು ಮಾಡಿಯೇ ಮಾಡುತ್ತೇವೆ. ತಾವು ಮಾಡುತ್ತೇವೆಂದು ವಚನ ಕೊಟ್ಟು ಮಾಡಲಿಕ್ಕೆ ಆಗಲಿಲ್ಲ, ಅಂಥದ್ದನ್ನು ನಾವು ಮಾಡಿದ್ದೇವೆ.

ವೈ. ರಾಮಕೃಷ್ಣ.—ಈ ಬಗ್ಗೆ ತಾವು ಏನು ಮಾಡಿದ್ದೀರಿ ?

ಉಪಾಧ್ಯಕ್ಷರು.—ತಾವು ಮತ್ತೆ ಹಿಂದಕ್ಕೆ ಹೋಗಬೇಡಿ. ಲೀಗಲ್ ಏಡ್ ಬಗ್ಗೆ ತಾವು ಮುಂದುವರೆಸಿ.

ಶ್ರೀ ವೈ. ರಾಮಕೃಷ್ಣ.—ಈಗ ಅಮೇರಿಕಾದಲ್ಲಿ ಈ ಬಗ್ಗೆ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ಎಷ್ಟು ಮುಂದುವರೆದಿದ್ದಾರೆಂಬುದಕ್ಕೆ ಕೆಲವು ಅಂಕಿ ಅಂಶಗಳನ್ನು 1950 ರಿಂದ 1964 ನೇ ಇಸವಿಯ ವರೆಗೆ ಅಂದರೆ ಸುಮಾರು 14 ವರ್ಷಗಳ ಅಂಕಿ ಅಂಶಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ.

Convictions in the Metropolitan Court :

1950	81·41%
1951	75·00%
1952	74·00%
1953	77·00%

1954	78·00%
1955	80·39%
1956	82·45%
1957	70·53%
1958	84·11%
1959	92·31%
1960	89·40%

ಒಬ್ಬರು ಮಾನ್ಯ ಸದಸ್ಯರು.—ಪ್ರಾಸಿಕ್ಯೂಷನ್ ನಡೆದು ಈ ರೀತಿ ಶಿಕ್ಷೆಯಾಗಿರುವುದು ಯಾವ ದೇಶದಲ್ಲಿ ಎಂಬುದನ್ನು ಹೇಳುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಯಾವ ದೇಶದಲ್ಲಿ ಎಂಬುದನ್ನು ಮೊದಲೇ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದನ್ನೆಲ್ಲಾ ಈ ಕಿವುಡ ಸರ್ಕಾರಕ್ಕೆ ಏತಕ್ಕೆ ಹೇಳುತ್ತೀರಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ಹಾಗಿದ್ದರೆ ಇದು ನಿಮಗೂ ಅನ್ವಯವಾಗುತ್ತದೆ. ಏಕೆಂದರೆ, ಕೇಂದ್ರದಲ್ಲಿ ನಿಮ್ಮ ಪಕ್ಷದ ಸರ್ಕಾರವೇ ಇರುವುದು.

ಶ್ರೀ ವೈ. ರಾಮಕೃಷ್ಣ.—ಈ ಅಂಶಗಳನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂಬುದನ್ನು ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. Unless the Prosecution comes to know that there are definite charges, why should they recommend to file a charge-sheet ? Finally it ends in acquittal. ಆದ್ದರಿಂದ ಇಲ್ಲಿ ನನ್ನ ಪ್ರಶ್ನೆಯಾದರೂ ಇಷ್ಟೆ, ಸಂಬಂಧಪಟ್ಟವರನ್ನು 5–6 ವರ್ಷಗಳವರೆಗೆ ತಿರುಗಿಸಿ ಆಮೇಲೆ ಛಾರ್ಜ್‌ಶೀಟ್ ಹಾಕುವುದು ಸರಿಯಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಕಡೆಗೂ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ. I am pleading for the complete independence of prosecution. They are not expected to work under police, however big they may be.

ಒಬ್ಬರು ಮಾನ್ಯ ಸದಸ್ಯರು.—ಮಾನ್ಯ ಸದಸ್ಯರು ಕಾನೂನು ಸಚಿವರಾಗಿದ್ದಾಗ ಈ ಬಗ್ಗೆ ಏನು ಮಾಡುತ್ತಿದ್ದರು ?

ಶ್ರೀ ವೈ. ರಾಮಕೃಷ್ಣ.—ನನ್ನ ಕಾಲದಲ್ಲಿಯೂ ಸಹ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿಕೊಂಡು ಇದೇ ಪುಸ್ತಕವನ್ನು ಅವರ ಮುಂದಿಟ್ಟು ಅವರಿಗೆ ಕನ್‌ವಿನ್ಸ್ ಮಾಡಿದ್ದೇನೆ. I had lot of discussions with my officers, even with the Director of Prosecutions. I am not blaming my officers; they are efficient, sincere and honest. But you must make them independent so that they will work without fear or favour. ಯಾವಾಗ ಪ್ರಾಸಿಕ್ಯೂಷನ್ ಜಾಸ್ತಿಯಾಗುತ್ತದೆ ಆಗ ತಪ್ಪು ಒಪ್ಪಿಕೊಳ್ಳುವವರ ಸಂಖ್ಯೆಯೂ ಜಾಸ್ತಿಯಾಗುತ್ತದೆ. ತಪ್ಪು ಏತಕ್ಕೆ ಒಪ್ಪಿಕೊಳ್ಳುತ್ತಾರೆಂದು, ಪ್ರಾಸಿಕ್ಯೂಷನ್ ಹಾಕುವುದು ಗ್ಯಾರಂಟಿ ಎಂದು ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ಬೇರೆ ದೇಶದಲ್ಲಿ ಏನಿದೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ. ಅಲ್ಲಿಯೂ ಸಹ 92 ಪರ್ಸೆಂಟ್‌ಗಿಂತ ಜಾಸ್ತಿ ಇದೆಯೇ ಹೊರತು ಕಡಿಮೆ ಏನಿಲ್ಲ. ನಾನು ಇಲ್ಲಿ ಟೀಕೆ ಮಾಡಬೇಕೆಂದು ಹೊರದೇಶದ ಉದಾಹರಣೆ ಕೊಟ್ಟು ಹೇಳಲಿಲ್ಲ. ತಾವು ಇದರ ಕಡೆಗೆ ಹೆಚ್ಚಿನ ಗಮನ ಕೊಟ್ಟರೆ ಸುಳ್ಳು ಕೇಸ್‌ಗಳನ್ನು ಹಾಕುವುದು ತಪ್ಪುತ್ತದೆ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದೂ ಸಹ ನಿಲ್ಲುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ನರಗುಂದ ಕೇಸ್ ಸೆಷನ್ ಕೋರ್ಟಿನಲ್ಲಿ ಕಮಿಟ್ ಆದಮೇಲೆ ಅದು ಕ್ಯಾಬಿನೆಟ್ ಮುಂದೆ ಬರುವುದಕ್ಕೆ ಮುಂಚೆ ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ಅವರು ಏನು ಸಲಹೆ ಕೊಟ್ಟಿದ್ದಾರೆ ? ಅವರು ವಾಪಸ್ ಮಾಡಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆಯೇ ಹೇಗೆ ? ಏಕೆಂದರೆ, ಹಿಂದೆ ಇಲ್ಲಿ ಇಂತಹ ವಿಚಾರಗಳು ಪ್ರಸ್ತಾಪಕ್ಕೆ ಬಂದಾಗ ನ್ಯಾಯಾಂಗ ತನಿಖೆಯಾಗಬೇಕೆಂದು ಸದಸ್ಯರುಗಳಿಂದ ಒತ್ತಾಯ ಬರುತ್ತಿತ್ತು. ಆ ರೀತಿ ಬರುವುದು ಸಹಜ. ಆದರೆ ಈ ಕೇಸ್ ಸೆಷನ್ ಕೋರ್ಟಿನಲ್ಲಿ ನಡೆಯುತ್ತಿತ್ತು. ಇದೇನು ಸಾಧಾರಣವಾದ ಕೇಸ್ ಅಲ್ಲ. ಈ ಕೇಸ್‌ನಲ್ಲಿ ಅಧಿಕಾರಿಗಳು ಕೊಲೆ ಆಗಿದ್ದರು. ಈಗ ಅವರ ಮನೆಯವರು ವಿಧವೆಯರಾಗಿದ್ದಾರೆ. ಹೀಗಿರುವಾಗ ತಾವು ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ಅವರ ಅಭಿಪ್ರಾಯ ಕೇಳಿದ್ದಿರಾ ? ಇಲ್ಲವೇ ಮಂತ್ರಿಮಂಡಳದಲ್ಲಿ ತಮ್ಮದೇ ಆದಂಥ ತೀರ್ಮಾನಕ್ಕೆ ಬಂದು ಕೇಸ್ ವಾಪಸ್ ತೆಗೆದುಕೊಳ್ಳುತ್ತೀರಾ ಹೇಗೆ ? ಈ ಬಗ್ಗೆಯೂ ಮಾನ್ಯ ಮಂತ್ರಿಗಳು ಉತ್ತರ ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಇನ್ನು ರೈತರ, ಕಾರ್ಮಿಕರ ಮತ್ತು ಜನಸಾಮಾನ್ಯರ ದಿನಬಳಕೆಗೆ ಬೇಕಾದಂಥ ಕಾನೂನು ಪುಸ್ತಕಗಳನ್ನು ತಾವು ಕನ್ನಡದಲ್ಲಿ ಅಚ್ಚು ಹಾಕಿಸಬೇಕು. ಈ ಕೆಲಸ ಜರೂರಾಗಿ ಆಗಬೇಕೆಂದು ನಾನು ಸಲಹೆ ಮಾಡುತ್ತೇನೆ. ನಾವು ಇಲ್ಲಿ ಕಾನೂನು ಮಾಡುತ್ತೇವೆ, ಆದರೆ ಇದರಿಂದ ಯಾರಿಗೆ ಅನುಕೂಲ ವಾಗಬೇಕೋ ಅವರಿಗೆ ನಾವು ಕಾನೂನು ಮಾಡಿರುವುದು ಗೊತ್ತಾಗುವುದೇ ಇಲ್ಲ. ಪೇಪರ್‌ನಲ್ಲಿ ಓದಿದವರೂ ಸಹ ಅರ್ಧ ವಿಷಯ ತಿಳಿದುಕೊಂಡಿರುತ್ತಾರೆಯೇ ಹೊರತು ಪೂರ್ತಾ ವಿಷಯ ತಿಳಿದುಕೊಂಡಿರು ವುದಿಲ್ಲ. ಆದ್ದರಿಂದ Insurance Laws, Minimum Wages Act, Land Reforms Act, All acts connected with industries like Industrial Disputes Act, Land Acquisition Act, Debt Relief Act, Civil Liberties Act, Legal Aid Act, Prevention of Child Employment Act. ಮುಂತಾದ ಮುಖ್ಯವಾದಂಥ ಆಕ್ಟ್‌ಗಳನ್ನು ತಾವು ಭಾಷಾಂತರ ಇಲಾಖೆ ಮೂಲಕವಾಗಲೀ ಅಥವಾ ಲೀಗಲ್ ಏಡ್ ಬೋರ್ಡಿನ ಮೂಲಕವಾಗಲೀ ಕನ್ನಡದಲ್ಲಿ ಅಚ್ಚು ಹಾಕಿಸಬೇಕು. ಈ ರೀತಿ ಅಚ್ಚು ಹಾಕಿಸಿ ರಾಜ್ಯದ ಮೂಲೆ ಮೂಲೆಗೂ ಹಂಚಿದರೆ ಎಲ್ಲ ಜನರಿಗೂ ಅನುಕೂಲವಾಗುತ್ತದೆ. ಈರೀತಿ ಮಾಡುವುದರಿಂದ ಜನರು ಕಾನೂನುಗಳನ್ನು ಸರಿಯಾಗಿ ತಿಳಿದುಕೊಂಡು ತಮಗೆ ಸಿಗಬೇಕಾದಂಥ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದೆ ಬರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಒಂದು ಜವಾಬ್ದಾರಿಯನ್ನು ಲೀಗಲ್ ಏಡ್ ಬೋರ್ಡಿಗೆ ತಾವು ವಹಿಸಬೇಕು, so that they will become legally conscious.

ಇನ್ನು ಜೈಲುಗಳಲ್ಲಿ ಎಷ್ಟು ಜನರು under trial prisoners ಆಗಿದ್ದಾರೆ, ಯಾವ ಕಾರಣಕ್ಕಾಗಿ ಆಗಿದ್ದಾರೆ, ಇವರುಗಳ ಪೈಕಿ ಎಷ್ಟು ಜನರಿಗೆ ಕಾನೂನಿನ ನೆರವು ಸಿಕ್ಕಿದೆ, 16 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನವರು ಎಷ್ಟು ಸಂಖ್ಯೆಯಲ್ಲಿದ್ದಾರೆ, ಇವರುಗಳಿಗೆ ಜಾಮೀನು ಕೊಡಲು ಯಾರೂ ಸಹ ಮುಂದೆ ಬಂದಿಲ್ಲವಾದರೆ, ಇವರುಗಳು ಎಷ್ಟು ಕಾಲ ಜೈಲಿನಲ್ಲಿರಬೇಕು ಎಂಬುದನ್ನೆಲ್ಲಾ ಲೀಗಲ್ ಏಡ್ ಬೋರ್ಡಿನವರು ರಾಜ್ಯಮಟ್ಟದಲ್ಲಿರುವ ಜೈಲುಗಳಿಗೆ, ಜಿಲ್ಲಾ ಮಟ್ಟದಲ್ಲಿರುವ ಜೈಲುಗಳಿಗೆ ಮತ್ತು ಇನ್ನಿತರ ಕಡೆಗಳಲ್ಲಿರುವ ಜೈಲುಗಳಿಗೆ ಹೋಗಿ ನೋಡಬೇಕು. ಜಾಮೀನು ಸಿಗದೆ ಎಷ್ಟು ಜನರು ಜೈಲಿನಲ್ಲಿದ್ದಾ ರೆಂಬುದನ್ನು ನೋಡಿ ಅವರನ್ನು ಜಾಮೀನು ಮೇಲೆ ಬಿಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ನಮ್ಮ ರಾಜ್ಯಕ್ಕೆ ಒಂದು ಸುಪ್ರೀಂ ಕೋರ್ಟಿನ ಬೆಂಚ್ ಬೇಕೆಂಬ ವಾದ ಇದೆ. ಇದರ ಬಗ್ಗೆ ತಾವು ಎಷ್ಟರಮಟ್ಟಿಗೆ ಮುಂದೆ ಹೋಗಿದ್ದೀರಿ ಎಂಬುದನ್ನು ತಾವು ತಿಳಿಸಬೇಕು.

ಇನ್ನು ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಒಂದು ಹೈಕೋರ್ಟ್ ಬೆಂಚ್ ಸ್ಥಾಪಿಸುವ ವಿಚಾರ ಯಾವ ಹಂತದಲ್ಲಿದೆ ಎಂಬುದನ್ನು ತಾವು ತಮ್ಮ ಉತ್ತರದಲ್ಲಿ ಹೇಳಬೇಕು.

ಇನ್ನು ನಮ್ಮ ರಾಜ್ಯದಲ್ಲಿ ನ್ಯಾಷನಲ್ ಲಾ ಸ್ಕೂಲ್ ಪ್ರಾರಂಭ ಮಾಡುವ ಬಗ್ಗೆ ನಮ್ಮ ಕಾಲದಲ್ಲಿಯೇ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದಕ್ಕೆ ಬೇಕಾದ ಸ್ಥಳ ಮತ್ತು ಕಟ್ಟಡವನ್ನು ಒದಗಿಸಿಕೊಟ್ಟಿದ್ದೇವೆ. ಆದ್ದರಿಂದ ಇದರ ಒಂದು ಕೆಲಸ ಎಷ್ಟರಮಟ್ಟಿಗೆ ಮುಂದುವರೆದಿದೆ ಎಂಬುದನ್ನು ದಯಮಾಡಿ ತಮ್ಮ ಉತ್ತರದಲ್ಲಿ ಹೇಳಬೇಕು.

ಒಂದು ವಿಚಾರದ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಸಂಬಂಧಪಟ್ಟ ಮಂತ್ರಿಗಳಿಗೂ ನೋಟೀಸನ್ನು ನಿಯಮ 311 ರ ಕೆಳಗೆ ಕಳುಹಿಸಿಕೊಟ್ಟಿದ್ದೇನೆ. ವಿಷಯ ಇಷ್ಟೇ, ಗುಲ್ಬರ್ಗ ಜಿಲ್ಲೆಯ ತೆಂಗಲಿ ಗ್ರಾಮದಲ್ಲಿ ನಡೆದ ಘಟನೆಯ ಬಗ್ಗೆ ಅಧ್ಯಯನ ಮಾಡಲು ಶಾಸಕರ ಹರಿಜನ ಗಿರಿಜನ ಕ್ಷೇಮಾಭಿವೃದ್ಧಿ ಸಮಿತಿಯು ಅಲ್ಲಿಗೆ ಭೇಟಿಕೊಡಲು ಮಾನ್ಯ ಸಭೆಯಲ್ಲಿ ಅಪ್ಪಣೆ ಕೊಡಲಾಗಿತ್ತು. ಅದರ ಪ್ರಕಾರ ಸಮಿತಿಯು ಅಲ್ಲಿಗೆ ಹೋಗಿತ್ತು. ನಾನೂ ಕೂಡ ಆ ಸಮಿತಿಯಲ್ಲಿ ಸದಸ್ಯನಾಗಿರುವುದರಿಂದ ನಾನು ಹೋಗಿದ್ದೆ. ನಾವು ಅಲ್ಲಿ ಸಭೆ ಸೇರಿದಾಗ, ಗುಲ್ಬರ್ಗ ಜಿಲ್ಲೆಯ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ನಮ್ಮ ಸಮಿತಿಯ ಅಧ್ಯಕ್ಷರಿಗೆ ಒಂದು ಮನವಿಯನ್ನು ಕೊಟ್ಟರು. ಅದರಲ್ಲಿ ಅನೇಕ ವಿಚಾರಗಳನ್ನು ಎತ್ತಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್ ಮತ್ತು ಇನ್ನೊಬ್ಬರು ಮಂತ್ರಿಗಳ ಮೇಲೆ ಅದರಲ್ಲಿ ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಯಾವಾಗ ?

ಶ್ರೀ ವೈ. ರಾಮಕೃಷ್ಣ.—ದಿನಾಂಕ 23-7-1983 ರಂದು ನಾವು ಅಲ್ಲಿಗೆ ಹೋದಾಗ ಮನವಿಯನ್ನು ಕೊಟ್ಟಿದ್ದಾರೆ. ನನ್ನ ಗಮನಕ್ಕೆ ಬಂದಿರುವುದನ್ನು ಹೇಳುತ್ತಿದ್ದೇನೆ. ದಲಿತ ಸಂಘರ್ಷ ಸಮಿತಿಯ ಸಂಚಾಲಕರು ಅವರೇ ಬರೆದು ರುಜು ಹಾಕಿ ಸಮಿತಿಯ ಸಭೆ ನಡೆಯುವಾಗ ತಂದು ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಇನ್ನೂ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಆಗಲೇ ಮಂತ್ರಿಗಳು ಎದ್ದಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಖರ್ಗೆಯವರು ತಾವು ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ವೈ. ರಾಮಕೃಷ್ಣ.—ನೀವು ಮಂತ್ರಿಗಳಾದ ಮೇಲೆ ನಾವು ಹೇಳುವುದನ್ನು, ಕೇಳುವುದನ್ನು ಕಲಿಯಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮಿಂದ ಕಲಿಯಬೇಕಾದ್ದು ಏನೂ ಇಲ್ಲ.

ಶ್ರೀ ಧರ್ಮಸಿಂಗ್.—ಮಾನ್ಯ ಮಂತ್ರಿಗಳು ಚಿಕ್ಕಪೇಟೆ ಬಿಟ್ಟು ಸ್ವಲ್ಪ ಮುಂದೆ ಹೋಗಿ, ಹಳ್ಳಿಗಳಲ್ಲಿ ಏನೇನು ನಡೆಯುತ್ತಿದೆ ಎನ್ನುವುದು ಗುರುತಾಗಲಿ.

ಶ್ರೀ ವೈ. ರಾಮಕೃಷ್ಣ.—ತಮ್ಮ ಪಕ್ಷದ ಸದಸ್ಯರೇ ಹರಿಜನ ಗಿರಿಜನ ಕ್ಷೇಮಾಭಿವೃದ್ಧಿ ಸಮಿತಿಯ ಅಧ್ಯಕ್ಷರು. ಮನವಿಯಲ್ಲಿ ಏನಿದೆ ಅನ್ನುವುದನ್ನು ಓದುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳುವುದೇನೆಂದರೆ...

ಶ್ರೀ ಧರ್ಮಸಿಂಗ್.—ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರಾದ ರಾಮಕೃಷ್ಣರವರು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಅವರೇ ಎದ್ದರೆ ಹೇಗೆ?

ಶ್ರೀ ಎ. ಲಕ್ಷ್ಮೀಸಾಗರ್.—ಹರಿಜನ ಗಿರಿಜನ ಕ್ಷೇಮಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಮಾನ್ಯ ಪಿ. ಪಿ. ಹೆಗಡೆಯವರು, ನೀವು ಆ ಸಮಿತಿಯಲ್ಲಿ ಸದಸ್ಯರಿದ್ದೀರಿ. ನಾನು ಆ ಸಮಿತಿಯ ಸದಸ್ಯನಲ್ಲ. ಆ ತರಹ ಭಾಸವಾಗುವ ರೀತಿಯಲ್ಲಿ ಹೇಳಿದ್ದೀರಿ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಮಂತ್ರಿಗಳಿಗೆ ಕಿವಿ ಕಿವುಡೇ, ಚೆನ್ನಾಗಿಯೇ ಇದೆ ಅಲ್ಲಾ; ನಾನು ಆ ತರಹ ಹೇಳಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ದಿನಾಂಕ 23-7-1983 ರಂದು ಹರಿಜನ ಗಿರಿಜನ ಕ್ಷೇಮಾಭಿವೃದ್ಧಿ ಸಮಿತಿ ಅಲ್ಲಿಗೆ ಹೋಗಿತ್ತು, ಸಮಿತಿಯ ಸಭೆ ನಡೆಯುವಾಗ ಮನವಿ ಕೊಟ್ಟ ವಿಷಯವನ್ನು ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳಿದ್ದೇನೆ, ಈ ಸರ್ಕಾರ ಕಿವುಡು ಇದೆ, ಸ್ವಲ್ಪ ಚುರುಕುಗೊಳಿಸಬೇಕೆಂದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಕ್ರಿಯಾಲೋಪವನ್ನು ಈಗ ಹೇಳುವುದು ಬೇಡ. ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಂದುವರಿಸಿಕೊಂಡು ಹೋಗಿ.

ಶ್ರೀ ವೈ. ರಾಮಕೃಷ್ಣ.—ಆ ಮನವಿಯಲ್ಲಿರತಕ್ಕ 7 ನೇ ಐಟಂ ಓದುತ್ತೇನೆ: ಕರ್ನಾಟಕ ರಾಜ್ಯದ ಲಕ್ಷ್ಮೀಸಾಗರ್‌ರವರು ಗುಲ್ಬರ್ಗಕ್ಕೆ ಬಂದಾಗ ಸಮಿತಿಯ ಕಾರ್ಯಕರ್ತರು ಅವರನ್ನು ಭೇಟಿಯಾಗಿ ಹಳ್ಳಿಗಳಲ್ಲಿ ಅಸ್ಪೃಶ್ಯತೆಯನ್ನು ಬಹಳವಾಗಿ ಆಚರಿಸುತ್ತಿದ್ದಾರೆ. ತಾವು ಕಾನೂನು ಮಂತ್ರಿಗಳು, ತಾವು ಏನಾದರೂ ಬಿಗಿ ಕ್ರಮ ಕೈಗೊಳ್ಳಬೇಕೆಂದು ಕೇಳಿದಾಗ, ಮಾನ್ಯ ಕಾನೂನು ಮಂತ್ರಿಗಳಾದ ಲಕ್ಷ್ಮೀಸಾಗರ್‌ರವರು ಹೇಳಿದ್ದಾರೆ:

> "ಬಹಳ ವರ್ಷಗಳಿಂದ ಬೆಳೆದುಕೊಂಡು ಬಂದ ಜಾಡ್ಯ, ಇದನ್ನು ನೀವು ಯಾಕೆ ತಲೆಗೆ ಹಚ್ಚಿಕೊಳ್ಳುತ್ತೀರಿ? ನಿಮಗೆ ಪ್ರತ್ಯೇಕವಾದ ಬಾವಿ, ಹೋಟೆಲ್, ಮಳಿಗೆಗಳನ್ನು ಮಾಡಿಕೊಡಲಾಗುತ್ತದೆ. ಹೇಗೋ ಜೀವನ ಸಾಗಿಸಿಕೊಂಡು ಹೋದರೆ ಒಳ್ಳೆಯದು. ಇಲ್ಲದಿದ್ದರೆ, ಸುಮ್ಮನೆ ನೀವು ಜಗಳವಾಡಿ ಏತಕ್ಕೆ ಸಾಯುತ್ತೀರಿ."

SRI. A. LAKSHMISAGAR.—It is all hearsay.

SRI. M. RAGHUPATHY.—I am on a Point of Order.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಮಂತ್ರಿಗಳಾದ ರಘುಪತಿಯವರು ಅವರ ಪಾಯಿಂಟ್ ಆಫ್ ಆರ್ಡರ್ ಏನೆಂದು ಹೇಳಲಿ.

SRI. M. RAGHUPATHY.—I have to tell the Chair, not the members. ಇವರು ಹಿಂದೆ ಏನಾಗಿದ್ದರು ಎನ್ನುವುದನ್ನು ಮರೆತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಏನು ಮಾಡಿದೆ, ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು? ನೀವು ಹೇಳಿ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಮಂತ್ರಿಗಳಿಗೆ ಸ್ವಲ್ಪ ತಾಳ್ಮೆ ಇರಲಿ.

ಶ್ರೀ ವೈ. ರಾಮಕೃಷ್ಣ.—1956 ನೇ ಇಸವಿ ಜನವರಿ 26 ನೇ ತಾರೀಖು Untouchability has been abolished under the Constitution. It is abolished under the Constitution. ಬಹುಶಃ ಕಾನೂನು ಮಂತ್ರಿಗಳು ಇದನ್ನು ಮರೆತುಬಿಟ್ಟಿದ್ದಾರೆ. ಇದು ಬಹಳ ಖೇದವನ್ನುಂಟುಮಾಡತಕ್ಕಂಥ ವಿಷಯ. ದಲಿತ ಸಂಘರ್ಷ ಸಮಿತಿಯವರು ಲೆಟರ್‌ಹೆಡ್‌ನಲ್ಲಿ ರುಜುಮಾಡಿ ಕೊಟ್ಟಿದ್ದಾರೆ. ಮಾನ್ಯ ರಘುಪತಿಯವರು ಸಹಿಸಬೇಕು, ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ನೀವು ಸಹಾಯ ಮಾಡಬೇಕಾಗಿಲ್ಲ. ಅವರಿಗೆ ಆ ಕೆಪಾಸಿಟಿ ಇದೆ. ಅವರ ತಲೆಯಲ್ಲಿ ಇಂಟೆಲಿಜೆನ್ಸ್ ಇದೆ. ಅವರಿಗೆ ಹಾರ್ಟ್‌-

ಇಲ್ಲ. He has got so much of capacity. Heart is required than intelligence. ತಲೆ ತುಂಬಾ ಬುದ್ಧಿ ಇದೆ, ಬಹಳ ಹೆಡ್‌ಲೆಸ್ ಆಗಿ ಮಾತನಾಡಿದ್ದಾರೆ. ಇದನ್ನು ಕೇಳುತ್ತಿದ್ದೇನೆ. He is quite capable enough. He is a Law Minister to defend himself. ತಾವು ಕಾನೂನು ಮಂತ್ರಿಗಳಾಗಿ ಕಾನೂನು ಪ್ರಕಾರ ಶಿಕ್ಷೆ ಮಾಡುವುದಕ್ಕೆ Prosecution is working under your direct control. Take action. ಪಾಪ ಯಾರೋ ಬಂದು ಹೇಳಿಕೊಂಡರೆ ನೀವು ಪ್ರತ್ಯೇಕವಾಗಿ ಬಾವಿ ಮಾಡಿಕೊಳ್ಳಿ, ಹೋಟೆಲ್‌ಗಳನ್ನು ಮಾಡಿಕೊಳ್ಳಿ, ಅಂಗಡಿಗಳನ್ನು ಮಾಡಿಕೊಳ್ಳಿ ಎಂದು ಹೇಳಿದರೆ ಹೇಗೆ?

SRI. A. LAKSHMISAGAR.—I am on a Point of Order. Now, he has given notice under 311 under the rules of procedure. Now the allegation that is stated to have been made by me is repeating as if I am here in flesh and blood. In fairness he should have asked whether or not I have made that statement before he makes a statement. Before he makes a statement he should ask me whether I admit or do not admit—if I admit to what extent I admit, if I do not admit to what extent I do not admit. In legal parlance this is a hearsay statement. Therefore, I say before he makes his comment let me have an opportunity to say what I want to say about it. Then he can make allegation. There is no point in characterising me giving a picture of me which I do not possess and which I do not have that picture in me. What is this?

ಶ್ರೀ ವೈ. ರಾಮಕೃಷ್ಣ.—ಡಿಬೇಟ್‌ನಲ್ಲಿ ಭಾಗವಹಿಸಿ ಮಾತನಾಡಲಿಕ್ಕೆ ನೋಟೀಸ್ ಕೊಡಬೇಕಾಗಿಲ್ಲ. ಆದರೂ ಕೂಡ ನಾನು 311ರ ಪ್ರಕಾರ ನೋಟೀಸ್ ಕೊಟ್ಟು ಮಾತನಾಡುತ್ತಿದ್ದೇನೆ. ನಾನು ಕಮಿಟಿಯ ಜೊತೆಯಲ್ಲಿ ಟೂರ್ ಹೋದಾಗ ನನ್ನ ವಿಳಾಸಬರೆದು ಒಂದು ಮನವಿ ಪತ್ರವನ್ನು ನನಗೆ ದಲಿತ ಸಂಘರ್ಷ ಸಮಿತಿಯವರು ಕೊಟ್ಟಿದ್ದಾರೆ.

ಶ್ರೀ ಎಂ. ರಘುಪತಿ.—ಸ್ವಾಮಿ, ನನ್ನದೊಂದು ಕ್ರಿಯಾಲೋಪವಿದೆ. ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಸದಸ್ಯರು ಮಾನ್ಯ ಮಂತ್ರಿಗಳ ಮೇಲೆ ಒಂದು ಗುರುತರವಾದಂಥ ಆಪಾದನೆಯನ್ನು ಮಾಡಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ನಾನು ಅಪಾದನೆಯನ್ನು ಮಾಡಲಿಲ್ಲ. ಆ ಮನವಿಯಲ್ಲಿ ಏನು ಬರೆದಿದ್ದರೂ ಅದನ್ನು ಮಾತ್ರ ಈ ಸಭೆಯಲ್ಲಿ ಓದಿದ್ದೇನೆ.

ಶ್ರೀ ಎಂ. ರಘುಪತಿ:—ಮಾನ್ಯ ಅಧ್ಯಕ್ಷರೇ, ಆ ಮನವಿಯನ್ನು ಯಾರಿಗೆ ಕೊಟ್ಟಿದ್ದಾರೆ. ಅದನು ನಾವು ಮೊದಲು ಯೋಚನೆ ಮಾಡಬೇಕಾಗುತ್ತದೆ. ನಾನು ಹೇಳುವ ವಿಷಯದಲ್ಲಿ ಈ ಸದನಕ್ಕೆ ಸ್ವಲ್ಪ ಅನುಕೂಲವಾಗುತ್ತದೆ. ಯಾವುದಾದರೊಂದು ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಮುನ್ನ ಆ ಸಮಿತಿಯ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದು ಅಷ್ಟು ಸಮಂಜಸವಲ್ಲ. ಅದು ಸರಿಯಾದಂಥ ಪದ್ಧತಿ ಕೂಡ ಅಲ್ಲ. ಮತ್ತೆ ಮಾನ್ಯ ಸದಸ್ಯರು ಆ ಸಮಿತಿಯ ಒಬ್ಬ ಸದಸ್ಯರೂ ಕೂಡ ಆಗಿದ್ದಾರೆ. ಇದು ಮುಂದೆ ಸದನ ನಡೆಯುವುವಕ್ಕೆ ಒಳ್ಳೆಯ ಪದ್ಧತಿಯಾಗುವುದಿಲ್ಲ. ಈ ರೀತಿಯಾದರೆ ನಮ್ಮ ಯಾವುದೇ ಸಮಿತಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುವಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಇದರ ಬಗ್ಗೆ ಒಂದು ರೂಲಿಂಗ್ ಕೊಟ್ಟರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಬಂತು?

ಶ್ರೀ ಎಂ. ರಘುಪತಿ.—ಸ್ವಾಮಿ, ನಿಮಗೆ ಯಾವುದೂ ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ. ಮಾನ್ಯ ಅಧ್ಯಕ್ಷರು ಪಾಯಿಂಟ್ ಆಫ್ ಆರ್ಡರ್ ಅಲ್ಲವೆಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳು ಯಾರ ಮೇಲೋ ಕೋಪವಿಟ್ಟುಕೊಂಡು ಮಾತನಾಡುವಂತೆ ಮಾತನಾಡುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ನಿಮಗೆ ಕುರ್ಚಿ ಖಾಲಿಯಾಗಿದೆಯೆಂದು ಹೇಳಿದರೆ ಕೋಪ ಬರುತ್ತದೆ. ನಾನು ಏನು ಮಾಡಲಿ? ಆದ್ದರಿಂದ ನಿಮಗೆ ಈಗ ಪಾಪ ಬಹಳ ತೊಂದರೆಯಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಒಂದು ಕ್ರಿಯಾಲೋಪವನ್ನು ಎತ್ತಿ ಕೆಲವು ವಿಷಯಗಳನ್ನು ಹೇಳಿದರು. ಮತ್ತೆ ಮಾನ್ಯ ಸದಸ್ಯರೂ ಕೂಡ ಕೆಲವಾರು ವಿಷಯಗಳನ್ನು

ಹೇಳಿದ್ದಾರೆ. ಆದರೆ ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಗುಲ್ಬರ್ಗ ಜಿಲ್ಲೆಗೆ ಮಾನ್ಯ ಸದಸ್ಯರು ಕಮಿಟಿಯ ಜೊತೆಯಲ್ಲಿ ಪ್ರವಾಸ ಹೋದಾಗ ಅಲ್ಲಿ ಅವರಿಗೆ ಅಡ್ರೆಸ್ ಮಾಡಿ ಒಂದು ಮನವಿ ಪತ್ರವನ್ನು ಕೊಟ್ಟಿದ್ದಾರೆ. ಆ ಮನವಿ ಪತ್ರದಲ್ಲಿ ಏನು ಹೇಳಿದ್ದಾರೆಂದು ನಾವು ನೋಡುವುದಾದರೆ ಸನ್ಮಾನ್ಯ ಕಾನೂನು ಸಚಿವರು ಈ ದೇಶದ ರಕ್ಷಣೆಯನ್ನು ಮಾಡುವವರು ಅವರು. ಅವರೇ ಹರಿಜನ ಮತ್ತು ಗಿರಿಜನರಿಗೆ ರಕ್ಷಣೆ ಇಲ್ಲ. ಹರಿಜನ ಮತ್ತು ಗಿರಿಜನರನ್ನು ಪ್ರಚೋದನೆಗೆ ಸಿಕ್ಕಿಸಿಹಾಕುವಂಥ ಮಾತನ್ನು ಹೇಳಿದ್ದಾರೆಂದು ಹೇಳಿದ್ದಾರೆ. ಆದರೆ ಇಡೀ ರಾಜ್ಯದ ರಕ್ಷಣೆಯ ಕಾನೂನು ತಮ್ಮಲ್ಲಿರುವಾಗ ತಾವು ಅವರಿಗೆ ರಕ್ಷಣೆ ಕೊಡದೆ ನಿಮಗೆ ನಾವು ರಕ್ಷಣೆ ಕೊಡುವುದಿಲ್ಲ ಎಂದು ಹೇಳಿದರೆ ಹೇಗೆ? ಇದರಲ್ಲಿ ಪ್ರಚೋದನೆ ಇದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳ ಮೇಲೆ ನೇರವಾಗಿ ಆಪಾದನೆ ಮಾಡಿಲ್ಲ. ಅವರಿಗೆ ಬಂದಂಥ ಒಂದು ಮನವಿ ಪತ್ರದ ಮೂಲಕ ಅವರು ಆಪಾದನೆ ಮಾಡುತ್ತಿದ್ದಾರೆ. ಅವರು ಆ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಲು 311 ರ ಕೆಳಗೆ ನೋಟೀಸ್ ಕೂಡ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸರಿಯಾದಂಥ ವಿವರಣೆ ಕೊಡಬೇಕೆಂದು ನಾನೂ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದು ಬೇರೆ; ಆದರೆ ಅವರು ಹೇಳಿದ್ದೇ ಬೇರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ಹೇಳಿದ್ದಾರೆ ಮತ್ತು ಮಾನ್ಯ ಮಂತ್ರಿಗಳು ಕೂಡ ಇದರ ಬಗ್ಗೆ ಹೇಳಿದ್ದಾರೆ. ಆದರೆ ಯಾವುದೇ ಒಂದು ಸಮಿತಿಗೆ ಯಾವುದೇ ಒಂದು ಅರ್ಜಿಯನ್ನು ಕೊಟ್ಟರೆ ಆ ಅರ್ಜಿಯನ್ನು ಸಮಿತಿಯವರು ಪರಿಶೀಲಿಸುತ್ತಾರೆ. ಆ ಹಕ್ಕು ಸಮಿತಿಯ ಅಧ್ಯಕ್ಷರಿಗೆ ಇರುತ್ತದೆ. ಆ ನಂತರ ಸರ್ಕಾರಕ್ಕೆ ವರದಿಯನ್ನು ಕೊಡುವುದು ರೂಢಿಯಲ್ಲಿದೆ. ಆದರೆ ಸಮಿತಿಗೆ ಕೊಟ್ಟಂತಹ ದಾಖಲೆಗಳನ್ನು ಸದಸ್ಯರು ಉಪಯೋಗ ಮಾಡುವುದಕ್ಕೆ ಬರುವುದಿಲ್ಲ. ಅದು ರೂಲ್ಸ್‌ನಲ್ಲಿ ಕ್ಲಿಯರ್ ಆಗಿ ಇದೆ. ಅದು ಯಾವುದೇ ಒಂದು ಕಮಿಟಿಯಾಗಿರಬಹುದು.

ಶ್ರೀ ವೈ. ರಾಮಕೃಷ್ಣ.—ಅವರು ನನಗೆ ಅಡ್ರೆಸ್ ಮಾಡಿ ಕೊಟ್ಟಿದ್ದಾರೆ. ನೀವು ನಾಯಕರಾಗಿದ್ದೀರಿ, ನಿಮಗೆ ಸಾರ್ವಜನಿಕರಿಂದ ಬಂದಂತಹ ಮನವಿ ಇದ್ದರೆ ಅದನ್ನು ತೆಗೆದುಕೊಳ್ಳಬಹುದು. ಕಮಿಟಿ ಇದ್ದರೆ ಕಮಿಟಿ ಅದನ್ನು ಪರಿಶೀಲಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಕಮಿಟಿ ಅಲ್ಲಿಗೆ ಹೋದಾಗ ಅದನ್ನು ಕೊಟ್ಟಿದ್ದಾರೆ.

SRI. Y. RAMAKRISHNA.—Sir, I have clearly stated the purpose of my visit. ಆ ಸಂದರ್ಭದಲ್ಲಿ ಕಮಿಟಿ ಅಧ್ಯಕ್ಷರಿಗೆ ಇದನ್ನು ತಿಳಿಸಿ ಇದರ ಒಂದು ಕಾಪಿಯನ್ನು ಕೊಟ್ಟಿದ್ದಾರೆ.

SRI. S. R. BOMMAI.—Sir, the matter is seized by the Legislature Committee. Let that Committee go into this matter, issue notice to the Minister concerned and get his statement........Minister will clarify the position........The Committee has power to do it. ಕಮಿಟಿಯ ಅಧಿಕಾರ ಕಸಿದುಕೊಳ್ಳುವುದಕ್ಕಾಗುವುದಿಲ್ಲ. ಕಮಿಟಿ ವಿಚಾರಣೆ ಮಾಡಿ ರಿಪೋರ್ಟ್ ಕೊಡಬಹುದು. ಮಂತ್ರಿಗಳ ಮೇಲೆ ವರದಿಯನ್ನು ಕೊಡಬಹುದು. ಆ ಅಧಿಕಾರ ಆ ಕಮಿಟಿಗೆ ಇದೆ. ಅದನ್ನು ತೆಗೆದುಕೊಳ್ಳುವುದು ಬೇಡವೆಂದು ನೀವು ಈ ರೀತಿ ಹೇಳಿದ್ದೀರೆಂದು ಹೇಳುತ್ತಿದ್ದೇನೆ. The Committee will go into it and gives a report.

SRI. Y. RAMAKRISHNA.—I have already stated the purpose of it.

MR. DEPUTY SPEAKER.—You have given a notice. Shall I read it ? It is like this :—

'I may be permitted to raise the following matter while I speak on the demand of the Hon'ble Minister. I received a copy of the representation addressed to the Chairman SC/ST Legislature Committee by Karnataka Dalitha Sangharsha Samithi, Gulbarga....

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ಇದು ಬೊಮ್ಮಾಯಿಯವರು ಹೇಳಿದ್ದು. ಅದು ಒಂದು ಆ ಯಾವ ಸಮಿತಿ ಅಲ್ಲಿಗೆ ಹೋಗಿತ್ತೆಂದರೆ ಮೊನ್ನೆ ಇಲ್ಲಿ ಚರ್ಚೆಯಾಯಿತಲ್ಲ ಅದನ್ನು ವಿಚಾರಣೆ ಮಾಡುವುದಕ್ಕೆ ಹೋದಾಗ ಅಲ್ಲಿ ಇವರಿಗೆ ಈ ಮನವಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಗುಲ್ಬರ್ಗ ಜಿಲ್ಲೆ ಮುಂತಾದ ಭಾಗಗಳಲ್ಲಿ ಹರಿಜನ ಗಿರಿಜನರಿಗೆ ಏನಾಗುತ್ತಿದೆ ಎಂಬುದರ ಬಗ್ಗೆ 1...2...7 ರವರೆಗೆ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. 7 ನೆಯ ಐಟಂನಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಆದ್ದರಿಂದ

ಮಾನ್ಯ ಬೊಮ್ಮಾಯಿಯವರಿಗೆ ನಾನು ಹೇಳುತ್ತೇನೆ; ತೆಂಗಲಿ ಗ್ರಾಮಕ್ಕೆ ಹೋಗಿ ಅದಕ್ಕೆ ಸಂಬಂಧಪಟ್ಟ ಹಾಗೆ ವಿಷಯವಾಗಿದ್ದರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡಬಾರದು. ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಎಂ. ರಘುಪತಿ.—ತೆಂಗಲಿ ಗ್ರಾಮಕ್ಕೆ ಸಂಬಂಧಪಟ್ಟ ವಿಚಾರವೇ ಅದರಲ್ಲಿ ಪ್ರಸ್ತಾಪ ಮಾಡಿರುವುದು.

ಶ್ರೀ ಕೆ. ಹೆಚ್. ರಂಗನಾಥ್.—ಇದು ಏನಿದೆ ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು ಗುಲ್ಬರ್ಗ ಜಿಲ್ಲೆಯಲ್ಲಿ ಹರಿಜನರಿಗೆ ಏನೇನು ಅನ್ಯಾಯವಾಗುತ್ತಿದೆ ಎಂಬುದನ್ನು ಬರೆದು ಅದರಲ್ಲಿ ಕೊಟ್ಟಿದ್ದಾರೆ. ಅದರಲ್ಲಿ 7 ನೇ ಐಟಂನಲ್ಲಿ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಬೇರೆ ಅಂಗಡಿಗೆ ಹೋಗಿ ಬೇರೆ ಮನೆಗೆ ಹೋಗಿ ಬೇರೆ ಹೋಟೆಲ್‌ಗೆ ಹೋಗಿ ಎಂಬುದನ್ನೆಲ್ಲ ಹೇಳಿ ಪ್ರಚೋದನೆ ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆ ಅಂಗಡಿ ಇಟ್ಟುಕೊಳ್ಳಿ, ಬೇರೆ ಹೋಟೆಲ್‌ಗೆ ಹೋಗಿ ಎನ್ನುವ ವಿಚಾರ ಯಾವುದೂ ಇದರಲ್ಲಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಕರ್ನಾಟಕ ರಾಜ್ಯದ ಕಾನೂನು ಸಚಿವರಾದ ಲಕ್ಷ್ಮೀಸಾಗರ್ ಅವರು ಗುಲ್ಬರ್ಗಕ್ಕೆ ಬಂದಾಗ ದಲಿತ ಸಂಘರ್ಷ ಸಮಿತಿಯವರು ಅರ್ಪಿಸಿದ ಮನವಿಯಲ್ಲಿ ಅದನ್ನು ಹೇಳಿದ್ದಾರೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ನಮ್ಮ ಅಧ್ಯಕ್ಷರು ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗ್ ಕೊಡಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರು ರೂಲಿಂಗ್ ಕೊಟ್ಟು ಕುಳಿತುಕೊಳ್ಳಿ ಎಂದು ಹೇಳಲಿ, ಕುಳಿತುಕೊಳ್ಳುತ್ತೇನೆ. ಬೊಮ್ಮಾಯಿಯವರು ಏನು ಪ್ರಸ್ತಾಪ ಮಾಡಿದರು ಅದು ಈ ಮನವಿಗೆ ಅನ್ವಯ ವಾಗುವುದಿಲ್ಲ. ತೆಂಗಲಿ ಗ್ರಾಮಕ್ಕೆ ಸಂಬಂಧಪಟ್ಟ ಕಾಗದಪತ್ರ, ಎನ್‌ಕ್ವಯರಿ ಪತ್ರ ಇತ್ಯಾದಿಯಾಗಿದ್ದರೆ ಅದನ್ನು ಪ್ರಸ್ತಾಪ ಮಾಡುವುದು ಸರಿಯಲ್ಲ.

MR. DEPUTY SPEAKER.—Do you mean to say it is a general representation given to the SC/ST Committee ?

ಶ್ರೀ ಎ. ಲಕ್ಷ್ಮೀಸಾಗರ್.—ಅದರಲ್ಲಿ ಏನು ಇದೆ ಸ್ವಲ್ಪ ಓದಿ.

ಶ್ರೀ ಕೆ. ಹೆಚ್. ರಂಗನಾಥ್.—ಅದರಲ್ಲಿ ಮಂತ್ರಿಗಳಿಗೆ ಸಂಬಂಧಪಟ್ಟ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಲಕ್ಷ್ಮೀಸಾಗರ್‌ರವರು ಗುಲ್ಬರ್ಗ ಜಿಲ್ಲೆಗೆ ಬಂದಾಗ ಇಲ್ಲಿ ಏನು ಹೇಳಿದ್ದಾರೆಂದೂ, ಸಮಿತಿಯ ಕಾರ್ಯಕರ್ತರು ಅರ್ಪಿಸಿದ ಮನವಿಯಲ್ಲಿ ಈ ರೀತಿ ಹೇಳಿದ್ದಾರೆ...ತಾವು ಕಾನೂನು ಸಚಿವರಾಗಿ ವಿವಿಧ ಗ್ರಾಮಗಳಲ್ಲಿ ಬಹಳ ದಿವಸಗಳಿಂದ ಬೆಳೆದು ಬಂದಂಥ ಈ ಜಾಡ್ಯವನ್ನು ಎಷ್ಟು ಬೇಗ ನಿವಾರಣೆ ಮಾಡ ಬೇಕೋ ಅವುಗಳಿಗೆ ನೀವು ಏಕೆ ತಲೆ ಕೆಡಿಸಿಕೊಳ್ಳುತ್ತಿದ್ದೀರ ? ಬೇಕಾದರೆ ಪ್ರತ್ಯೇಕವಾದಂಥ ಬಾವಿ, ಪ್ರತ್ಯೇಕವಾದ ಹೋಟೆಲ್, ಪ್ರತ್ಯೇಕವಾದ ಅಂಗಡಿಗಳನ್ನು ಇಟ್ಟುಕೊಂಡು ಜೀವನ ಸಾಗಿಸಬೇಕು. ಇಲ್ಲದಿದ್ದರೆ, ಜಗಳವಾಡಿ ಸಾಯುತ್ತೀರಾ; ಈ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ತಾವು ಪ್ರಾಮಾಣಿಕ ವಾಗಿ ಯತ್ನಿಸುವಿರಾ ? ಸ್ವಾಮಿ, ಯಾವುದೇ ಒಂದು ಡಾಕ್ಯುಮೆಂಟ್ ಬಳಸುವುದಕ್ಕೆ ಇಲ್ಲಿ ಸಂಪ್ರದಾಯ ಇದೆ. ಇದು ಕ್ರಿಯಾಲೋಪ ಹೇಗೆ ಆಗುತ್ತದೆ ? ಬೊಮ್ಮಾಯಿಯವರು ಆ ಗ್ರಾಮದ ವಿಚಾರ ಅಥವಾ ಎವಿಡೆನ್ಸ್‌ಗೆ ಸಂಬಂಧಪಟ್ಟಂತೆ ಆಗಿದ್ದರೆ ಈ ಸಭೆಯಲ್ಲಿ ಹೇಳುವುದು ಸರಿಯಲ್ಲ. ಆದರೆ ಇದು ಹೀಗೆ ಎಲ್ಲಾ ಜಿಲ್ಲೆಗಳಲ್ಲಿ ಆಗತಕ್ಕಂಥ ತೊಂದರೆಗಳನ್ನು ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ಆ ಸಮಿತಿಯವರು ಕೊಟ್ಟಿರುವ ಮನವಿಗೆ ಸಮಿತಿಯ ಅಧ್ಯಕ್ಷರು ಕೊಟ್ಟ ವರದಿ ಅದು ರಾಮಕೃಷ್ಣರಿಗೆ ವೈಯುಕ್ತಿಕವಾಗಿ ಕೊಟ್ಟಿದ್ದಾರೆ. ಬೇರೆಯಾದರೆ ಇದು ಅದರಲ್ಲಿ ಕಾಪಿ ಎಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಬೊಮ್ಮಾಯಿಯವರು ಎತ್ತಿರುವ ಕ್ರಿಯಾಲೋಪ ಒಳ್ಳೆಯದೆ. ಈ ವಿಚಾರದಲ್ಲಿ ಸ್ಪಷ್ಟೀಕರಣ ಬೇಕಾಗುತ್ತದೆ. ಈಗ ತೆಂಗಲಿ ಗ್ರಾಮದಲ್ಲಿ ಯಾವ ಒಂದು ಘಟನೆ ನಡೆಯಿತು ಆ ಘಟನೆ ಸನ್ಮಾನ್ಯ ಸಚಿವರಾದಂಥ ಲಕ್ಷ್ಮೀಸಾಗರ್ ಅವರು ಹೋದ ಜುಲೈ 23 ರಲ್ಲಿ ಭೇಟಿ ಕೊಟ್ಟ ನಂತರ ನಡೆದ ಘಟನೆ. ಅವರು ತೆಂಗಲಿ ಗ್ರಾಮಕ್ಕೆ ಭೇಟಿ ಕೊಟ್ಟ 15 ದಿವಸಗಳ ನಂತರ ಈ ಘಟನೆ ನಡೆಯಿತು. ಈಗ ಆ ಗ್ರಾಮಕ್ಕೆ ಸಂಬಂಧಪಟ್ಟ ಜಿಲ್ಲೆಯಲ್ಲಿ ಒಂದು ಎಸ್.ಸಿ. ಎಸ್.ಟಿ ಕಮಿಟಿ ಅಲ್ಲಿ ಭೇಟಿಕೊಟ್ಟು ಎವಿಡೆನ್ಸ್ ಕಲೆಕ್ಟ್ ಮಾಡಿ ಇಲ್ಲಿಗೆ ಬಂದಿದ್ದಾರೆ. ವರದಿಯನ್ನು ಇನ್ನೂ ಕೊಡಬೇಕಾಗಿದೆ. ಅದಕ್ಕೆ ಸಂಬಂಧಪಟ್ಟವರು; ಆ ಗ್ರಾಮಕ್ಕೆ ಸಂಬಂಧಪಟ್ಟವರು ಒಂದು ಮನವಿಯನ್ನು ಅದರ ಅಧ್ಯಕ್ಷರಿಗೆ ಕೊಟ್ಟು ಅದರ ನಕಲನ್ನು ಮಾನ್ಯ ರಾಮಕೃಷ್ಣರವರಿಗೆ ಕೊಟ್ಟಿದ್ದಾರೆ. ಅದನ್ನು ಅವರು ಓದಿ ಹೇಳುತ್ತಿದ್ದಾರೆ. ಬೊಮ್ಮಾಯಿಯವರು ಹೇಳಿದಂತಹ ಮಾತನ್ನು ಖಂಡಿತವಾಗಿ ಒಪ್ಪಬೇಕಾಗಿದ್ದು ಈಗ ಜನರಲ್ ಆಗಿ ರೆಪ್ರಸೆಂಟೇಷನ್ ಕೊಟ್ಟು ಅದರಲ್ಲಿನ ವಿಚಾರವಾಗಿ ಒಂದು 7 ಪಾಯಿಂಟ್‌ಗಳಲ್ಲಿ ಒಂದು ಪಾಯಿಂಟ್ ತೆಂಗಲಿ ಗ್ರಾಮಕ್ಕೆ ಸಂಬಂಧಪಟ್ಟಿರುವ ವಿಚಾರ.

MR. DEPUTY SPEAKER.—If any explanation needed he will clarify

SRI. M. VEERAPPA MOILY.—It is a general petition given to a legislature or any public man.

MR. DEPUTY SPEAKER.—All right. If any explanation to be given you can explain. It is only a hearsay.

ಶ್ರೀ ಕೆ. ಹೆಚ್. ರಂಗನಾಥ್.—ಬರೆದು ಸಹಿ ಮಾಡಿಕೊಟ್ಟಿದ್ದು 'ಹಿಯರ್‌ಸೇ' ಹೇಗೆ ಆಗುತ್ತದೆ? ಬೇಕಾದರೆ ಇನ್ನೊಂದು ಕಮಿಟಿಯನ್ನು ಕಳಿಸಿ. ಮತ್ತೊಂದು ಕಮಿಟಿಯನ್ನು ಕಾನ್ಸ್ಟಿಟ್ಯೂಟ್ ಮಾಡಿ ಕಳಿಸಿ. ಕೊಟ್ಟಿದ್ದು ಸಾಬೀತು ಆಗಲಿ.

MR. DEPUTY SPEAKER.—While speaking on the discussion on the demands, he also quoted the representation in general given by the public. Is it not?

SRI. S. R. BOMMAI.—The representation was addressed to the Chairman of the Committee and given to the Member also. It becomes the document of the Committee.

(Interruptions)

ಶ್ರೀ ಕೆ. ಹೆಚ್. ರಂಗನಾಥ್.—ಹೇಗೆ ಆಗುತ್ತದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮಿಟಿಯ ಅಧ್ಯಕ್ಷರಿಗೆ ಮನವಿಯನ್ನು ಕೊಟ್ಟಿದ್ದಾರೆ. ಕಮಿಟಿಯ ಸದಸ್ಯರಿಗೂ ಪ್ರತಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅದು ಕಮಿಟಿಯ ಕಾಗದಪತ್ರ ಆಗುತ್ತದೆ. ಆದ್ದರಿಂದ ಕಮಿಟಿಯು ಅದನ್ನು ಪರಿಶೀಲಿಸಬೇಕು ಮತ್ತು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕಮಿಟಿ ರಿಪೋರ್ಟ್ ಕೊಡುವವರೆಗೆ ಕಾಯಬೇಕಾಗುತ್ತದೆ.

ಶ್ರೀ ಎನ್. ಜಿ. ನಾಯಕ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಶ್ರೀ ಬೊಮ್ಮಾಯಿಯವರು ಹೇಳಿರತಕ್ಕಂಥ ವಿಚಾರದಲ್ಲಿ ನನ್ನದೊಂದು ಅಭಿಪ್ರಾಯ ಇದೆ. ಈ ಸಮಿತಿಯು ಒಂದು ವಿಚಾರಣೆಗೆ ಹೋಗಿರತಕ್ಕಂಥ ಸಂದರ್ಭದಲ್ಲಿ ಆ ಸಮಿತಿಯವರಿಗೆ ಬೇರೆ ಸಾರ್ವಜನಿಕರ ಪರವಾಗಿ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರಲು ಕೆಲವರಿಗೆ ಆಸಕ್ತಿ ಇರುತ್ತದೆ. ಆ ವಿಚಾರ ವೈಯಕ್ತಿಕವಾಗಿರಬಹುದು ಅಥವಾ ಸಾರ್ವಜನಿಕವಾಗಿರಬಹುದು....

MR. DEPUTY SPEAKER.—Whether it amounts to the subject-matter of that particular Committee? I understood the entire point.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದರ ಮೇಲೆ ಇಷ್ಟೊಂದು ದೀರ್ಘವಾದಂತಹ ಚರ್ಚೆಗೆ ಅವಕಾಶ ಇರಲಿಲ್ಲ. ಅದರಲ್ಲಿ ಬರತಕ್ಕಂಥ ಆರೋಪದ ಭಾಗವನ್ನು ಈ ಸಭೆಯ ಮುಂದಿಡದೆ ಅದರ ವಿಚಾರವನ್ನೆಲ್ಲಾ ತಾವು ನೋಡಿದ ಹಾಗೆ ಎನ್ನತಕ್ಕಂಥ ರೀತಿಯಲ್ಲಿ...

SRI. M. VEERAPPA MOILY.—It is general in nature.

MR. DEPUTY SPEAKER.—Clarification....

ಶ್ರೀ ಎ. ಲಕ್ಷ್ಮೀಸಾಗರ್.—ಸತ್ಯಕ್ಕೆ ದೂರವಾದ ಒಂದು ಆಪಾದನೆಯನ್ನು ಮಾಡಲಾಗಿದೆ. ಇದರಲ್ಲಿ ಏನೂ ಇಲ್ಲ.

(ಗೊಂದಲ)

SRI. Y. RAMAKRISHNA.—I take objection for that. ಸತ್ಯಾಸತ್ಯತೆಯನ್ನು ಅರಿಯುವುದರಲ್ಲಿ ನಮಗೆ ಇಚ್ಛೆ ಇದೆ. ಅದಕ್ಕೆ ಏನು ಮಾಡಬೇಕು?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅದು ಸುಳ್ಳು. ಸುಳ್ಳು ಅಂದರೆ ಅಪ್ಪಟ ಸುಳ್ಳು.

ಶ್ರೀ ವೈ. ರಾಮಕೃಷ್ಣ.—ಅವರು ಸಂಸದೀಯ ಮಂತ್ರಿಗಳು. ಸುಳ್ಳು ಅಂತ ಹೇಳುತ್ತಿದ್ದಾರೆ. ಸುಳ್ಳು ಅಂತ ಸಾಬೀತು ಮಾಡುವ ಸ್ಥಳ ಯಾವುದು?

MR. DEPUTY SPEAKER.—You must know when and at what point of time you have raised this matter. While speaking on a demand, you have raised and he has clarified. There ends the matter. Please speak on other subject.

ಶ್ರೀ ವೈ. ರಾಮಕೃಷ್ಣ.—ಇದು ಕ್ಲಾರಿಫಿಕೇಶನ್ ಪ್ರಶ್ನೆ ಅಲ್ಲ.

ಉಪಾಧ್ಯಕ್ಷರು.—ನಾನು ಅನುಮತಿ ಕೊಡುವುದಿಲ್ಲ.

SRI. Y. RAMAKRISHNA.—I cannot do injustice to the subject on which I am speaking.

MR. DEPUTY SPEAKER.—When I came to the conclusion that this is a general representation given by the Gulbarga District Sangha, then only I allowed. Please conclude.

SRI. Y. RAMAKRISHNA.—This is a complaint made by an organisation and not by an individual. ತಮ್ಮ ರೂಲಿಂಗ್‌ಗೆ ನಾವು ತಲೆಬಾಗಿಸುತ್ತೇವೆ. ಆದರೆ ಅವರು ಈ ಮನೆಯಲ್ಲಿ ಕುಳಿತುಕೊಂಡು ತಾವು ಹೇಳಿಲ್ಲವೆಂದು ಹೇಳಿದರೆ...

ಉಪಾಧ್ಯಕ್ಷರು.—ಎಲ್ಲಾ ಕೇಳಿದ ಮೇಲೆಯೇ ನಾನು ತೀರ್ಮಾನಕ್ಕೆ ಬಂದಿರುವುದು.

ಶ್ರೀ ವೈ. ರಾಮಕೃಷ್ಣ.—ತಾವು ಇದೇ ಸ್ಥಾನದಲ್ಲಿದ್ದರೆ ಸತ್ಯತೆಯನ್ನು ಹೇಗೆ ತಿಳಿದುಕೊಳ್ಳುತ್ತಿದ್ದೀರಿ ?

ಉಪಾಧ್ಯಕ್ಷರು.—ನೀವು ಹಿಂದೆ ಮಂತ್ರಿಯಾಗಿದ್ದವರು ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು...

ಉಪಾಧ್ಯಕ್ಷರು.—ದಯವಾಡಿ ಮುಂದುವರಿಸಿ.

ಶ್ರೀ ವೈ. ರಾಮಕೃಷ್ಣ.—This is an appproriate hour. ಒಂದು ಸಮಿತಿಯನ್ನು ಮಾಡಿ. ಆ ಸಮಿತಿಯ ಮುಂದೆ ಅವರು ಹೇಳುತ್ತಾರೆ. ಆ ರೀತಿ ಮಾಡುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಅವರನ್ನೂ ಕರೆಸೋಣ. ಅವರು ಕೊಡತಕ್ಕಂತಹ ಎವಿಡೆನ್ಸನ್ನು ರೆಕಾರ್ಡ್ ಮಾಡೋಣ.

MR. DEPUTY SPEAKER.—It is left to the Committee. With that conclusion I pass on to the next subject.

ಶ್ರೀ ವೈ. ರಾಮಕೃಷ್ಣ.—ಸನ್ಮಾನ್ಯ ಅಧ್ಯಕ್ಷರೇ, ಕಡೆಯದಾಗಿ ಕಾನೂನು ಇಲಾಖೆಗೆ ಸಂಬಂಧಪಟ್ಟ ಒಂದೇ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಹರಿಜನ-ಗಿರಿಜನರ ಮೇಲೆ ಅತ್ಯಾಚಾರ, ದಬ್ಬಾಳಿಕೆ ನಡೆಯುತ್ತಿದೆ. ಯಾರು ಇವರ ಮೇಲೆ ಅತ್ಯಾಚಾರ, ದಬ್ಬಾಳಿಕೆಯನ್ನು ಮಾಡುತ್ತಾರೋ ಅವರನ್ನು ಬುಕ್ ಮಾಡುವುದನ್ನು ಬಿಟ್ಟು ಅವರ ಜೊತೆ ಇವರನ್ನೂ ಬುಕ್ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕು. ನಾವೆಲ್ಲರೂ ಇವರ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ನಮ್ಮ ಪಕ್ಕದಲ್ಲಿರತಕ್ಕಂತಹ ಮದ್ರಾಸ್ ರಾಜ್ಯದಲ್ಲಿ ಯಾವ ರೀತಿ ಮಾಡಿದ್ದಾರೆ ? ಎಂಬುದರ ಬಗ್ಗೆ ಹೇಳುವುದಾದರೆ, Untouchability cases end with prosecution. More than 50% cases. I am prepared to give figures.... ಏಕೆಂದರೆ ಸಮಯ ಇಲ್ಲ. ಹೇಳುವುದು ಬೇಡ. ಆದರೆ ನಮ್ಮಲ್ಲಿ ಒಂದು ಪರ್ಸೆಂಟ್ ಕೂಡ ಸಿಕ್ಕುವುದಿಲ್ಲ. ಇದಕ್ಕೆ ಕಾರಣ ಏನು ? ಇದು ನನ್ನ ಮುಂದೆ ಇರತಕ್ಕಂತಹ ಪ್ರಶ್ನೆ. ನಾನು ಆ ಒಂದು ಸ್ಥಾನದಲ್ಲಿದ್ದಾಗಲೂ ಇದನ್ನು ಆಲೋಚನೆ ಮಾಡುತ್ತಿದ್ದೆ. ಇದನ್ನು ಬಗೆಹರಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬುದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಎಲ್ಲಿ ಹರಿಜನರ ಮೇಲೆ ಹಲ್ಲೆಯಾಗುತ್ತದೆ. Protection of Civil Rights Enforcement Cell ಅಂತ ಒಂದು ಸಂಸ್ಥೆ ಇದೆ. ಅವರು ಸ್ಥಳಕ್ಕೆ ಹೋಗುತ್ತಾರೆ. ಅವರು ಹರಿಜನರ ಮೇಲೆ ಕೇಸ್ ಹಾಕುವುದಿಲ್ಲ. ಹರಿಜನೇತರರ ಮೇಲೆ ಕೇಸ್ ಹಾಕುತ್ತಾರೆ. ಇದರ ಜೊತೆಯಲ್ಲೇ ಐ.ಪಿ.ಸಿ. ಆಕ್ಟ್ ಸೆಕ್ಷನ್ 107ರ ಪ್ರಕಾರ ಹರಿಜನರ ಮೇಲೆ ಕೇಸನ್ನೂ ಹಾಕುತ್ತಿದ್ದಾರೆ. ಇದು ನಿಲ್ಲಬೇಕು. ಇದು ಕಾನ್ಸ್ಟಿಟ್ಯೂಷನ್ ಸ್ಪಿರಿಟ್ ಅಲ್ಲ. ಕಾನೂನನ್ನು ದುರ್ಬಲವರ್ಗದವರ ಪರವಾಗಿ, ಶೋಷಣೆಗೆ ಒಳಗಾದವರ ಪರವಾಗಿ ಇಂಟರ್‌ಪ್ರಿಟ್ ಮಾಡುವುದನ್ನು ಕಲಿಯಬೇಕು. ಆದರೆ ಇಲ್ಲಿ ಏನು ಮಾಡುತ್ತಾರೆಂದರೆ ಹರಿಜನರ ಪ್ರಶ್ನೆ ಬಂದಾಗ ಪಿ.ಸಿ.ಆರ್. ಆಕ್ಟ್ ಪ್ರಕಾರ ಬೇರೆಯವರ ಮೇಲೆ ಕೇಸ್ ಹಾಕುವುದು. ಐ.ಪಿ.ಸಿ. 107ರ ಪ್ರಕಾರ ಹರಿಜನರನ್ನು ಬುಕ್ ಮಾಡುವುದು ಈ ರೀತಿಯಾಗುವುದಾದರೆ ಹರಿಜನರಿಗೆ ರಕ್ಷಣೆ ಎಲ್ಲಿ ಕೊಟ್ಟ ಹಾಗೆ ಆಯಿತು ? ಇವರಿಗೆ ಸಾಮಾಜಿಕ ನ್ಯಾಯ ಎಲ್ಲಿ ಸಿಕ್ಕುತ್ತದೆ ? ಇದು ನಿಲ್ಲಬೇಕು. ಕೂಡಲೇ ಇದರ ಬಗ್ಗೆ ಸುತ್ತೋಲೆಯನ್ನಾದರೂ

ಕಳುಹಿಸಿಕೊಡಿ. ಒಂದು ವೇಳೆ ಆ ಹರಿಜನ ನಿಜವಾಗಿಯೂ ಅಪರಾಧಿಯಾಗಿದ್ದರೂ ಅವರ ಮೇಲೆ ಐ.ಪಿ.ಸಿ. 107 ರ ಕೆಳಗಡೆ ಇವರನ್ನು ಒಳಪಡಿಸುವುದಾದರೆ, ಪಿ.ಸಿ.ಆರ್. ಆಕ್ಟ್ ಅಂತ ಏಕೆಮಾಡಿದ್ದೀರಿ ? ಇವರಿಗೆ ಮೊದಲೇ ತಿನ್ನುವುದಕ್ಕೆ ಹಿಟ್ಟು ಇಲ್ಲ. ಇರುವುದಕ್ಕೆ ಮನೆ ಇಲ್ಲ. ಅವರ ಕಾಲನ್ನೇ ಕಟ್ಟಿ ಕೇಸನ್ನು ವಾಪಸ್ಸು ತೆಗೆದುಕೊಳ್ಳತಕ್ಕಂತಹ ಪರಿಸ್ಥಿತಿ ಬರುತ್ತದೆ. Case ends with acquital. This should go. ಇದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಿ ಕೂಡಲೇ ಸರಿಯಾದ ಕ್ರಮವನ್ನು ತೆಗೆದುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಇದೆ. ಅದರಲ್ಲಿ ಏನು ಮಾಡಬೇಕೆಂದು ಇದೆ. ಏನಾದರೂ ಮಾಡಿ ಅಂದರೆ ಹೇಗೆ ? ತಾವೂ ಕೂಡ 3 ವರ್ಷಗಳ ಕಾಲ ಕಾನೂನು ಮಂತ್ರಿಗಳಾಗಿ ಇದೇ ಜಾಗದಲ್ಲಿ ಕುಳಿತಿದ್ದು. ಏನು ಮಾಡಬೇಕೆಂದು ಹೇಳಿ. ಅದರ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ.

SRI. Y. RAMAKRISHNA .—I am prepared to give concrete suggestions.

ಶ್ರೀ ಎ. ಲಕ್ಷ್ಮೀಸಾಗರ್.—ಏನು ಎಂಬುದನ್ನು ಹೇಳಿ. ಇಲ್ಲೇ ಹೇಳಿ. ಇಲ್ಲೇ ನಡೆಯಲಿ.

ಶ್ರೀ ವೈ. ರಾಮಕೃಷ್ಣ.—ಸಲಹೆ ಕೊಡುವುದಕ್ಕೇ ನಾನು ನಿಂತಿರುವುದು.

SRI. A. LAKSHMISAGAR.—Prevention of Untouchability Act is common to all. ಅದರಲ್ಲಿ ಕರ್ನಾಟಕ ರಾಜ್ಯದವರಿಗೆ ಅಂತ ಏನೂ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಅದು ಹೇಗೆ ಸಾಧ್ಯ ಎಂಬುದನ್ನು ಹೇಳುತ್ತೇನೆ. ನೀವೇನು Two sides traffic ಹೋಗುತ್ತಿದ್ದೀರಿ. ಅದನ್ನು ಬದಲಾವಣೆ ಮಾಡಿ One side traffic ಹೋಗಿ ಹರಿಜನರ ಮೇಲೂ ಏಕೆ ಬುಕ್ ಮಾಡುತ್ತೀರಿ ? ಅದನ್ನು ನಿಮ್ಮನ್ನು ಕೇಳದೆ ಇನ್ಯಾರನ್ನು ಕೇಳಬೇಕು ?

SRI. A. LAKSHMISAGAR .—When a complaint is received in a Police Station disclosing the commission of a cognizable offence, I cannot have complaint as to what complaint has been lodged in the Police Station. It appears as though, the Police Constables are under my control. This is not the matter. If he is interested in protecting SCs/STs, let him give concrete suggestions.

SRI. Y. RAMAKRISHNA.—Prosecution is working under your direct control. ಆ ರೀತಿಯ ದೂರುಗಳು ಬಂದಾಗ ಕೇಸನ್ನು ಬುಕ್ ಮಾಡಿ ಚಾರ್ಜ್‌ಷೀಟ್ ಹಾಕುತ್ತಾರೆ. ಚಾರ್ಜ್‌ಷೀಟ್ ಹಾಕಿದ ಮೇಲೆ ಕೇಸನ್ನು ವಿತ್‌ಡ್ರಾ ಮಾಡುವುದಕ್ಕೆ ನಿಮ್ಮ ಸಲಹೆಯನ್ನು ಕೇಳುತ್ತಾರೆ. ಆ ಒಂದು ಸಂದರ್ಭದಲ್ಲಿ ತಾವು ತಮ್ಮ ಅಭಿಪ್ರಾಯವನ್ನು ಏಕೆ ಕೊಡಬಾರದು ? ಇದರ ಕಡೆ ಗಮನ ಕೊಡಬೇಕಾಗುತ್ತದೆ.

ಮತ್ತೊಂದು ಮುಖ್ಯವಾದಂತಹ ವಿಚಾರವೇನೆಂದರೆ, ಎಲ್ಲ ರಾಷ್ಟ್ರಗಳಲ್ಲಿರುವ ರೀತಿಯಲ್ಲಿ ಮೊಬೈಲ್ ಕೋರ್ಟ್‌ಗಳನ್ನು ಪ್ರಾರಂಭ ಮಾಡಿ. ಅದರಲ್ಲಿ ಅನ್‌ಟಚಬಿಲಿಟಿ ಕೇಸಸ್ ಹಾಗೂ ಅಗತ್ಯ ವಸ್ತುಗಳ ಕಾಯಿದೆಗೆ ಬರತಕ್ಕಂತಹ ಕೇಸ್‌ಗಳನ್ನು ಬೇಗ ತೀರ್ಮಾನ ಮಾಡುವುದಕ್ಕೆ ಸಹಾಯಕವಾಗುತ್ತದೆ. ಈ ರೀತಿಯ ಮೊಬೈಲ್ ಕೋರ್ಟ್‌ಗಳನ್ನು ವಿಭಾಗಕ್ಕೆ ಒಂದರಂತೆ ಪ್ರಾರಂಭ ಮಾಡಿ. ಇದರಿಂದ ಬೇಗ ಕೇಸ್‌ಗಳನು ಇತ್ಯರ್ಥ ಮಾಡುವುದಕ್ಕೆ ಸಹಾಯಕವಾಗುತ್ತದೆ. ಈ ರೀತಿಯ ಮೊಬೈಲ್ ಕೋರ್ಟ್‌ಗಳನ್ನು ಅನೇಕ ರಾಜ್ಯಗಳಲ್ಲಿ ಈಗಾಗಲೇ ಜಾರಿಗೆ ತಂದಿದ್ದಾರೆ. ನಮ್ಮ ರಾಜ್ಯದಲ್ಲೂ ಜಾರಿಗೆ ತರಬೇಕೆಂದು ನಾವು ಪ್ರಯತ್ನ ಮಾಡಿದೆವು. ಆದರೆ ರಾಜ್ಯಾಂಗಬದ್ಧವಾಗಿ ಹೈಕೋರ್ಟಿನ ಅನುಮತಿಯನ್ನು ಪಡೆದು ಮಾಡಬೇಕಾಗಿದೆ. ಆ ಕೆಲಸವನ್ನು ನಾವು ಮಾಡುವುದಕ್ಕಾಗಲಿಲ್ಲ. ಆ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. Please think whether it is feasible to open four-man Mobile Courts only to try offences both under Essential Commodities Act and under P.E.R Act. ಅಷ್ಟು ಕೆಲಸವನ್ನು ಮಾಡಿದರೆ ಸರಿಹೋಗುತ್ತದೆ.

ಮತ್ತೊಂದು ವಿಚಾರದ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಕಾಗದವನ್ನೂ ಬರೆದಿದ್ದೇನೆ. ಅದು ಹೌಸಿಂಗ್‌ನ ವಿಚಾರದಲ್ಲಿ. ಅದರ ಬಗ್ಗೆ ಮಾನ್ಯ ಧರ್ಮಸಿಂಗ್‌ರವರು ಮಾತನಾಡುವವರು ಇದ್ದಾರೆ. ಒಂದೇ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಪಶುವಾಗಲಿ, ಪಕ್ಷಿಯಾಗಲಿ, ಅವುಗಳೆಲ್ಲರೂ ತಮ್ಮ ತಮ್ಮ ಗೂಡುಗಳಲ್ಲಿರುವುದಕ್ಕೆ ಇಷ್ಟಪಡುತ್ತವೆ. ಅದೇ ರೀತಿ ಮನುಷ್ಯನಾದವನೂ ಕೂಡ ತನ್ನ ಗೂಡಿನಲ್ಲಿ ಇರಬೇಕೆಂದು ಅಪೇಕ್ಷೆ ಪಡುತ್ತಾನೆ. ನೇರವಾಗಿ ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರುತ್ತೇನೆ. ಒಂದೊಂದು

ತಾಲ್ಲೂಕಿನಲ್ಲೂ ಒಂದೊಂದು ಸಾವಿರ ಮನೆಗಳನ್ನು ಕಟ್ಟಬೇಕೆಂಬ ನಿಯಮ ಇತ್ತು. ಆದರೆ ಇವತ್ತಿನ ದಿವಸ ಅದನ್ನು ಪೂರ್ತಿಯಾಗಿ ನಿಲ್ಲಿಸಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸಾವಿರ ಮನೆಗಳನ್ನು ಕಟ್ಟತಕ್ಕಂತಹದ್ದಕ್ಕೆ ಆರ್ಡರ್ ಇಲ್ಲ. ಮನೆಗಳೂ ಬಂದಿಲ್ಲ. ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. "Curse of the poor will destroy the nation and blessings of the poor will make the kingdom flourish". ಬಡವರ ಶಾಪ ತಟ್ಟಬಾರದು. ಬಡವರು ಕಣ್ಣೀರನ್ನು ಹರಿಸಬಾರದು.

(ಗೊಂದಲ)

ನಾನು ಅನ್‌ಪಾರ್ಲಿಮೆಂಟರಿ ಪದವನ್ನು ಬಳಕೆ ಮಾಡಲಿಲ್ಲ. ನನ್ನ ಕ್ಷೇತ್ರದಲ್ಲಿ ಏನಾಗಿದೆ ಅಂತ ಹೇಳುತ್ತೇನೆ. ದಯಮಾಡಿ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸಾವಿರ ಮನೆಗಳನ್ನು ಕಟ್ಟಬೇಕೆಂದು ಹಿಂದಿನ ಸರ್ಕಾರ ನಿರ್ಧಾರ ಮಾಡಿದ್ದರೂ ಕೂಡ ಅದಕ್ಕಾಗಿ ಮೂರು ಕಾಸನ್ನೂ ಹಣ ಇಟ್ಟಿಲ್ಲ. ಕಟ್ಟುತ್ತೇವೆಂದು ಹೇಳಿದವರು ನೀವು. ಆ ರೀತಿ ಆರ್ಡರ್ ಮಾಡಿದವರೂ ನೀವು. ಅದಕ್ಕಾಗಿ. ಹಣವನ್ನು ಕೊಡದಿರುವವರೂ ನೀವು. ಆದರೆ ಏಕೆ ಮನೆಗಳನ್ನು ಕಟ್ಟಲಿಲ್ಲ ಅಂತ ಕೇಳುವುದು ನನ್ನನ್ನು...

ಶ್ರೀ ವೈ. ರಾಮಕೃಷ್ಣ.—ಅಷ್ಟರಲ್ಲಿ ನಿಮ್ಮ ಸರ್ಕಾರ ಬಂತು. ಅದಕ್ಕೆ ಹಣವನ್ನು ತೆಗೆದು ಇಡ ತಕ್ಕಂಥದ್ದು ನಿಮ್ಮ ಕರ್ತವ್ಯ. ಅವರ ಶಾಪ ಬಡವರ ಶಾಪ, ನಿಮಗೆ ಈಗಾಗಲೇ ತಟ್ಟಿದೆ. Your Government will collapse on the same day. Your Government is under oxygen. ಎಷ್ಟೋ ಮನೆಗಳು ಬಿದ್ದು ಹೋಗುತ್ತಿವೆ. ಅವರು ಕಣ್ಣೀರು ಇಡುತ್ತಿದ್ದಾರೆ. 300, 400 ಹಾಗೂ 500 ಮನೆಗಳು ಬಿದ್ದುಹೋಗುತ್ತಿವೆ. ನನ್ನ ಕ್ಷೇತ್ರದಲ್ಲಿ 350 ಮನೆಗಳಿಗೆ ಗೋಡೆಗಳು ಎದ್ದು ನಿಂತಿವೆ. ಆದರೆ ಅವರಿಗೆ ಹಣವನ್ನು ಕೊಡದೆ ಮನೆಗಳನ್ನು ಪೂರ್ತಿ ಮಾಡುವುದಕ್ಕೆ ಅವರಿಂದಾಗುತ್ತಿಲ್ಲ. 175 ಮನೆಗಳಿಗೆ ಮಾತ್ರ ಹಣವನ್ನು ಕೊಟ್ಟಿದ್ದೀರಿ. ಇನ್ನುಳಿದ ಮನೆಗಳಿಗೆ ಕಟ್ಟಿದಂತಹ ಗೋಡೆ ಸಂಪೂರ್ಣವಾಗಿ ಬಿದ್ದು ಹೋಗಬೇಕೆಂಬುದು ನಿಮ್ಮ ಇಷ್ಟವೇ ? ಈ ವಿಚಾರವನ್ನು ಅಷ್ಟೊಂದು ಲಘುವಾಗಿ ತೆಗೆದುಕೊಳ್ಳಬಾರದೆಂದು ಹೇಳುತ್ತಾ ಇದಕ್ಕೆ ಕೂಡಲೇ ಹಣವನ್ನು ಒದಗಿಸಬೇಕೆಂದು ಸರ್ಕಾರಕ್ಕೆ ಸೂಚನೆಯನ್ನು ಕೊಡುತ್ತಾ, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವಮೂರ್ತಿ.—ಜನತಾ ಮನೆಗಳಿಗೆ ಹಣವನ್ನು ಕೊಡಲಿಲ್ಲ ಅಂತ ಹೇಳಿದರೆ, ಜನತಾ ಮನೆಗಳು ಹೇಗೆ ಕುಸಿದು ಬಿದ್ದುಹೋಗುತ್ತಿವೆಯೋ, ಅದೇ ರೀತಿ ಜನತಾ ಪಕ್ಷದ ಸರ್ಕಾರವೂ ಬಿದ್ದುಹೋಗುತ್ತದೆ.

*ಶ್ರೀ ಹನುಮಂತರಾವ್ ದೇಸಾಯಿ (ಅಫಜಲ್‌ಪೂರ್).—ಮಾನ್ಯ ಉಪಾಧ್ಯಕ್ಷರೇ, ಕಾನೂನು ಇಲಾಖೆಗಳ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾನು ಕೆಲವೊಂದು ವಿಷಯಗಳನ್ನು ಇಲ್ಲಿ ಮಾತನಾಡಲು ಬಯಸುತ್ತೇನೆ. ಇಲ್ಲಿಯವರೆಗೆ ಈ ಮನೆಯ ಹಿರಿಯ ಸದಸ್ಯರಾದಂಥ ಶ್ರೀ ವೈ. ರಾಮಕೃಷ್ಣ ಅವರು ಸಾಕಷ್ಟು ಸಮಯ ತೆಗೆದುಕೊಂಡು ಮಾತನಾಡಿದ್ದಾರೆ. ಈ ಸರ್ಕಾರ ಬಂದ ಮೇಲೆ ಹರಿಜನರ ಮೇಲೆ ಏನು ದೌರ್ಜನ್ಯ ನಡೆಯಿತು ಅದರ ಬಗ್ಗೆ ಈ ಸರ್ಕಾರ ಯಾವುವೇ ಕ್ರಮವನ್ನು ತೆಗೆದುಕೊಂಡಿಲ್ಲ ಅನ್ನುವ ಮಾತನ್ನು ಹೇಳಿದರು. ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾ ಇದೆ ಅನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು ಎಂದು ಹೇಳಿದ್ದಾರೆ. ಹರಿಜನರ ಮೇಲೆ ದೌರ್ಜನ್ಯ ನಡೆದಿದೆ, ನಿಜ, ನಾನೂ ಸಹ ಅದನ್ನು ಒಪ್ಪುತ್ತಾ ಇದ್ದೇನೆ. ಆದರೆ ಜನತಾ ಸರ್ಕಾರ ಬಂದಮೇಲೆ ನಡೆದಿಲ್ಲ ಅನ್ನುವುದನ್ನು ಹೇಳುತ್ತೇನೆ. ಹಿಂದಿನ ಸರ್ಕಾರ ಇದ್ದಾಗ ಹರಿಜನರ ಮೇಲೆ ಸಾಕಷ್ಟು ದೌರ್ಜನ್ಯ ನಡೆದಿದೆ, ಆದರೆ ಆ ಸರ್ಕಾರ ಯಾವುವೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಅನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನನಗೆ ಗೊತ್ತಿದ್ದ ಮಟ್ಟಿಗೆ ಕಾಂಗ್ರೆಸ್ ಸರ್ಕಾರ ಇದ್ದಾಗ ನನ್ನ ಮತ ಕ್ಷೇತ್ರವಾದ ಗೊಬ್ಬೂರು, ಹಸಿರುಗೊಂಡ್ಗಿ ಮತ್ತು ರೇವೂರ್ ಈ ಕ್ಷೇತ್ರಗಳಲ್ಲಿ ಹರಿಜನರ ಮೇಲೆ ದೌರ್ಜನ್ಯ ನಡೆಯಿತು, ಇಂದೂ ಕೂಡ ಆ ಕೇಸ್‌ಗಳು ನಡೆಯುತ್ತಾ ಇವೆ, ಇತ್ಯರ್ಥವಾಗಿಲ್ಲ. ಇದು ಏನು ತೋರಿಸುತ್ತದೆ ಎಂದರೆ ಹಿಂದಿನ ಸರ್ಕಾರ ಇದನ್ನು ತಡೆಯುವ ಸಲುವಾಗಿ ಕ್ರಮವನ್ನು ಕೈಗೊಂಡಿಲ್ಲ ಎಂದು ಹೇಳುತ್ತೇನೆ. ನಮ್ಮ ಜನತಾ ಸರ್ಕಾರ ಬಂದಮೇಲೆ ನನ್ನ ಮತ ಕ್ಷೇತ್ರದಲ್ಲಿ ಯಾವುವೇ ಇಂತಹ ಪ್ರಕರಣಗಳು, ಹರಿಜನರ ಮೇಲೆ ದೌರ್ಜನ್ಯ ನಡೆದಂಥ ಪ್ರಕರಣಗಳು. ಇದುವರೆಗೂ ಯಾವುವೇ ಇಲ್ಲ ಎಂದು ಈ ಸದನದಲ್ಲಿ ನಾನು ಸ್ಪಷ್ಟಪಡಿಸುತ್ತೇನೆ.

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎರಡನೆಯದಾಗಿ ನ್ಯಾಯಾಲಯುಗಳಲ್ಲಿ ಅನೇಕ ಕೇಸ್‌ಗಳು ಇನ್ನೂ ಕೂಡ ನಿರ್ಣಯವಾಗದೇ ಹಾಗೆಯೇ ಉಳಿದಿವೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಒಂದೊಂದು ಕೋರ್ಟುಗಳನ್ನು ಸ್ಥಾಪನೆ ಮಾಡಬೇಕೆನ್ನುವ ನಿರ್ಣಯವನ್ನು ನಾವು ಕೈಗೊಂಡಿದ್ದೆವು ಎಂದು ಮಾಜಿ ಮಂತ್ರಿಗಳಾದ ಶ್ರೀ ವೈ. ರಾಮ ಕೃಷ್ಣ ಅವರು ಹೇಳಿದರು. ಸುಮಾರು 8–10 ವರ್ಷಗಳಿಂದಲೂ ಕೂಡ ಅಫಜಲ್‌ಪೂರ್ ತಾಲ್ಲೂಕಿಗೆ ಒಂದು ಕೋರ್ಟು ಕೊಡಿ ಎಂದು ಕೇಳುತ್ತಲೇ ಬಂದಿದ್ದೇವೆ. ಹಿಂದೆ ಶ್ರೀ ವೈ. ರಾಮಕೃಷ್ಣ ಅವರು ಕಾನೂನು ಮಂತ್ರಿಗಳಾಗಿದ್ದಾಗಲೂ ಅನೇಕ ಸಲ ಅವರಲ್ಲಿ ಮನವಿ ಮಾಡಿಕೊಂಡಿದ್ದೇವೆ. ಇದುವರೆಗೂ ಕೊಡಲಿಲ್ಲ. ಅಷ್ಟೇ ಅಲ್ಲ, ಹಿಂದಿನ ಮಾಜಿ ಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರ ಕ್ಷೇತ್ರವಾದ ಜೇವರ್ಗಿಯಲ್ಲೂ ಕೂಡ ಒಂದು ಕೋರ್ಟು ಕೊಡಿ ಎಂದು ಕೇಳುತ್ತಲೇ ಬಂದಿದ್ದೆವು. ಅಲ್ಲಿಗೂ ಕೊಟ್ಟಿಲ್ಲ. ಅವರೇ ಅಧಿಕಾರ ದಲ್ಲಿದ್ದರೂ ಕೂಡ ಅವರ ತಾಲ್ಲೂಕಿಗೇ ಆಗಲಿ ನಮ್ಮ ಅಫಜಲ್‌ಪೂರ್ ತಾಲ್ಲೂಕಿಗೇ ಆಗಲಿ ಕೋರ್ಟು ಕೊಡುವ ಒಂದು ವ್ಯವಸ್ಥೆಯನ್ನು ಮಾಡಲಿಲ್ಲ. ನಾನು ಈ ಸಂದರ್ಭದಲ್ಲಿ ವಿಶೇಷವಾಗಿ ಹೇಳಬಯಸುತ್ತೇನೆ: ನಿಜವಾಗಿಯೂ ಕಕ್ಷಿದಾರರಿಗೆ ನ್ಯಾಯ ದೊರೆಯಬೇಕು, ಆ ನ್ಯಾಯ ತ್ವರಿತವಾಗಿ ದೊರೆಯಬೇಕು, ಅಷ್ಟೇ ಅಲ್ಲ, ಆ ನ್ಯಾಯ ಕಡಿಮೆ ವೆಚ್ಚದಲ್ಲಿ ದೊರೆಯಬೇಕು. ಇಂಥಾ ಒಂದು ವ್ಯವಸ್ಥೆಯನ್ನು ಹಿಂದಿನ ಸರ್ಕಾರ ಮಾಡುವುದರಲ್ಲಿ ವಿಫಲವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಇಂದಿನ ಸರ್ಕಾರ ದಲ್ಲಿರುವ ಕಾನೂನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಶ್ರೀಮಾನ್ ಧರ್ಮಸಿಂಗ್‌ರವರ ಪರ ವಾಗಿಯೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದೇನೆಂದರೆ ನಮ್ಮ ಅಫಜಲ್‌ಪೂರ್ ತಾಲ್ಲೂಕಿಗೆ ಒಂದು ಕೋರ್ಟು ಮತ್ತು ಜೇವರ್ಗಿಗೆ ಒಂದು ಕೋರ್ಟು ಬಹಳ ಅತ್ಯವಶ್ಯವಾಗಿರುವುದರಿಂದ ಅಲ್ಲಿಗೆ ತೀವ್ರಗತಿ ಯಲ್ಲಿ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ನಮ್ಮ ಒಂದು ಕುಂದುಕೊರತೆ ಯನ್ನೂ ಸಹ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮ ಅಫಜಲ್‌ಪೂರ್ ತಾಲ್ಲೂಕಿನವರು ಏನಾದರೂ ಕೋರ್ಟಿಗೆ ಬರಬೇಕಾದರೆ 100 ಕಿಲೋಮೀಟರ್ ಇರುವ ಕಲ್ಬುರ್ಗಿ ನಗರಕ್ಕೆ ಬರಬೇಕು. ಹಾಗೆ ಬರಬೇಕಾದರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆ ಅನ್ನುವುದು ತಾವೇ ತಿಳಿದುಕೊಳ್ಳಬೇಕು. ಮತ್ತೆ ಯಾರಾದರೂ ಕೂಡ ಕ್ರಿಮಿನಲ್ ಕೇಸಸ್‌ಗೆ ಬರಬೇಕಾದರೆ ಅದು ಒಬ್ಬರಲ್ಲ, ಇಬ್ಬರಲ್ಲ, 40–50 ಜನ ಆರೋಪಿಗಳು ಬರಬೇಕಾದರೆ ಅದು ಪ್ರೈವೇಟ್ ಕಂಪ್ಲೈಂಟ್ ಆಗಲಿ ಅಥವಾ ಸರ್ಕಾರದ ಪ್ರಾಸಿಕ್ಯೂಷನ್ ಕೇಸಸ್‌ಗೆ 20 ರಿಂದ ?? ಜನದವರೆಗೆ ಬರಬೇಕಾಗುತ್ತದೆ. ಅವರೂ ಸಹ 100 ಕಿಲೋಮೀಟರ್ ಇರುವ ಗುಲ್ಬರ್ಗ ನಗರಕ್ಕೆ ಬರಬೇಕಾಗುತ್ತದೆ ಇದರಿಂದ ಅವರ ಖರ್ಚು ಎಷ್ಟಾಗುತ್ತದೆ, ಅವರು ಎಷ್ಟು ತೊಂದರೆಗೊಳಗಾಗುತ್ತಾರೆ, ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು.—100 ಕಿಲೋಮೀಟರ್ ಇರುವ ಗುಲ್ಬರ್ಗಾಕ್ಕೆ ಬರಬೇಕು.

ಶ್ರೀ ಹನುಮಂತರಾವ್ ದೇಸಾಯಿ.—ಹೌದು ಸ್ವಾಮಿ. ಆದುದರಿಂದ ನಾನು ಮಾತನ್ನು ಒತ್ತಿ ಹೇಳುತ್ತಿದ್ದೇನೆ. ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ಗಮನಿಸಿ ಅಲ್ಲಿಗೆ ಒಂದು ಕೋರ್ಟನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಈ ಕಾನೂನಿನಲ್ಲಿ ಅನೇಕ ಲೋಪದೋಷಗಳು ಇವೆ ಎನ್ನುವುದನ್ನು ಎತ್ತಿ ಮಾಜಿ ಮಂತ್ರಿಗಳಾದ ಶ್ರೀ ವೈ. ರಾಮಕೃಷ್ಣ ಅವರು ತಮ್ಮ ಅನುಭವದಿಂದ ಎಲ್ಲ ವಿಚಾರಗಳನ್ನೂ ಸಹ ವಿಶದಪಡಿಸಿದ್ದಾರೆ. ಇನ್ನು ನಾನು ಈ ವಿಷಯದಲ್ಲಿ ಹೆಚ್ಚಿಗೆ ಹೇಳಬಯಸುವುದಿಲ್ಲ. ನಮ್ಮ ಅಫ್‌ಜಲ್‌ಪೂರ್ ತಾಲ್ಲೂಕಿಗೆ ಒಂದು ಕೋರ್ಟನ್ನು ಕೊಡಬೇಕೆಂದು ಮಾನ್ಯ ಕಾನೂನು ಮಂತ್ರಿ ಗಳನ್ನು ಕೇಳಿಕೊಂಡು, ಇಷ್ಟು ಮಾತುಗಳನ್ನಾಡಲು ಮಾನ್ಯ ಉಪಾಧ್ಯಕ್ಷರು ನನಗೆ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ).—ಮಾನ್ಯ ಉಪಾಧ್ಯಕ್ಷರೇ, ಇವತ್ತು ಹೌಸಿಂಗ್ ಮತ್ತು ಇನ್ನೂ ಇತರ ಬೇಡಿಕೆಗಳ ಬಗ್ಗೆ ಚರ್ಚೆಯಾಗುತ್ತಾ ಇದೆ. ಮತ್ತು ಈಗಾಗಲೇ ವೈ. ರಾಮಕೃಷ್ಣ ಅವರು ಹೌಸಿಂಗ್ ಮೇಲಿನ ಚರ್ಚೆ ಬಿಟ್ಟು ಉಳಿದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಶ್ರೀ ಹನುಮಂತ ರಾವ್ ದೇಸಾಯಿ ಅವರೂ ಸಹ ಈ ಬೇಡಿಕೆಗಳ ಮೇಲೆ ಮಾತನಾಡಿದ್ದಾರೆ. ಇದರಲ್ಲಿ ಮುಖ್ಯವಾದದ್ದು ಯಾವುದು ಎಂದರೆ ಹೌಸಿಂಗ್. ನಾನು ಇದರ ಮೇಲೆ ನೇರವಾಗಿ ಮಾತನಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಜನ ಬಡವರು ಇದ್ದಾರೆ, ಆ ಬಡವರಿಗೆ ಸಹಾಯ ಮಾಡತಕ್ಕಂಥ ಕಾರ್ಯಕ್ರಮ ಯಾವುದು ಎಂದರೆ ಈ ಹೌಸಿಂಗ್. ಇವತ್ತಿನ ದಿವಸ ಜನತಾ ಸರ್ಕಾರ ಆಡಳಿತದಲ್ಲಿ ಇದೆ. ಹೋದ ಚುನಾವಣೆಯಲ್ಲಿ ಯಾವ ರೀತಿಯಾಗಿ ಇವರಿಗೆ ಓಟು ಕೊಟ್ಟಿದ್ದಾರೆ, 100 ಕ್ಕೆ ಎಷ್ಟು ಜನ ಇವರಿಗೆ ಮತ ಕೊಟ್ಟಿದ್ದಾರೆ ಎನ್ನುವುದೂ ಸಹ ಸ್ಪಷ್ಟವಾಗಿ ಇದೆ. ಇವತ್ತು ಈ ಸರ್ಕಾರ ರಚನೆಯಾದ ಮೇಲೆ ಕೆಲವು ನೈತಿಕ ಹೊಣೆ, ನೈತಿಕ ಜವಾಬ್ದಾರಿ ಅವರ ಮೇಲೆ ಬಿದ್ದಿದೆ. ಇವತ್ತು ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇಟ್ಟಿರತಕ್ಕಂಥ ಈ ಸರ್ಕಾರ ಏನು ಇದೆ ಅದು ಪ್ರಜಾಪ್ರಭುತ್ವದ ಸಂರಕ್ಷಣೆ ಮಾಡಬೇಕು. ಜೊತೆಗೆ ದೇಶದಲ್ಲಿರತಕ್ಕಂಥ ಜನರ ಸಂರಕ್ಷಣೆ, ದೇಶದ ಸಂಪತ್ತಿನ ಸಲುವಾಗಿ, ರಾಷ್ಟ್ರದ ಭವಿಷ್ಯದ ಸಲುವಾಗಿ ಹಗಲೂ ರಾತ್ರಿ ದುಡಿಯತಕ್ಕಂಥ ಜನರು ಏನು ಇದ್ದಾರೆ, ಯಾರು ಬಡವರು ಇದ್ದಾರೆ, ಯಾರು ಕಾರ್ಮಿಕರು

ಇದ್ದಾರೆ, ಹರಿಜನ–ಗಿರಿಜನರು ಏನು ಇದ್ದಾರೆ, ಹಿಂದುಳಿದ ವರ್ಗದವರು ಏನು ಇದ್ದಾರೆ, ಇನ್ನು ಬೇರೆ ಬೇರೆ ಜನರು ಏನು ಇದ್ದಾರೆ ಅವರ ಬಗ್ಗೆಯೂ ಕೂಡ ಸರ್ಕಾರ ಯಾವ ರೀತಿಯಾಗಿ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ ಅನ್ನುವುದರ ಬಗ್ಗೆ ಅವರು ಈ ಸದನದ ಮುಂದೆ ಇಡಬೇಕಾಗಿದೆ. ಶ್ರೀಮಾನ್ ಎ. ಲಕ್ಷ್ಮೀಸಾಗರ್‌ರವರು ಈವೊತ್ತು ವಸತಿ ಖಾತೆಯನ್ನು ವಹಿಸಿಕೊಂಡಿದ್ದಾರೆ. 1972 ರಲ್ಲಿ ಇದು ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಅಂತ ಒಂದೇ ಇಲಾಖೆಯಾಗಿ ಇತ್ತು. ಇವತ್ತು ಈ ಅರ್ಬನ್ ಡೆವಲಪ್‌ಮೆಂಟನ್ನು ಬೇರ್ಪಡಿಸಿ ಈ ಹೌಸಿಂಗ್ ಅನ್ನುವ ಖಾತೆಯನ್ನು ಇವರಿಗೆ ಕೊಟ್ಟಿದೆ. ಮಾನ್ಯ ಸಚಿವರು ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ಹೌಸಿಂಗ್ ಬಗ್ಗೆ ಸಾಕಷ್ಟು ವಿಷಯಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಜನತಾ ಗೃಹ ವಿಷಯವಾಗಿ, ಬಡಜನರಿಗೆ, ಬೇರೆ ಬೇರೆ ಜನರಿಗೆ ವಿವಿಧ ರೀತಿಯ ಯೋಜನೆಗಳನ್ನು ಹಾಕಿ ಅವರುಗಳಿಗೆ ಕಟ್ಟಿಸಿದಂಥ ಮನೆಗಳ ಬಗ್ಗೆ ಯಾವ ರೀತಿ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ಅನ್ನುವುದರ ಬಗ್ಗೆ ಈ ಮನೆಯಲ್ಲಿ ಎಷ್ಟೋ ಪ್ರಶ್ನೆಗಳನ್ನು ಹಾಕಿದ್ದಾರೆ. ಮತ್ತು ಅವರು ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟವರೂ ಸಹ ಆಗಿದ್ದಾರೆ. ನಾನು ಈ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಇವತ್ತು ಈ ಬಗ್ಗೆ ಅವರ ಮನಸ್ಸಿನಲ್ಲಿ ಒಂದು ಕಮಿಟ್‌ಮೆಂಟ್ ಇದೆ ಅನ್ನುವುದನ್ನು ನೆನಪು ಮಾಡಿಕೊಡುವುದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಶ್ರೀಮಾನ್ ಮಹೇಶ್ವರಪ್ಪನವರು ಮೊದಲು ಸೋಷಲಿಸ್ಟ್‌ನಲ್ಲಿದ್ದರೂ, ಈಗ ಜನತಾ ಪಕ್ಷಕ್ಕೆ ಬಂದಿದ್ದಾರೆ. ಅವರು ದಿವಂಗತ ಶ್ರೀ ಗೋಪಾಲಗೌಡರ ಒಂದು ನೇತೃತ್ವದಲ್ಲಿ ಕೆಲಸಕಾರ್ಯಗಳನ್ನು ಚೆನ್ನಾಗಿ ಮಾಡಿದ್ದಾರೆ. ಅವರ ಜಿಲ್ಲೆಯಲ್ಲಿ ಸಾಕಷ್ಟು ಕೆಲಸಗಳನ್ನೂ ಕೂಡ ಮಾಡಿದ್ದಾರೆ. ಅಲ್ಲದೆ ಇವೊತ್ತು ನಮ್ಮ ಕೈಯ್ಯಲ್ಲಿ ಸರ್ಕಾರ ಸಿಕ್ಕಿದರೆ ಯಾವ ರೀತಿ ಕೆಲಸ ಮಾಡುತ್ತೇವೆ ಅನ್ನುವುದು. ನಮ್ಮ ಮನಸ್ಸಿನಲ್ಲೂ ಸಹ ಒಂದು ಭಾವನೆ ಇದೆ. ಆದುದರಿಂದ ನಾನು ಕಳಕಳಿಯಿಂದ ಹೇಳುತ್ತೇನೆ. ನಾನೂ ಕೂಡ ಹಿಂದೆ ವಸತಿ ಖಾತೆಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. 1973 ರಲ್ಲಿ ಪ್ರಧಾನ ಮಂತ್ರಿಗಳ ಒಂದು ಆದೇಶದ ಮೇರೆಗೆ ದಿವಂಗತ ದೇವರಾಜ ಅರಸ್‌ರವರು ಈ ಕಾರ್ಯಕ್ರಮವನ್ನು ಜಾರಿಗೆ ತಂದರು. ಅಲ್ಲದೆ ಪ್ರಧಾನ ಮಂತ್ರಿಯವರ ಆದೇಶದ ಮೇರೆಗೆ ಎಲ್ಲಾ ಲಾಜ್ಯಗಳಲ್ಲೂ ಕೂಡ 20 ಅಂಶದ ಕಾರ್ಯಕ್ರಮಗಳನ್ನು ಅಂತರ್ಗತವಾಗಿ ಮಾಡಬೇಕೆನ್ನುವ ಸಲುವಾಗಿ ಈ ದಿಶೆಯಲ್ಲಿ ಜನತಾ ಮನೆಗಳನ್ನು ಕಟ್ಟಿಸುವ ಕೆಲಸ ಪ್ರಾರಂಭವಾಯಿತು.

ಇದಕ್ಕೂ ಮಿಗಿಲಾಗಿ ಕರ್ನಾಟಕ ರಾಜ್ಯದಲ್ಲಿ ಮಾನ್ಯ ದೇವರಾಜ ಅರಸ್ ಅವರು ಇದ್ದಂಥ ಕಾಲದಲ್ಲಿ 1973 ರಲ್ಲಿ ಒಂದು ಮಹತ್ತರವಾದ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ಜಾರಿಗೆ ತರಲು ಮನಸ್ಸು ಮಾಡಿದರು. 1973 ರಿಂದ 1980 ರವರೆಗೆ ನಾನು ಮಂತ್ರಿಯಾಗುವುದಕ್ಕೆ ಮುಂಚೆ ಆಗಿನ ಸರ್ಕಾರ ಬೇರೆ ಬೇರೆ ಸ್ಕೀಂಗಳಲ್ಲಿ 2 ಲಕ್ಷ 76 ಸಾವಿರ ಮನೆಗಳನ್ನು ಕಟ್ಟತಕ್ಕ ಒಂದು ಯೋಜನೆಯನ್ನು ಹಾಕಿಕೊಂಡು ಅದರಲ್ಲಿ 1·58 ಸಾವಿರ ಮನೆಗಳನ್ನು ಪೂರ್ಣ ಮಾಡಿತು. 1980 ರಲ್ಲಿ ನಾನು ಪರಿಶೀಲನೆ ಮಾಡಿದಾಗ ಯಾವ ರೀತಿಯಾಗಿ ಇದು ಬಡಜನರಿಗೆ ಅನುಕೂಲವಾಗುತ್ತದೆ ಎಂದು ತಿಳಿದು 1·17 ಸಾವಿರ ಮನೆಗಳು ಏನು ಅಪೂರ್ಣವಾಗಿದ್ದವು ಇದರ ಜೊತೆಗೆ ಒಟ್ಟು 2·76 ಸಾವಿರ ಮನೆಗಳನ್ನು 27 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿದೆವು. 1980–81 ರಲ್ಲಿ 50 ಸಾವಿರ ಮನೆಗಳನ್ನು ತೆಗೆದುಕೊಂಡು, 1981–82 ರಲ್ಲಿ ಒಂದು ಲಕ್ಷ ಮನೆಗಳನ್ನು ತೆಗೆದುಕೊಂಡು ಎರಡೂವರೆ ವರ್ಷದಲ್ಲಿ 2·67 ಲಕ್ಷ ಮನೆಗಳನ್ನು ಪೂರ್ಣ ಮಾಡಿದ್ದೇವೆ. ಇದಕ್ಕೆ ನಾವು ಸುಮಾರು 16 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದೇವೆ. ರಾಜ್ಯದಲ್ಲಿ 1983 ಕ್ಕೆ ಮುಂಚೆ ಇಷ್ಟು ಮನೆಗಳನ್ನು ನಾವು ಕಟ್ಟಿದ್ದೆವು. ಇವತ್ತು 4·26 ಲಕ್ಷ ಮನೆಗಳನ್ನು ಕಟ್ಟತಕ್ಕದ್ದಕ್ಕೆ ಮಂಜೂರಾತಿಯಾಗಿದೆ. ಇದರಲ್ಲಿ 3·46 ಸಾವಿರ ಮನೆಗಳು ಪೂರ್ಣವಾಗಿವೆ, ಇದಕ್ಕೆ ಒಟ್ಟು 76·69 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇದನ್ನು ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಸಂಬಂಧಪಟ್ಟ ಮಂತ್ರಿಗಳು ಇದರ ಪರ್ಫಾರ್ಮೆನ್ಸ್ ಬಡ್ಜೆಟ್ ಏನು ಇಟ್ಟಿದ್ದಾರೆ ಅದಕ್ಕೆ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಅವರು ಸತ್ಯಾಂಶವನ್ನು ಪ್ರಾಮಾಣಿಕವಾಗಿ ನಮ್ಮ ಮುಂದಿಟ್ಟಿದ್ದಾರೆ. ಬಡವರಿಗಾಗಿ ಇರತಕ್ಕ ಕಾರ್ಯಕ್ರಮಗಳಲ್ಲಿ ನಾವು ರಾಜಕೀಯ ಮಾಡುವುದು ಬೇಡ. ಇಂಥ ಯೋಜನೆಯಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಆದಂಥ ಪ್ರಗತಿ ಬೇರೆ ಯಾವ ರಾಜ್ಯದಲ್ಲಿ ಇಡೀ ದೇಶದಲ್ಲಿಯೇ ಆಗಿಲ್ಲ. 4·26 ಲಕ್ಷ ಮನೆಗಳನ್ನು ಕಟ್ಟುವ ಪೈಕಿ 3 ಲಕ್ಷಕ್ಕೂ ಹೆಚ್ಚು ಮನೆಗಳನ್ನು 77 ಕೋಟಿ ರೂಪಾಯಿಗಳಲ್ಲಿ ಕಟ್ಟಿಸತಕ್ಕದ್ದು ನೋಡಿದಾಗ ಮುಂದೆ ಬರತಕ್ಕ ಸರ್ಕಾರ ಇದನ್ನು ಹೆಚ್ಚಿನ ಗಮನ ಕೊಟ್ಟು ನೋಡಬೇಕು ಎಂದು ನಾನು ಹೇಳಬೇಕಾಗಿದೆ. ವಿವಿಧ ರೀತಿಯ ಯೋಜನೆಗಳಲ್ಲಿ, ಕೈಗಾರಿಕಾ ಕಾರ್ಮಿಕರಿಗಾಗಲೀ, ಬೀಡಿ ಕಾರ್ಮಿಕರಿಗಾಗಲೀ ಅಥವಾ ಬೇರೆ ದುರ್ಬಲರಿಗಾಗಲೀ 1980–81 ರಲ್ಲಿ ನಾವು 15 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, 1981–82 ರಲ್ಲಿ 26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗ 1983–84 ರಲ್ಲಿ ಇದಕ್ಕೆ ತಾವು 20 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಇದು ಬಹಳ ಕಡಿಮೆಯಾಗಿದೆ. ಈ ಯೋಜನೆಗೆ 1980–81 ರಲ್ಲಿ 16 ಕೋಟಿ ರೂಪಾಯಿಗಳಿದ್ದು 1982–83 ರಲ್ಲಿ 26 ಕೋಟಿ ರೂಪಾಯಿಗಳಿಗೆ ಹೆಚ್ಚಿ, 1983–84 ರಲ್ಲಿ ಇಷ್ಟು ಒದಗಿಸಿದರೆ ಹೇಗೆ?

ಈ ವರ್ಷವೂ ಇದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಗೆ ಹಣದ ತೊಂದರೆ ಇರಬಹುದು. ಹಣದ ತೊಂದರೆ ಇದ್ದರೂ ಕೂಡ ಇವತ್ತು ಈ ಕಾರ್ಯಕ್ರಮಗಳು ಬಡವರಿಗಾಗಿ ಇರುವುದರಿಂದ ಹೆಚ್ಚಿನ ಹಣವನ್ನು ತಾವು ಒದಗಿಸಿಕೊಳ್ಳಬೇಕಾಗುತ್ತದೆ. 20 ಅಂಶಗಳ ಕಾರ್ಯಕ್ರಮವನ್ನು ಮುಂದುವರಿಸುವುದಾಗಲೀ, ನ್ಯಾಷನಲ್ ಡೆವಲಪ್‌ಮೆಂಟ್ ಮೀಟಿಂಗ್‌ನಲ್ಲಾಗಲೀ ಬೇರೆ ಕಡೆಯಲ್ಲಾಗಲೀ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಈ ಕಾರ್ಯಕ್ರಮಕ್ಕೆ ಹೆಚ್ಚಿನ ಹಣವನ್ನು ತಾವು ಒದಗಿಸಿದ್ದೀರೋ ಇಲ್ಲವೋ ಎಂದು ನಿರೀಕ್ಷಣೆ ಮಾಡುತ್ತಾರೆ. ಹೋದ ವರ್ಷ ಪ್ರತಿ ತಾಲ್ಲೂಕಿನಲ್ಲಿ ಒಂದು ಸಾವಿರ ಮನೆಗಳನ್ನು ಕಟ್ಟಬೇಕು, ಒಂದು ಊರಿಗೆ ಹತ್ತು ಮನೆಗಳನ್ನಾದರೂ ಕಟ್ಟಲೇಬೇಕು ಎಂದು ಹೇಳುವಂಥ ನಿರ್ದಿಷ್ಟವಾದ ಆದೇಶವನ್ನು ನಾವು ಕೊಟ್ಟಿದ್ದೇವೆ. 1·26 ಸಾವಿರ ಮನೆಗಳನ್ನು ಕಟ್ಟತಕ್ಕ ಕಾಲದಲ್ಲಿ ದುಡ್ಡನ್ನು ನಾವು ರಿಲೀಸ್ ಮಾಡಿಲ್ಲ ಎನ್ನತಕ್ಕ ಮಾತು ಬಂದಿದೆ. ನಾನು ಈ ವಿಷಯದಲ್ಲಿ ಅರ್ಥಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಒಂದೇ ದಿವಸದಲ್ಲಿ 1981 ರ ನವೆಂಬರ್‌ನಲ್ಲಿ ಈ ಯೋಜನೆಗಳನ್ನು ಪೂರ್ಣ ಮಾಡಲಿಕ್ಕೆ ಆರು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಇದಲ್ಲದೆ 4·13 ಕೋಟಿ ರೂಪಾಯಿಗಳನ್ನು ಹುಡ್ಕೋ ಯೋಜನೆಯಿಂದ, ಕಂಟೆಂಜೆನ್ಸಿ ಫಂಡ್‌ನಿಂದ 2·97 ಕೋಟಿ ರೂಪಾಯಿಗಳನ್ನು ಒಂದೇ ದಿನದಲ್ಲಿ ಬಿಡುಗಡೆ ಮಾಡಿದ್ದೇವೆ. ಆದ್ದರಿಂದಲೇ ನಾನು ಹೇಳುವುದು ಈ ಬಡವರ ಜನತಾ ಮನೆಗಳನ್ನು ಪಟ್ಟಬೇಕಾದರೆ ನಾವು ಸಚಿವ ಸಂಪುಟದಲ್ಲಿ ಸ್ವಲ್ಪಮಟ್ಟಿಗೆ ಬಡಿದಾಡಬೇಕಾಗುತ್ತದೆ. ಯಾರಿಗೆ ಇವರ ಬಗ್ಗೆ ಅನುಕಂಪ ಇದೆ, ಕಮಿಟ್‌ಮೆಂಟ್ ಇದೆ ಅವರು ಅರ್ಥ ಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ, ಎಲ್ಲಾ ಅಧಿಕಾರಿಗಳನೂ ಕರೆಯಿಸಿ ಈ ಯೋಜನೆಗಳು ಆಗಲೇ ಬೇಕು ಎಂದು ಕೆಲಸ ಮಾಡಿದರೆ ಆಗ ದುಡ್ಡು ದೊರೆಯುತ್ತದೆ. ನಾನು ಈ ಮಾತನ್ನು ಏಕೆ ಹೇಳು ತ್ತಿದ್ದೇನೆಂದರೆ 1·2 ಲಕ್ಷ ಮನೆಗಳನ್ನು ಕಟ್ಟಿಸಬೇಕು ಎಂದು ನಾವೇನು ಆದೇಶ ಕೊಟ್ಟಿದ್ದೇವೆ ಅವು ಐಡೆಂಟಿಫೈ ಆಗಬೇಕು. ಇವುಗಳ ಬಗ್ಗೆ ಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇದೆ. ಸುಮಾರು 50 ಸಾವಿರ ಎಕರೆ ಜಮೀನು ಸರ್ಕಾರದ ಹಿಡಿತದಲ್ಲಿದೆ. ಅದನ್ನು ಬಿಡಿಸಿ ಯಾರಿಗೆ ಸೈಟು ಇಲ್ಲ, ಅವರಿಗೆ ಸೈಟು ಕೊಡತಕ್ಕ ಕಾರ್ಯಕ್ರಮ ಮಾಡಿದರೆ ಒಳ್ಳೆಯದು. ಈ ಸಮಸ್ಯೆ ಕಾನೂನು ಮಂತ್ರಿಗಳಿಗೆ ನೇರವಾಗಿ ಸಂಬಂಧಪಟ್ಟಿದ್ದ ರಿಂದ ನಾನು ಇದನ್ನು ಹೇಳಬೇಕಾಗಿದೆ. 35 ಸಾವಿರ ಎಕರೆಯ ಮೇಲೆ ಜನತಾ ಮನೆಗಳನ್ನು ಕಟ್ಟಿಸಬೇಕಾದರೆ ಜಮೀನೂ ಕೂಡ ಸರ್ಕಾರದ ಸ್ವಾಧೀನದಲ್ಲಿಲ್ಲ. 1200 ಕ್ಕೂ ಹೆಚ್ಚು ಕೇಸುಗಳು ಕೋರ್ಟಿನಲ್ಲಿವೆ. ನಾನು ಆಗ ಲಾ ಸೆಕ್ರೆಟರಿಯವರನ್ನೂ ಎಲ್ಲಾ ಅಧಿಕಾರಿಗಳನ್ನೂ ಕರೆಯಿಸಿ ಈ ವಿಷಯದ ಬಗ್ಗೆ ಸಮಾಲೋಚನೆ ಮಾಡಿದ್ದೇನೆ. ಇದನ್ನು ತಾವು ಎಕ್ಸ್‌ಪೆಡೈಟ್ ಮಾಡಬೇಕು. ಪೆಂಡಿಂಗ್ ಇರುವ ಕೇಸುಗಳು ಜಾಗ್ರತೆ ಡಿಸ್ಪೋಸ್ ಆಗಬೇಕು, ಜನತಾ ಮನೆಗಳನ್ನು ಮುಂದುವರಿಸಿಕೊಂಡು ಹೋಗಬೇಕು. ಇನ್ನೊಂದು ಯೋಜನೆಯ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದಲ್ಲಿ ಇಂಡಸ್ಟ್ರಿಯಲ್ ವರ್ಕರ್ಸ್‌ಗೆ, ವೀಕರ್ ಸೆಕ್ಷನ್‌ಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಯೋಜನೆ ಇದೆ. ನಾವು ಇದಕ್ಕೆ 1980–81 ರಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ, 1982–83 ರಲ್ಲಿ 10 ಲಕ್ಷ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ವೀಕರ್ ಸೆಕ್ಷನ್ ಆಫ್ ದಿ ಸೊಸೈಟಿ, ಹಮಾಲರು ಎಂದು ದಾವಣಗೆರೆ ಮಂಡಕ್ಕಿ ಭಟ್ಟಿ ಮಾಡುವವರಿದ್ದಾರೆ. ಈ ಹಮಾಲರಿಗೆ ಮನೆಗಳನ್ನು ನಾವು ಕಟ್ಟಿಸಿಕೊಟ್ಟಿದ್ದೇವೆ. ಬಿಜಾಪುರದಲ್ಲಿ 294 ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಇದೆಲ್ಲಾ ಆಗಿದ್ದರೂ ಸಹ ತಾವು 1983–84 ರಲ್ಲಿ ಇವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಒಂದು ಪೈಸೆಯನ್ನೂ ಕೂಡ ಒದಗಿಸಿಲ್ಲ.

ತಮ್ಮ ವರದಿಯ ಪೇಜ್ 3 ರಲ್ಲಿ ಸ್ಟೇಟ್‌ಮೆಂಟ್ ಏನು ಇದೆ ಇದರಲ್ಲಿ 1983–84 ರಲ್ಲಿ ಇವರಿಗೆ ಒಂದು ಪೈಸೆಯನ್ನೂ ಕೂಡ ಒದಗಿಸಿಲ್ಲ. ವೀಕರ್ ಸೆಕ್ಷನ್‌ನಲ್ಲಿ ಯಾರು ಯಾರು ಸಣ್ಣ ಸಣ್ಣ ಕೆಲಸ ಮಾಡತಕ್ಕವರು ಇದ್ದಾರೆ, ಬಂಡಿ ಮತ್ತು ಜಟಕಾ ಹೊಡೆಯತಕ್ಕ ಜನರು ಯಾರಿದ್ದಾರೆ ಅವರಿಗೆ ವಸತಿ ಸೌಕರ್ಯವನ್ನು ಒದಗಿಸತಕ್ಕ ಕ್ರಮವನ್ನು ತಾವು ಕೈಬಿಟ್ಟಿದ್ದೀರಿ. ಯಾವ ಒಂದು ಕಾರ್ಯಕ್ರಮಕ್ಕೆ ಹೋದ ವರ್ಷ ನಾವು 12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆವೋ ಆ ಕಾರ್ಯಕ್ರಮಕ್ಕೆ ಈ ವರ್ಷ ತಾವು ಒಂದು ಪೈಸೆಯನ್ನೂ ಕೂಡ ಇಟ್ಟಿಲ್ಲ. ಈ ರೀತಿಯಾಗಿ ಮಾಡಿದರೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದ ಸರ್ಕಾರ ಇದೆಂದು ನಾವು ಯೋಚಿಸಲು ಸಾಧ್ಯವೇ? ಈ ದೇಶದಲ್ಲಿ 1917 ರಿಂದಲೂ ಕ್ರಾಂತಿಗಳು ನಡೆದುಕೊಂಡು ಬಂದಿವೆ, ಬೇರೆ ಬೇರೆ ತರಹದಲ್ಲಿ ಕ್ರಾಂತಿಗಳು ಆಗಿವೆ, ಎಲ್ಲಾ ಕಡೆ ಚಳುವಳಿಗಳು ನಡೆದಿವೆ. ಬೇರೆ ಬೇರೆ ರಾಜ್ಯಗಳಲ್ಲಿ ತಾಂತ್ರಿಕ ಆಧಾರದ ಮೇಲೆ ಸಣ್ಣ ಉತ್ಪಾದನೆಯವರು ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನತಕ್ಕ ಅಭಿಪ್ರಾಯ ಇದೆ. ಈ ದೇಶದಲ್ಲಿ ಕಳೆದ 35 ವರ್ಷಗಳಿಂದಲೂ ಕೂಡ ಈ ರೀತಿಯ ಮನೋಭಾವನೆಯನ್ನು ಯಾವುದೇ ಸರ್ಕಾರ ತಳೆದರೆ ಜನ ಅದನ್ನು ಯಾವ ರೀತಿಯಲ್ಲಿ ಸಹಿಸಬೇಕು ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಈಗ ಬಡ್ಜೆಟ್ ಪ್ರಿಪೇರ್ ಆಗುತ್ತದೆ. ಇಂಡಸ್ಟ್ರಿಯಲ್ ವರ್ಕರ್ಸ್‌ಗೆ, ವೀಕರ್ ಸೆಕ್ಷನ್ಸ್ ಆಫ್ ದಿ ಸೊಸೈಟಿಗೆ ಜನತಾ ಮನೆಗಳನ್ನು ಕಟ್ಟಿಸಿಕೊಡತಕ್ಕ ಕಡೆ ತಮ್ಮ ಗಮನ ಹೋಗಿಲ್ಲ, ತಮ್ಮ ಗಮನ ಎಲ್ಲಿ

ಹೋಗಿದೆ ಎಂದು ಕೇಳುತ್ತೇನೆ. ಇದರಲ್ಲಿ ಹೆಚ್ಚಿನ ರಾಜಕೀಯ ಮಾಡಬೇಕು ಎಂದು ಹೇಳುತ್ತಾ ಇಲ್ಲ. ಇವತ್ತು ಆಡಳಿತ ಮಾಡತಕ್ಕ ಮಿಷನ್ ಏನಿದೆ ಅದು ಕೇವಲ ಕಾರ್ಯಕ್ರಮದಲ್ಲಿ ಕ್ರಾಂತಿಕಾರಕವಾದ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳ ಮನಸ್ಸಿನಲ್ಲೂ ಕೂಡ ಕ್ರಾಂತಿಕಾರಕ ಭಾವನೆ ಬರಬೇಕಾಗಿದೆ. ಅವರಿಗೂ ಕೂಡ ವಿಶೇಷವಾಗಿ ಬಡಜನರಿಗೆ ಸಹಾಯ ಮಾಡಬೇಕು ಎಂಬ ಸಹಾನುಭೂತಿ ಇರುವುದಿಲ್ಲ. ಅಲ್ಲಿಯವರೆಗೆ ತಮಗೆ ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ನಾನು ಎರಡು ವರ್ಷಗಳ ಕಾಲದಲ್ಲಿ ಅವರೊಡನೆ ಸಾಕಷ್ಟು ಜಗಳ ಆಡಿದ್ದೇನೆ, ಹೊಡೆದಾಡಿದ್ದೇನೆ. ಈಗ 7–8 ತಿಂಗಳಲ್ಲಿ ಎಲ್ಲಾ ಕೆಲಸಗಳನ್ನೂ ನಿಮ್ಮಿಂದ ಪೂರ್ಣವಾಗಿ ನಿರೀಕ್ಷಣೆ ಮಾಡುವುದಿಲ್ಲ. ಈ ಬಗ್ಗೆ ತಾವು ಗಮನ ಕೊಡಬೇಕಾಗಿದೆ. ಇವತ್ತು ಭಾಗ್ಯಮಂದಿರದಲ್ಲೂ ಕೂಡ ಅಷ್ಟೆ. ಹೋದವರ್ಷ ನಾವು 4300 ಭಾಗ್ಯಮಂದಿರಗಳನ್ನು ಕಟ್ಟಿಸಿದೆವು. ಇವತ್ತು ಕೇವಲ 2000 ಭಾಗ್ನಮಂದಿರಗಳನ್ನು ಕಟ್ಟಿಸಲಿಕ್ಕೆ ತಾವು ಹೊರಟಿದ್ದೀರಿ. ಅರ್ಬನ್ ಏರಿಯಾದಲ್ಲಿ ಸಣ್ಣ ಸಣ್ಣ ಪಟ್ಟಣಗಳಲ್ಲಿರತಕ್ಕ ಬಡಜನರಿಗೆ 4,800 ರೂಪಾಯಿಗಳ ಅವರ ಆದಾಯದ ಮೇಲೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಮತ್ತು ಅಲ್ಲಿ ರಿಪೇರಿ ಮಾಡತಕ್ಕಂಥ ಸ್ಕೀಮುಗಳಿವೆ, ಅದರ ಬಗ್ಗೆ ಕೂಡ ತಾವು ಏನೂ ಮಾಡಿಲ್ಲ, ಏಕೆ? ಇವತ್ತು ಅವರಿಗೆ ಬೇರೆ ಇಲಾಖೆ ಇದೆ, ಇವತ್ತಿನ ಸಮಾಜದ ವ್ಯವಸ್ಥೆ ಹೇಗಿದೆ ಎನ್ನುವುದನ್ನು ಗುರುತಿಸಿ. ಇಂತಹ ಕಾರ್ಯಕ್ರಮಗಳು ಸಿಕ್ಕಿದಾಗ ಕಂಗ್ರಾಜುಲೇಟ್ ಮಾಡಬೇಕಾಗುತ್ತದೆ ಅದನ್ನು ಸೆಪರೇಟಾಗಿ ಬೇರ್ಪಡಿಸಿದರೆ ಕೆಲಸ ಮಾಡುವುದಕ್ಕೆ ಆಗುತ್ತದೆ. ಇದರಲ್ಲಿ ಕೆಲಸ ಮಾಡಬೇಕಾದರೆ ಬೆಂಗಳೂರಿನಲ್ಲಿ ಮತ್ತು ಇತರ ಕಡೆ ಇರತಕ್ಕ ವಸತಿ ಸಮಸ್ಯೆಗಳನ್ನು ತಿಳಿದುಕೊಂಡು ಇದನ್ನು ಯಾವ ರೀತಿ ಬಗೆಹರಿಸಬೇಕು ಎಂದು ತಾವು ಜಿಲ್ಲಾ ಮಟ್ಟದಲ್ಲೂ ಕೂಡ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಬೇಕಾಗುತ್ತದೆ. ಇವತ್ತು ತಾಲ್ಲೂಕು ದೋರ್ಡುಗಳು ಒಂದು ಲಕ್ಷ ಎರಡು ಸಾವಿರ ಮನೆಗಳನ್ನು ಗುರುತಿಸುವುದು ಹೇಗೆ; ಯಾರಿಗೆ ಕಟ್ಟಿಸಿಕೊಡುವುದು, ಇದು ಅಧಿಕಾರಿಗಳ ಮೇಲೆ ಬಿಡಬೇಕಾಗುತ್ತದೆ. ಇವತ್ತು ನಾವು ಬಡಜನರಿಗೆ 3 ಲಕ್ಷದ 41 ಸಾವಿರ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಇದು ಬರೀ ಬಡವರಿಗೆ ಸಿಗಲಾರದಂಥ ಪರಿಸ್ಥಿತಿ ಬರುತ್ತದೆ. ಅದಕ್ಕೋಸ್ಕರ ನಾವು ಕಮಿಟಿ ಮಾಡಿದ್ದೇವೆ. ಇದನ್ನು ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ, ಇದರ ಬಗ್ಗೆ ತಾವು ಹೆಚ್ಚಿನ ಗಮನ ಕೊಡಬೇಕಾಗುತ್ತದೆ; ಹೆಚ್ಚಿನ ಗಮನ ಕೊಟ್ಟು ಅದನ್ನು ತಾವು ಹೆಚ್ಚಿನ ತೀವ್ರತೆಯಿಂದ ಮಾಡಬೇಕಾಗುತ್ತದೆ. ಇವತ್ತು ಸೈಟ್‌ಲೆಸ್ ಜನರಿಗೆ ಸೈಟುಗಳನ್ನು ಕೊಡತಕ್ಕಂಥ ಯೋಜನೆ ಇದೆ. ಇವತ್ತು ಇಡೀ ನಮ್ಮ ರಾಜ್ಯದಲ್ಲಿ ಸರ್ವೆಮಾಡಿದ ಪ್ರಕಾರ 12 ಲಕ್ಷದ 26 ಸಾವಿರ ಸೈಟ್‌ಲೆಸ್ ಜನರಿದ್ದಾರೆ ಎಂದು ಐಡೆಂಟಿಫೈ ಮಾಡಿದ್ದೇವೆ. ಇವರಲ್ಲಿ 10 ಲಕ್ಷದ 49 ಸಾವಿರ ಜನರಿಗೆ ಸೈಟುಗಳನ್ನು ಕೊಟ್ಟಿದ್ದೇವೆ. ಮೂರು ಲಕ್ಷಕ್ಕಿಂತಲೂ ಹೆಚ್ಚು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಸೈಟುಗಳನ್ನು ಕೊಟ್ಟಿದ್ದೇವೆ, ಇನ್ನೂ ಸೈಟ್ಸ್ ಕೊಡಬೇಕಾಗಿದೆ. ಇದಕ್ಕಾಗಿ ಈಗಾಗಲೇ 5 ಕೋಟಿ 54 ಲಕ್ಷ ರೂಪಾಯಿ ಇದರ ಮೇಲೆ ಖರ್ಚಾಗಿದೆ. 1982–83 ರಲ್ಲಿ ಒಂದು ಲಕ್ಷದ 49 ಸಾವಿರ ಜನರಿಗೆ ಸೈಟು ಕೊಟ್ಟರೆ 1983–84 ರಲ್ಲಿ 75 ಸಾವಿರ ಜನರಿಗೆ ಸೈಟುಗಳನ್ನು ಕೊಡಬೇಕಾಗುತ್ತದೆ. ಇದಕ್ಕೆ ಸ್ವಲ್ಪ ಹಣ ಕೊಟ್ಟಿದ್ದೀರಿ. ಈ ರೂರಲ್ ಏರಿಯಾದಲ್ಲಿರತಕ್ಕಂಥ ಸೈಟ್‌ಲೆಸ್ ಜನರಿಗೆ ಸೈಟ್ಸ್ ಕೊಡತಕ್ಕಂಥಾದ್ದು ದೊಡ್ಡ ಪ್ರಮಾಣದ ಕೆಲಸ. ಇದಕ್ಕೆ ಸಾಕಷ್ಟು ಎಡರು ತೊಡರು ಬರುತ್ತಾ ಇದೆ. ಇವತ್ತು ಒಂದು ಮಾತನ್ನು ಹೇಳುತ್ತಾ ಇದ್ದೇನೆ, ಜನತಾ ಪಕ್ಷದ ಶಾಸಕರು ಸಿಟ್ಟಿಗೇಳಬಾರದು. 20 ಅಂಶಗಳ ಅಂತರ್ಗತವಾದ ಕಾರ್ಯಕ್ರಮ ಮೊದಲು ಪ್ರಾರಂಭವಾಗಿತ್ತು. ಸೈಟ್‌ಲೆಸ್ ಜನರಿಗೆ ಸೈಟ್ಸ್ ಕೊಡತಕ್ಕ ರೀತಿಯಲ್ಲಿ ಜನತಾ ಮನೆಗಳನ್ನು ಕಟ್ಟಿಸಿಕೊಡತಕ್ಕ ರೀತಿಯಲ್ಲಿ ಯಾವುವಾದರೂ ಸ್ಥಳಗಳನ್ನು ಸ್ವಾಧೀನ ಮಾಡಲಿಕ್ಕೆ ಹೋದಾಗ ಅಲ್ಲಿರತಕ್ಕ ಪಟ್ಟಭದ್ರ ಹಿತಾಸಕ್ತಿಗಳೂ ಕೂಡ ಸಾಕಷ್ಟು ಅಡಚಣೆ ತರುತ್ತಾ ಇದ್ದಾರೆ. ಅದಕ್ಕೆ ತಾವು ಗ್ರಿವನ್ಸಸ್ ಕಮಿಟಿ ಮಾಡಿದ್ದೀರಿ. ಇವತ್ತು ಗೇಣಿದಾರರಿಗೆ ಹೊಲ ಕೊಡತಕ್ಕಂಥಾದ್ದಾಗಲಿ, ಜನತಾ ಮನೆಗಳನ್ನು ಕಟ್ಟತಕ್ಕಂಥಾದ್ದು ಆಗಲಿ ಅದರಲ್ಲಿ ಸಾಮಾಜಿಕ ನ್ಯಾಯ ದೊರಕುತ್ತಾ ಇಲ್ಲ. ಆದುದರಿಂದ ಈ ದಿಶೆಯಲ್ಲೂ ಕೂಡ ತಾವು ತೀವ್ರತರವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಜೀವನದಲ್ಲಿ ಅವಕಾಶ ಸಿಗುತ್ತದೆ, ಅಧಿಕಾರ ಬರುತ್ತದೆ, ಹೋಗುತ್ತದೆ, ನಾವು ಆ ಕಡೆಯಿಂದ ಈ ಕಡೆ ಬಂದಿದ್ದೇವೆ, ತಾವು ಈ ಕಡೆ ಇದ್ದೀರಿ, ಇವತ್ತಿನ ದಿವಸ ಆ ಕಡೆ ಹೋಗಿದ್ದೀರಿ. ಆದರೆ ಅವಕಾಶ ಸಿಕ್ಕಿದಾಗ ಪ್ರಾಮಾಣಿಕವಾದ ಕೆಲಸ ಮಾಡಿದರೆ ನಮ್ಮ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಆ ಕೆಲಸ ತಾವು ಮಾಡಬೇಕು ಎಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮತ್ತೆ ತಾವು ಈಕಡೆ ಬರುವ ಆಸೆ ಇಟ್ಟುಕೊಳ್ಳಬೇಡಿ.

ಶ್ರೀ ಧರ್ಮಸಿಂಗ್.—ಆ ರೀತಿ ಬೇಕಾಗಿಲ್ಲ ನಮಗೆ. ಬೇರೆ ಬೇರೆ ಪಕ್ಷದವರ ಬೆಂಬಲ ಪಡೆದು ಬಂದರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ; ಇಚ್ಛಳವಾದ ಬಹುಮತ ಬೇಕು. ಮಾನ್ಯ ಅಧ್ಯಕ್ಷರೇ, ಜನತಾ ಮನೆಗಳನ್ನು ಕಟ್ಟಿಸತಕ್ಕದ್ದಾಗಲಿ, ಭಾಗ್ಯಮಂದಿರವಾಗಲಿ ಮತ್ತು ವೀಕರ್ ಸೆಕ್ಷನ್ಸ್‌ಗೆ ಅನುಕೂಲವಾಗತಕ್ಕ ಬೇರೆ ಬೇರೆ ಕೆಲಸಗಳನ್ನು ಮಾಡುವುದರ ಕಡೆ ಗಮನಕೊಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮತ್ತು ಸೈಟ್‌ಲೆಸ್ ಜನರಿಗೆ ಸೈಟ್ಸ್ ಕೊಡತಕ್ಕಂಥಾದ್ದು, 20 ಅಂಶಗಳ ಕಾರ್ಯಕ್ರಮ

ದಲ್ಲಿ ಬಹಳ ಪ್ರಮುಖವಾದ ಕಾರ್ಯಕ್ರಮ, ಇದರ ಕಡೆ ಹೆಚ್ಚಿನ ಗಮನ ಕೊಡಬೇಕು. ಇದಕ್ಕಾಗಿ 1983-84 ರಲ್ಲಿ ಹೆಚ್ಚಿನ ದುಡ್ಡನ್ನು ಒದಗಿಸಿ ಈ ಕೆಲಸ ಸಾರ್ಥಕವಾಗಿ ಬಡಜನರಿಗೆ ಮುಟ್ಟುವ ಹಾಗೆ ಮಾಡುವುದಕ್ಕೆ ಆಗುತ್ತದೆಯೋ ಎನ್ನುವ ಸಂಶಯ ಬಂದಿದೆ. ಈಗ ನಾನು ಹೌಸಿಂಗ್ ಬೋರ್ಡ್ ವಿಷಯವಾಗಿ ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ತಾವು ಇದನ್ನು ಪ್ರಸ್ತಾಪ ಮಾಡುತ್ತಾ ಇಲ್ಲ. ಬೇರೆಯದರಲ್ಲಿ ನಾವು ವಿಶೇಷವಾಗಿ ಚರ್ಚೆಮಾಡಬೇಕಾಗಿದೆ. ನಮ್ಮ ಪ್ರಯತ್ನದ ಫಲವಾಗಿ ಇವತ್ತು ಹುಡ್ಕೋದವರ ಒಂದು ಬ್ಯಾಚ್ ಕೂಡ ಇಲ್ಲಿ ಬರುತ್ತಾ ಇದೆ. ಬಾದರಾನಿಯವರು ತುಂಬಾ ಡೈನಮಿಕ್ ಛೇರ್ಮನ್. ಈಗಾಗಲೇ 12 ಕೋಟಿ ರೂಪಾಯಿಗಳ ಸ್ಕೀಂ ಮಾಡಿ ಕಳಿಸಿದ್ದೇವೆ, ಅದು ಅಧಿಕಾರಿಗಳಿಗೆ ಗೊತ್ತು. ಇವತ್ತು ಏನಾಗುತ್ತದೆ ಎಂದರೆ 138 ಸ್ಕೀಮ್ಸ್ ಇದೆ. ಜನಸಂಖ್ಯೆ ಆಧಾರದ ಮೇಲೆ ಎಷ್ಟು ಜನರಿಗೆ ಮನೆಗಳು ಬೇಕು, ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದ್ಹ ಐಡೆಂಟಿಫೈ ಮಾಡಿದ್ದೇವೆ. 138 ಟೌನ್ಸ್ ಇದೆ. ಅಲ್ಲಿ ಡಿಮ್ಯಾಂಡ್ ಸರ್ವೆ ಕಂಡಕ್ಟ್ ಮಾಡಿದ್ದೇವೆ. ಬೇರೆ ಬೇರೆ ಸ್ಕೀಮ್ಸ್ ಕೂವ ಇವೆ. ಹುಡ್ಕೋದಲ್ಲಿ ಎಷ್ಟು ಸ್ಕೀಮ್ಸ್ ಪ್ರಿಪೇರ್ ಮಾಡಿದ್ದೇವೆ ಅಷ್ಟು ದುಡ್ಡು ಕೊಡುವುದಕ್ಕೆ ಆಗುವುದಿಲ್ಲ. ಆದರೆ ಇವತ್ತಿನ ದಿವಸ ಪದೇ ಪದೇ ನಾವು ಅಲ್ಲಿಗೆ ಹೋಗಿ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಕೇಳಿದರೆ ನಮಗೆ ಹೆಚ್ಚಿನ ದುಡ್ಡು ಸಿಗತಕ್ಕ ಪರಿಸ್ಥಿತಿ ಇದೆ. ಇದು ಮಾನ್ಯ ಜೀವಿಜಯ ಅವರಿಗೆ ಗುರುತಿದೆ. ಅವರ ಜಿಲ್ಲೆಯಲ್ಲಿ, ಸೋಮವಾರಪೇಟೆಯಲ್ಲಾಗಲಿ, ಕುಶಾಲನಗರದಲ್ಲಾಗಲಿ, ಮಡಕೇರಿಯಲ್ಲಾಗಲಿ ಎಲ್ಲಾ ಕಡೆ ಎಲ್ಲಾ ಸ್ಯಾಂಕ್ಷನ್ಡ್ ಸ್ಕೀಮ್ಸ್ ಇವೆ. ಅವೆಲ್ಲಾ ರೂಫ್ ಲೆವೆಲ್‌ಗೆ ಬಂದಿದೆ. ಹೌಸಿಗ್ ಸ್ಕೀಂ ಏನಿದೆ ಅದರಲ್ಲಿ ಇವತ್ತು ಶಹಾಪುರದಲ್ಲಿ 11 ಲಕ್ಷ ರೂಪಾಯಿಗಳ ಸ್ಕೀಂ ಮಾಡಿದ್ದೇನೆ. ಆದುದರಿಂದ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಬೇಕಾಗಿದೆ. ನಾವು ಏನು ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ ಅದನ್ನು ತಾವು ಮುಂದುವರೆಸಿಕೊಂಡು ಹೋಗಿ ಪೂರ್ಣ ಮಾಡಬೇಕಾಗಿದೆ ಎಂದು ಹೇಳುತ್ತಾ ಇದ್ದೇನೆ. ನಾನು ಹೆಚ್ಚಿಗೆ ಮಾತುಗಳನ್ನು ಬೆಳೆಸುತ್ತಾ ಇಲ್ಲ. ಈಗಾಗಲೇ ಮಾಜಿ ಮಂತ್ರಿಗಳು, ಹಿರಿಯರು ಬಹಳ ಎಫೆಕ್ಟೀವಾಗಿ ಉಳಿದ ವಿಚಾರಗಳನ್ನು ಹೇಳಿದ್ದಾರೆ. ಈ ಸರ್ಕಾರ ಹೌಸಿಂಗ್ ಬಗ್ಗೆ, ಬಡವರ ಬಗ್ಗೆ, 20 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಸ್ವಲ್ಪ ನಿಧಾನವಾಗಿ ಹೋಗುತ್ತಿದೆ, ಇದರ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕಾಗಿದೆ ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಪ್ರಥಮವಾಗಿ ಮಾನ್ಯ ಮಂತ್ರಿಗಳು ತಂದಿರುವ ಬೇಡಿಕೆಗೆ ಒಪ್ಪಿಗೆ ಕೊಟ್ಟು, ಈ ವಿಷಯವನ್ನು ಕುರಿತು ಒಂದೆರಡು ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಮಾಜಿ ಕಾನೂನುಮಂತ್ರಿಯವರಾದ ವೈ. ರಾಮಕೃಷ್ಣರವರು ಮಾತನಾಡುತ್ತಾ ಅನೇಕ ದಶಕಗಳಿಂದ ಯಾವ ಪ್ರಶ್ನೆಯನ್ನು ಕುರಿತು ಬರೀ ಚರ್ಚೆಯನ್ನು ಮಾಡಿಕೊಂಡು ಬಂದಿದ್ದರೋ ಅದರ ಬಗ್ಗೆ ಅವರು ಮತ್ತೆ ಮಾತನಾಡಿದ್ದಾರೆ. ಕೋರ್ಟಿನಲ್ಲಿ ನಡೆಯತಕ್ಕಂಥ ಕಟ್ಟಳೆಗಳ ವಿತರಣೆಗೆ ಇಷ್ಟೊಂದು ಏತಕ್ಕೆ ನಿಧಾನವಾಗುತ್ತದೆಂದು ಅವರು ಹೇಳಿದರು. ಇದು ಇವತ್ತಿನದಲ್ಲ; ನಿನ್ನೆಯದಲ್ಲ ಹಾಗೂ ಕಳೆದ ವರ್ಷದ್ದಲ್ಲ. ನಮಗೆ ಬುದ್ಧಿ ಬಂದಾಗಿನಿಂದಲೂ ನಮಗೆ ಕೋರ್ಟುಗಳ ಸಂಬಂಧ ಪ್ರಾರಂಭವಾದಾಗಿನಿಂದಲೂ ನಿಧಾನವಾಗುತ್ತಲೇ ಬಂದಿವೆ. ವ್ಯಕ್ತಿಗಳು ಇನ್ನೊಬ್ಬರನ್ನು ಕುರಿತು ಬೆರಳುಮಾಡಿ ತೋರಿಸುವುದು ವಾಡಿಕೆಯಾಗಿದೆ. ಕೋರ್ಟ್‌ಗಳಲ್ಲಿ ಕಟ್ಟಳೆಗಳು ಬೇಗ ಬೇಗ ವಿತರಣೆಯಾಗುತ್ತಿಲ್ಲ, ನಿಜ. ಅದಕ್ಕೆ ನಾನು ಸಂಪೂರ್ಣ ಒಪ್ಪಿಗೆ ಕೊಡುತ್ತೇನೆ. ಎಷ್ಟು ಜರೂರಾಗಿ, ಎಷ್ಟು ವೇಗದಲ್ಲಿ ಕಟ್ಟಳೆಗಳು ತೀರ್ಮಾನವಾಗಬೇಕಾಗಿತ್ತೋ; ಅಷ್ಟು ವೇಗವಾಗಿ ತೀರ್ಮಾನವಾಗುತ್ತಿಲ್ಲ. ಮಾನ್ಯ ವೈ. ರಾಮಕೃಷ್ಣರವರು ಮಾಡಿದ ಭಾಷಣವನ್ನು ನಾನು ಶ್ರದ್ಧೆಯಿಂದ ಕೇಳಿದೆ. ಬಹಳ ವರ್ಷಗಳಿಂದ ಕಾನೂನು ಮಂತ್ರಿಗಳಾಗಿ ಕೆಲಸ ಮಾಡಿದ ಅವರೇ ಈ ಪ್ರಶ್ನೆಯನ್ನು ತೊಡೆದುಹಾಕಲಿಕ್ಕೆ, ವಿಳಂಬವಾಗುವುದನ್ನು ತಪ್ಪಿಸಲಿಕ್ಕೆ ಏನು ಕ್ರಮಗಳನ್ನು ಮಾಡಿದ್ದರು ಎನ್ನುವುದನ್ನು ಹೇಳಲಿಲ್ಲ. ಅವರ ಅನುಭವಾಮೃತವನ್ನು ನಾವು ಕೂಡ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೆವು. There is inordinate delay in disposing of both the civil and criminal cases. ಕಟ್ಟಳೆಗಳು ನಿಧಾನವಾಗುವುದಕ್ಕೆ ಸರ್ಕಾರ ಮಾತ್ರ ಕಾರಣವಲ್ಲ. ಸನ್ನಿವೇಶ, ಸರ್ಕಾರ, ಕಾನೂನು, ವಕೀಲರ ಪರಿಸರ ಇಷ್ಟೆಲ್ಲಾ ಕಾರಣಗಳು ಇವೆ. ನಿಧಾನವಾಗುವುದು ಲಕ್ಷ್ಮೀಸಾಗರ್ ಹಾಗೂ ಬಂದಮೇಲಾಗಲೀ, ವೈ. ರಾಮಕೃಷ್ಣರವರು ಇದ್ದಾಗಾಗಲೀ ಆಯಿತು ಎಂದು ಹೇಳುವುದು ಬುದ್ಧಿವಂತಿಕೆ ಮಾತಾಗಲಾರದು. ಇದಕ್ಕೆ ಅನೇಕ ಕಾರಣಗಳು ಇವೆ. ಬಹುಮುಖ್ಯವಾಗಿ ನಮ್ಮ ಸನಾತನ ಕಾಲದಿಂದಲೂ ಬಂದಿರುವಂಥ ಸಿ.ಪಿ.ಸಿ. ಅಂತ ಏನು ಕರೆಯುತ್ತೇವೆ; ಅದು. ಒಂದು ಕಲಮ್‌ನಿಂದ ಮತ್ತೊಂದು ಕಲಮ್‌ಗೆ ಸರಿಪಡಿಸಿಕೊಳ್ಳುವುದು ಕಷ್ಟವಾಗಿದೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ನಾನು ಮಂತ್ರಿಯಾಗಿ ಕಟ್ಟಡಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದೆನಲ್ಲ?

ಶ್ರೀ ವೈ. ಕೆ. ರಾಮಯ್ಯ.—ಸ್ವಾಮಿ, ಕಟ್ಟಡ ಅಲ್ಲ ಸ್ವಾಮಿ, ಕಟ್ಟಳೆಗಳು; ಮೊಕದ್ದಮೆಗಳು ಉಳಿದುಕೊಳ್ಳಬೇಕಾದರೆ, ಬಹಳ ಪುರಾತನ ಕಾಲದಿಂದಲೂ ಬಂದಿರತಕ್ಕ ಪ್ರೊಸೀಜರ್ ಏನು ಫಾಲೋ ಮಾಡುತ್ತೇವೆ ಅದು. ಮಾನ್ಯ ರಾಮಕೃಷ್ಣರವರು ಯಾವ ನ್ಯಾಯಾಲಯಗಳಲ್ಲಿಯೂ ನ್ಯಾಯಾಧೀಶರ ಹುದ್ದೆಗಳು ಖಾಲಿ

ಇಲ್ಲವೆಂದು ಹೇಳಿದರು. ಇವತ್ತು ಅನೇಕ ಕೋರ್ಟುಗಳಲ್ಲಿ ನ್ಯಾಯಾಧೀಶರು ಕೆಲಸ ಮಾಡುತ್ತಿಲ್ಲ; ಜಾಗಗಳು ಖಾಲಿ ಇವೆ. ನಾನು ನಿಜ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇವತ್ತು ನ್ಯಾಯಾಧೀಶರ ಕೆಲಸಕ್ಕೆ ಕರೆದು ಕೊಟ್ಟರೂ ಯಾರೂ ಬರುತ್ತಿಲ್ಲ. ಇದಕ್ಕೆ ಪ್ರಬಲವಾದ ಕಾರಣ ಇರಬೇಕು. ನಾನು ಈ ಮಾತನ್ನು ಲಘುವಾಗಿ ಹೇಳುತ್ತಿಲ್ಲ. ಸ್ವಾಮಿ, ನ್ಯಾಯಾಧೀಶರಾಗಿ ಬರಬೇಕಾದರೆ, ಯೋಗ್ಯತೆ ಇರುವವರನ್ನು, ಬುದ್ಧಿವಂತಿಕೆ ಇರುವವರನ್ನು ನೇಮಕ ಮಾಡಬೇಕು. ಆದರೆ, ಇಂದು ಆಗುತ್ತಿರುವುದಾದರೂ ಏನು ? ಯೋಗ್ಯತೆ ಇರತಕ್ಕವರು, ಬುದ್ಧಿವಂತರು ಇಂಥ ಗೌರವಾನ್ವಿತ ನ್ಯಾಯಾಧೀಶರ ಕೆಲಸಕ್ಕೆ ಏತಕ್ಕೆ ಬರುತ್ತಿಲ್ಲ. ಇದಕ್ಕೆ ಪ್ರಬಲವಾದ ಕಾರಣ ಇದೆ. ಅವರಿಗೆ ಕೊಡುತ್ತಿರುವ ಸೌಲಭ್ಯಗಳು ಸಾಲದು. ಕೊಡುತ್ತಿರುವ ಸವಲತ್ತುಗಳು ಬಹಳ ಕಡಿಮೆ. ಹಳ್ಳಿಯಲ್ಲಿ ಕೆಲಸ ಮಾಡುವಂಥ ಒಬ್ಬ ಅಗ್ರಿಕಲ್ಚರ್ ಅಸಿಸ್ಟೆಂಟ್‌ಗೆ, ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೀರಿ, ಆದರೆ, ಒಬ್ಬ ನ್ಯಾಯವಾದಿಗೆ ಕಾನೂನು ಪರಿಪಾಲನೆ ಮಾಡುವಂಥ ವ್ಯಕ್ತಿಗೆ ಮನೆ ಕಟ್ಟಿಸಿಕೊಟ್ಟಿಲ್ಲ; ಒಬ್ಬ ನ್ಯಾಯಾಧೀಶ ಗುಲ್ಬರ್ಗಕ್ಕೆ ಅಥವಾ ರಾಯಚೂರಿಗೆ ಹೋದರೆ, ವಸತಿಗಾಗಿ ಬಹಳ ಕಷ್ಟಪಡಬೇಕಾಗುತ್ತದೆ. ಮನೆಗಳ ವಿಚಾರದಲ್ಲಿ ಕೇಸುಗಳು ಇರುತ್ತವೆ. ಮನೆಗಳು ಸಿಗುವುದು ಕಷ್ಟ. ಸಿನಿಮಾ ನೋಡುವುದಕ್ಕೆ ಹೋದರೆ, ಅದರ ಬಗ್ಗೆಯೂ ಏನಾದರೂ ತಕರಾರು ಇರುತ್ತದೆ. ಶನಿದೇವರ ದೇವಸ್ಥಾನಕ್ಕೆ ಹೋಗಬೇಕಾದರೂ ತೊಂದರೆ ಇರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಕೇಸುಗಳು ಇರುತ್ತವೆ. ಪರಿಸ್ಥಿತಿ ಹೀಗಿರುವಾಗ, ಬುದ್ಧಿವಂತರಿಗೆ ಯೋಗ್ಯತೆ ಇರುವವರಿಗೆ ಸವಲತ್ತುಗಳನ್ನು ಒದಗಿಸಿಕೊಟ್ಟರೆ ಮುಂದೆ ಬರುತ್ತಾರೆ. ಖಾಲಿ ಇರತಕ್ಕ ಜಾಗಗಳನ್ನು ತುಂಬುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಜಿಲ್ಲಾ ನ್ಯಾಯಾಧೀಶರುಗಳಿಗೆ ವಾಹನದ ವ್ಯವಸ್ಥೆ ಮಾಡಬೇಕು. ಕೊಡತಕ್ಕ ಸಂಬಳ ಕೂಡ ಕಡಿಮೆ ಇದೆ. ಅವರಿಗೆ ಯಾವುದೇ ರೀತಿಯ ವರಮಾನವೂ ಇರುವುದಿಲ್ಲ. ನಿಷ್ಪಕ್ಷವಾದಂಥ ನಿರ್ಭೀತಿಯುತವಾದ ತೀರ್ಪನ್ನು ಬಯಸುವುದಾದರೆ ಹೆಚ್ಚಿನ ಸಂಬಳ ಕೊಡಬೇಕು. ಹೆಚ್ಚಿನ ಸವಲತ್ತುಗಳನ್ನು ಒದಗಿಸಿಕೊಡುವುವರ ಮೂಲಕ ಮುಂದೆ ಬರುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. The Government is the greatest litigant. ಸರ್ಕಾರಕ್ಕೆ ಕಾಗದ ಬರೆದರೂ ಡಿಲೆಯಾಗುತ್ತದೆ 1970 ನೇ ಇಸವಿಯಲ್ಲಿ ತುಮಕೂರು ಜಿಲ್ಲಾಧಿಕಾರಿಗಳಿಗೆ ಒಂದು ಪಾರ್ಟಿಸಿಯನ್ ಕೇಸಿಗೆ ಸಂಬಂಧಪಟ್ಟ ಪತ್ರ ಬರೆದರೆ, 1980 ನೇ ಇಸವಿಗೆ ಬಂದರೂ ವಾಪಸ್ಸು ಬಂದಿಲ್ಲ. ಸೆಕ್ಷನ್ 45 ರ ಕೆಳಗಡೆ ಫೈನಲ್ ಡಿಕ್ರಿ ಆಗಿದೆ. ಸರ್ವೆ ಮಾಡಿಸಿ ಭಾಗ ಮಾಡಬೇಕಾಗಿತ್ತು. ನಂತರ ಕೋರ್ಟಿಗೆ ಬರಬೇಕಾಗಿತ್ತು. ವಸ್ತುಸ್ಥಿತಿ ಹೀಗಿರುವಾಗ ನ್ಯಾಯಾಧೀಶರನ್ನು ದೂಷಿಸುವುದು, ವಕೀಲರನ್ನು ದೂಷಿಸುವುದು ಮತ್ತು ಸಿವಿಲ್ ಕೋಡನ್ನು ದೂಷಿಸುವುದು ಸರಿಯಲ್ಲ. ಮಾಜಿ ಕಾನೂನುಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ ಲ್ಯಾಂಡ್ ರಿಫಾರ್ಮ್ಸ್ ಕಾನೂನು ಕೆಳಗೆ ಅರ್ಜಿಹಾಕಿ ಅದು ತೀರ್ಮಾನವಾಗಿದ್ದರೂ ನಾವು ಪಾಸು ಮಾಡಿರುವಂಥ 133 ನೇ ಸೆಕ್ಷನ್ ಕೆಳಗೆ ಅರ್ಜಿ ಹಾಕಿಕೊಂಡು ಸಿವಿಲ್ ಕೋರ್ಟಿನಿಂದ ಸ್ಟೇ ಮಾಡುತ್ತಾರೆ. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಎಲ್ಲಿಯವರೆಗೆ ಕೇಸ್ ಇರುತ್ತದೆ ಅಲ್ಲಿಯವರೆಗೆ ಅದು ಸಿವಿಲ್ ಕೋರ್ಟಿಗೆ ಬರುವುದಿಲ್ಲ. ಸಾವಿರಾರು ಕೇಸುಗಳು ಸಿವಿಲ್ ಕೋರ್ಟಿನಲ್ಲಿ ಇವೆ. ಅವು ಕಾನೂನು ಅನೇಕ ತೊಡಕಿನಿಂದ ಪೆಂಡಿಂಗ್ ಇವೆ. ನಮ್ಮಲ್ಲಿ ತುಂಡು ಭೂಮಿಯ ತೊಡಕು ಇದೆ. ಇದನ್ನು ತೀರ್ಮಾನ ಮಾಡುವ ಹಕ್ಕು ಯಾರಿಗೆ ಇದೆ ? Who is the competent authority to decide whether the land is fragmented one ? ಸಾಮಾನ್ಯವಾಗಿ ಈ ಬಗ್ಗೆ ಸಿವಿಲ್ ಕೋರ್ಟಿನಲ್ಲಿ ಅರ್ಜಿ ಹಾಕುತ್ತಾರೆ. The sale is invalid because the land is fragmented, ಎಂದು. ಇದು ತುಂಡು ಭೂಮಿಯಾದ್ದರಿಂದ ಈ ಕಾರ್ಯಾಚರಣೆಯನ್ನು ರದ್ದು ಮಾಡಬೇಕೆಂದು ಹೇಳುತ್ತಾರೆ. ಆದರೆ ಸಿವಿಲ್ ಕೋರ್ಟಿನಲ್ಲಿ ಕೆಲಸ ಮಾಡುವ ನ್ಯಾಯಾಧೀಶರಿಗೆ ಇದನ್ನು ತೀರ್ಮಾನ ಮಾಡುವುದಕ್ಕೆ ಜೂರಿಸ್‌ಡಿಕ್ಷನ್ ಇರುವುದಿಲ್ಲ. Assistant Commissioner is the Competent Authority. ಸಿವಿಲ್ ಕೋರ್ಟಿನಿಂದ ಕಾಗದ ಹೋದಮೇಲೆ ಅದು ಬರುವವರೆಗೆ ಅವರು ಕಾಯಬೇಕು.... The issue is whether the land is fragmented or not. That issue cannot be settled unless the Deputy Commissioner sends his decision. ಡೆಪ್ಯೂಟಿ ಕಮೀಷನರ್ ಆಗಲಿ, ಅಸಿಸ್ಟೆಂಟ್ ಕಮೀಷನರ್ ಆಗಲಿ ಫ್ರಾಗ್‌ಮೆಂಟ್ ಆಕ್ಟ್ ಕೆಳಗಡೆ ಆದ ರೆಫೆರೆನ್ಸ್ ಅನ್ನು ಇದುವರೆಗೆ ಕಳುಹಿಸಿಲ್ಲ. ಇದಕ್ಕೆ ಇಷ್ಟೇ ಕಾರಣವಲ್ಲ. ವಕೀಲರದ್ದು ಕಾರಣ ಇದೆ. ಮಂತ್ರಿಗಳು ಮಾತನಾಡುವಾಗ ಫ್ರಾನ್ಸಿನ ಪ್ರಾಸಿಕ್ಯೂಷನ್ ಅನ್ನು ನಮ್ಮ ದೇಶಕ್ಕೆ ಹೋಲಿಸಿದರು. ಅದಕ್ಕೂ ನಮಗೂ ಬಹಳ ವ್ಯತ್ಯಾಸ ಇದೆ. In India we start with the presumption that everyone before the Court is innocent. But in France the accused has to prove his innocence. ಆದ್ದರಿಂದ, ಫ್ರಾನ್ಸಿನಲ್ಲಿ ಯಾವನು ಅಪರಾಧ ಮಾಡುತ್ತಾನೋ ಅವನೇ ಪ್ರೂವ್ ಮಾಡಬೇಕು. ಆದರೆ ಭಾರತ ದೇಶದಲ್ಲಿ ಅದು ತಿರುಗು–ಮುರುಗು. It is for the prosecution to prove the guilt. In France it is not like that. The accused has to prove that he is innocent ನಮ್ಮ ದೇಶದಲ್ಲಿ ಶೇಕಡಾವಾರು ಎಷ್ಟು ಕೇಸುಗಳು ಕನ್‌ವಿಕ್ಷನ್ ಆಗುತ್ತವೆ ಅಷ್ಟು ಫ್ರಾನ್ಸ್‌ನಲ್ಲಿ ಅಕ್ವಿಟಲ್

ಆಗುತ್ತವೆ. ಆದ್ದರಿಂದ, ಫ್ರಾನ್ಸಿನ ಅಂಕಿಅಂಶಗಳನ್ನು ಮಾಜಿ ಮಂತ್ರಿಗಳು ಕೊಟ್ಟದ್ದು ಅಷ್ಟೊಂದು ಸಮಂಜಸವಾದ ಉದಾಹರಣೆ ಅಲ್ಲವೆಂದು ಹೇಳುತ್ತೇನೆ. ಜೊತೆಗೆ ಪ್ರಾಸಿಕ್ಯೂಟ್ ಅನ್ನು ಕನ್‌ಸಲ್ಟ್ ಮಾಡದೆ ಕೇಸ್ ಹಾಕುತ್ತಾರಂತೆ. ನನಗೆ ತಿಳಿದ ಮಟ್ಟಿಗೆ ನಮ್ಮಲ್ಲಿ ಪ್ರತಿಯೊಂದು ಕ್ರಿಮಿನಲ್ ಕೇಸನ್ನೂ ಪ್ರಾಸಿಕ್ಯೂಟರಿಂದ ಸ್ಕ್ರುಟಿನಿ ಮಾಡಿಸುತ್ತೇವೆ. 324 ಕೇಸುಗಳನ್ನು ಸ್ಕ್ರುಟಿನಿ ಮಾಡುತ್ತಾರೆ. ಪ್ರಾಸಿಕ್ಯೂಟರ್ ಸ್ಕ್ರುಟಿನಿ ಇಲ್ಲದೆ ಪೋಲೀಸರು ಕೇಸ್ ಹಾಕುತ್ತಾರೆಂದು ಹೇಳುವುದು ತಪ್ಪು ಎಂದು ಹೇಳುವುದಕ್ಕೆ ಸಿದ್ಧನಿಲ್ಲ. ಅವರು ಮಾಡುತ್ತಿರಬಹುದು. ಆದರೆ ಅದೆಲ್ಲ ಒಳ್ಳೆಯದಲ್ಲ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಇವತ್ತಿನ ದಿವಸ, ಕರ್ನಾಟಕದಲ್ಲಿರತಕ್ಕ ನ್ಯಾಯಾಲಯಗಳಲ್ಲಿರತಕ್ಕ ನ್ಯಾಯಪೀಠದಿಂದ ಏನು ಬಯಸುತ್ತೇವೆ, ಯಾವ ವಿಧವಾದ ತೀರ್ಪನ್ನು ಬಯಸುತ್ತೇವೆ, ಯಾವ ವಿಧವಾದ ನ್ಯಾಯವನ್ನು ನ್ಯಾಯಾಧೀಶರಿಂದ ನಿರೀಕ್ಷಿಸುತ್ತಿದ್ದೇವೆ ಆ ವಿಧವಾದ ತೀರ್ಪಾಗಲೀ, ನ್ಯಾಯವಾಗಲೀ ಅನೇಕ ವೇಳೆ ಬರುತ್ತಿಲ್ಲ. ಆದುದರಿಂದ ಈ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕೆಲವು ನ್ಯಾಯಬಾಹಿರ ಘಟನೆಗಳನ್ನು ಸ್ವಲ್ಪ ಸರ್ಕಾರ ಗಮನದಲ್ಲಿಟ್ಟುಕೊಂಡು ಅವನ್ನು ತಪ್ಪಿಸಿದರೆ ಬಹುಶಃ ಸಾಮಾನ್ಯ ಜನರಿಗೆ ನ್ಯಾಯಾಲಯಗಳಲ್ಲಿ ಹೆಚ್ಚಿಗೆ ನಂಬಿಕೆ ಬರುತ್ತದೆಂದು ಹೇಳುತ್ತೇನೆ.

ಇನ್ನು ಹೌಸಿಂಗ್ ಬೋರ್ಡ್ ಬಗ್ಗೆ ಹೇಳುವುದಾದರೆ, ಅನೇಕ ಕಡೆ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಇಲ್ಲವೆಂದು ಹೇಳುವುದಿಲ್ಲ. ದುಡ್ಡು ಕೂಡ ಖರ್ಚಾಗಿದೆ. ಆದರೆ ಇದು ಬಹಳ ಜಟಿಲವಾದ ಸಮಸ್ಯೆಯಾಗಿದೆ. ಒಂದು ಸರ್ಕಾರವಾಗಲಿ, ಸಂಸ್ಥೆಯಾಗಲಿ, ಒಬ್ಬ ವ್ಯಕ್ತಿಯಾಗಲಿ ಹಣವನ್ನು ಖರ್ಚು ಮಾಡಿದ ತಕ್ಷಣ ಕೆಲಸವಾಗಿದೆ ಎಂಬ ತೀರ್ಮಾನ ತೆಗೆದುಕೊಳ್ಳುವುದು ಉತ್ತಮವಾದ ಊಹೆ ಅಲ್ಲ. ದುಡ್ಡು ಖರ್ಚಾಗಿದೆ, ಆದರೆ ಕೆಲಸ ಆಗಿಲ್ಲ. ಅಂಕಿ ಅಂಶಗಳ ಪ್ರಕಾರ ಮನೆ ಕಟ್ಟಿದ್ದಾರೆ. ಅವರು ಕಟ್ಟಿರುವ ಮನೆಗಳ ಅಂಕಿ ಅಂಶಗಳನ್ನು ಕೊಡದೆ ಬಿದ್ದು ಹೋಗಿರುವ ಮನೆಗಳ ಅಂಕಿ ಅಂಶಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು ಅನ್ನಿಸುತ್ತದೆ. ಈ ರೀತಿ ಹಣ ಖರ್ಚು ಮಾಡುವುದರಿಂದ ಮತ್ತು ಲೆಕ್ಕಕ್ಕೆ ಮನೆಗಳನ್ನು ಕಟ್ಟುವುದರಿಂದ ದೇಶದ ಉದ್ಧಾರವಾಗುವುದಿಲ್ಲ, ಬಡವರ ಉದ್ಧಾರವಾಗುವುದಿಲ್ಲ. ಹಣಕ್ಕಾಗಿ ಮನೆ ಕಟ್ಟಿ, ಅವು ಬಿದ್ದರೆ ಅದರಿಂದ ಬಡವರು ಉದ್ಧಾರವಾದರು ಎಂದು ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ, ಕಟ್ಟುವ ಮನೆಗಳು ಕಡಿಮೆಯಾದರೂ ಗುಣಮಟ್ಟದ ಕಡೆ ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಹೌಸಿಂಗ್ ಬೋರ್ಡಿನಲ್ಲಿ ಮನೆಗಳನ್ನು ಕಟ್ಟಿರುವ ರೀತಿ–ನೀತಿ ಮತ್ತು ಮನೆಗಳನ್ನು ವಿತರಣೆ ಮಾಡಿರುವ ರೀತಿ–ನೀತಿಗಳನ್ನು ನಾನು ನೋಡಿದ್ದೇನೆ. ಆದರೆ ಅದನ್ನು ಈ ಒಂದು ಸಂದರ್ಭದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಬರುವುದಿಲ್ಲ; ಕಾಲ ಬಂದಾಗ ಹೇಳುತ್ತೇನೆ. ಹೌಸಿಂಗ್ ಬೋರ್ಡಿನಲ್ಲಿ ಯಾವ ಕೆಲಸವನ್ನು ಮಾಡಬೇಕಾಗಿದೆಯೋ ಅದನ್ನು ಮಾಡಿಲ್ಲ. ಪ್ರಮುಖವಾಗಿ ಕಟ್ಟಡದೊಳಗೆ ಕರಣೆ ಹಾಕಿದರೆ ಬೆಟ್ಟದೊಳಗೆ ಹೋದ ಹಾಗೆ ಹೋಗುತ್ತದೆ. ಇಂಥ ಸಾವಿರಾರು ಮನೆಗಳನ್ನು ಕಟ್ಟಿದ್ದೇವೆಂದು ಹೇಳಿಕೊಳ್ಳುವುದು ಸರಿಯಲ್ಲ. ಕರ್ನಾಟಕ ಹೌಸಿಂಗ್ ಬೋರ್ಡ್ ಬಗ್ಗೆ ಅವರು ಇನ್ನೊಂದು ಮಾತನ್ನು ಹೇಳಿದರು. ಅದಕ್ಕೆ ನಾನು ನಿಜವಾಗಿಯೂ ಋಣಿ. ಇವತ್ತಿನ ದಿವಸ ಹುಡ್ಕೋದಂತಹ ಅನೇಕ ಯೋಜನೆಗಳನ್ನು ಮಂಜೂರ್ಮಾಡಿದ್ದಾರೆ. ನಿಜವಾಗಿ ಈ ದೇಶದ ಜನ ಅವರು ಮಾಡಿರತಕ್ಕ ಎಲ್ಲ ಕೆಲಸಗಳಿಗೂ ಋಣಿಯಾಗಬೇಕು. I congratulate the previous Housing Minister for all the good things he has done to the State but the manner in which the work has been executed is not absolutely satisfactory. ನಾನು ಆಗಲೇ ಹೇಳಿದ ಹಾಗೆ ದೆಹಲಿಯ ಬಿಜಲಾನಿ ಸಹಾಯದಿಂದ ಸಾಕಷ್ಟು ಯೋಜನೆಗಳನ್ನು ಮಂಜೂರ್ಮಾಡಿದ್ದೀರಿ. ಆದರೆ ಅವುಗಳ ಗುಣಮಟ್ಟವನ್ನು ಕಾಪಾಡಿಲ್ಲ. ಇವತ್ತಿನವರೆಗೂ ಸಾರ್ವಜನಿಕರಿಗೆ ಕಛೇರಿಗಳಲ್ಲಿ ಆಗುತ್ತಿರತಕ್ಕ ಕಿರುಕುಳವನ್ನು ತಪ್ಪಿಸುವುದಕ್ಕೆ ಆಗಿಲ್ಲ. ಹಣ ಕೊಡುತ್ತೇನೆಂದು ಬಂದವನನ್ನು 6 ಸಾರಿ ವಾಪಸ್ಸು ಕಳುಹಿಸಿದ ಪ್ರಕರಣ ಹೌಸಿಂಗ್ ಬೋರ್ಡಿನಲ್ಲಿ ಇದೆ. ಅವರು ಹುಡ್ಕೋದಿಂದ ಏನು ಯೋಜನೆಗಳನ್ನು ಮಂಜೂರ್ಮಾಡಿಸಿಕೊಂಡು ಬಂದಿದ್ದೇವೆ, ಹಣ ತಂದಿದ್ದೇವೆಂದು ಹೇಳಿದ್ದಾರೆ ಅದಕ್ಕೆ ನಾನು ಎಲ್ಲ ಶಾಸಕರ ಪರವಾಗಿ ಮತ್ತು ಜನತೆಯ ಪರವಾಗಿ ಅಭಿನಂದಿಸುತ್ತೇನೆ. ಆದರೆ ಅದರಲ್ಲಿ ನನ್ನದೊಂದು ತಕರಾರು ಇದೆ. ಅದೇನೆಂದರೆ, ಮನೆಗಳ ಗುಣಮಟ್ಟವನ್ನು ಕಾಪಾಡುವ ಕೆಲಸದಲ್ಲಿ ಮತ್ತು ಕಛೇರಿಗಳಲ್ಲಿ ಸಾರ್ವಜನಿಕರಿಗೆ ಕಿರುಕುಳ ಆಗುವುದನ್ನು ತಪ್ಪಿಸುವುದರ ಕಡೆಗೆ ಸರ್ಕಾರ ಅಷ್ಟಾಗಿ ಗಮನ ಕೊಟ್ಟಿಲ್ಲವೆಂದು ತಕರಾರು ಇದೆ. ಇದನ್ನು ಸರಿಪಡಿಸಲು ಸರ್ಕಾರ ಪ್ರಯತ್ನ ಮಾಡದೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI. R. S. MANE (Belgaum).—Sir, I confine myself only to the demand made on account of Administration of Justice. While speaking on the demand, at the outset I must urge the Government to take some drastic steps towards freeing the temple of justice from the disease of delay that comes in the way of getting justice. Unless that

is done, the people will lose faith and confidence which they have in the administration of justice. There are many reasons for the delay that is caused in the disposal of cases. The meagre number of judges is one of the main reasons for the delay. Therefore, I suggest that the number of judges be increased. So also if the cases are decided by compromise, the delay in the courts will be avoided and time saved. It is necessary to encourage the lawyers before they come to the Court, to sit among themselves representing opposite parties and to see how many issues can be compromised among themselves and how many issues remain to be contested. If such a thing is also practised here as has been practised in America, I believe the main cause for delay in the administration of justice will be removed. There must also be an impetus to the litigants to compromise the cases and that impetus is found under section 56 of the Court Fee and Suit Valuation Act. It refers to the refund of court fees. If a case of civil nature is compromised before evidence of merits is recorded then 50% of the court fee is refunded. But, strangely enough there is a lacuna in the Act. When the suit is with drawn and even if it is with drawn on the first day court fee is not refundable to the plaintiff. That lacuna has to be removed and withdrawal of suits should be encouraged by allowing full court fee to berefunded to the plaintiff who withdraws it before the issues are framed. So also the flat rate of 50% of refund of court fee should be increased to 75%. When the suit is compromised before framing of issues 75% should be refunded, because it is an impetus to litigants to withdraw the case or compromise the case. That is why I am stressing this point. Further the justice has to be administered at the door steps of the litigants. Suppose there is a litigant from Athani, he has to come over to Belgaum. It is an uphill task. Therefore, it is necessary to establish courts in two or three districts comprising a sub-division. Accordingly civil courts have been established. But, so far as session courts are concerned all the courts are now housed at the district headquarters. I suggest that the sessions court also should be established sub-division-wise so that the delay that is caused in disposal of criminal cases also will be removed. Then I suggest that there should be some impetus to the judges also who dispose of a number of cases in a short time. If that can be provided that also should be done. Then, justice has to be administered and done to the litigants and it should also appear or seem to have been done. Criminal Procedure Code enjoins that the statement of witnesses should be recorded in the language of the witness which he speaks. This has not been followed so far as Belgaum District and border area is concerned. In border area there is not a single village which is speaking only one language. 70% people speak one language. There are bilingual villages. In fact the entire Belgaum District has been declared to be a bilingual district by the erstwhile Bombay Government and the same notification still stands. That has not been withdrawn. Therefore, my suggestion would be that arrange-

ment should be made to record statement of witnesses in their own language. Recently in a criminal case a judgement has been delivered. I do not know whether the Hon'ble Minister is aware of this judgement delivered by a First Class Judicial Magistrate of Khanapur Taluk wherein by has directed the prosecution to supply investigation papers in the language of the accused. It has to be noted that the investigation papers were only in Kannada. The witness spoke Marathi before the police. But, the police recorded the statement in Kannada. What the judge ordered is to translate them to Marathi and see that Marathi investigation papers are supplied to the accused. Unless that is done the judge went on further to say that there cannot be a fair trial. Therefore, my suggestion would be to employ judges as well as clerks, stenographers who know both the languages—Marathi and Kannada—so far as border area is concerned. For avoiding delay I would suggest that in criminal cases the certified copy of the judgement—as in warrant procedure case is supplied to the accused then and there when the judgement is delivered. So also in civil cases that can be done. The judge who dictates the judgement to a stenographer can direct the stenographer to take out two or three copies more if appications by the defendants and plaintiffs are submitted for the copies beforehand. If that is done the two months' or three months' time that is taken for the supply of copies will be removed and the accused may prefer appeals within time and that will also help speedy disposal. He can take out more copies. There is already a provision in the civil rules of practice to supply copies of depositions. When the typist types the depositions that moment he can take out two or more copies and supply them. That can be done in the case of civil judgement also. That practice should be introduced. With these words I am thanking you for having given me a chance to say a few words. With these suggestions I close.

ಶ್ರೀ ನಾಗನಗೌಡ.—ಮಾನ್ಯ ಅಧ್ಯಕ್ಷರೇ...

ಶ್ರೀ ಯಡಿಯೂರಪ್ಪ.—ಸ್ವಾಮಿ, ನಾವು ಭಾರತೀಯ ಜನತಾ ಪಕ್ಷದವರು ಈ ಸದನದಲ್ಲಿದ್ದೇವೆ. ಇದನ್ನು ಜ್ಞಾಪಕವಿಟ್ಟುಕೊಳ್ಳಿ.

ಉಪಾಧ್ಯಕ್ಷರು.—ಏತಕ್ಕಿಷ್ಟು ಆತುರ ನಿಮಗೆ ? ಕರೆಯುತ್ತೇನೆ ಕುಳಿತುಕೊಳ್ಳಿ.

ಶ್ರೀ ಯಡಿಯೂರಪ್ಪ.—ನೀವು ಅವಕಾಶ ಕೊಡದಿದ್ದರೂ ಚಿಂತೆ ಇಲ್ಲ. ದಯವಿಟ್ಟು ನನ್ನ ಮಾತು ಕೇಳಿ.

ಉಪಾಧ್ಯಕ್ಷರು.—ನಮ್ಮ ನಿಮ್ಮಲ್ಲಿ ಏನಾದರೂ ಡಿಫರೆನ್ಸ್ ಇದೆಯೋ ? ಏತಕ್ಕೆ ಹಾಗೆ ಹೇಳುತ್ತೀರಿ ?

ಶ್ರೀ ಯಡಿಯೂರಪ್ಪ.—ದಯವಿಟ್ಟು ನಾನು ಹೇಳುವುದನ್ನು ಕೇಳಿ.

ಉಪಾಧ್ಯಕ್ಷರು.—ಬೇಡಿಕೆ ಮೇಲೆ ಮಾತನಾಡುತ್ತೀರಾ ?

ಶ್ರೀ ಯಡಿಯೂರಪ್ಪ.—ಹೌದು.

ಉಪಾಧ್ಯಕ್ಷರು.—ಹಾಗಾದರೆ ಕುಳಿತುಕೊಳ್ಳಿ. ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಯಡಿಯೂರಪ್ಪ.—ನಾವು 18 ಜನ ಶಾಸಕರು ಇಲ್ಲಿದ್ದೇವೆ.

ಉಪಾಧ್ಯಕ್ಷರು.—ಬಿ.ಜೆ.ಪಿ. ಈ ಸದನದಲ್ಲಿದೆ ಎಂಬುದು ಗೊತ್ತು, ಅದಕ್ಕೆ ಅವಕಾಶ ಕೊಡಬೇಕು ಎಂಬುದೂ ಗೊತ್ತು.

ಶ್ರೀ ಯಡಿಯೂರಪ್ಪ.—ನನಗೆ ಪೂರ್ತಿ ಮಾತನಾಡುವುದಕ್ಕೆ ಅವಕಾಶ ಕೊಡಿ. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು. ಇಲ್ಲದಿದ್ದರೆ ನಮ್ಮನ್ನು ನೀವು ನೆಗ್ಲೆಕ್ಟ್ ಮಾಡುತ್ತಿದ್ದೀರಿ ಎಂಬ ಭಾವನೆ ಬರುತ್ತದೆ. ಆದ್ದರಿಂದ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು.—ನಿಮ್ಮ ನಾಯಕರನ್ನು ಕೇಳಿ. ಗಂಗಾಧರನ್ ಅವರನ್ನು ಕೇಳಿದಾಗ ಅವರು ನಾನು ಮಾತನಾಡುವುದಿಲ್ಲ, ಧನಂಜಯಕುಮಾರ್ ಅವರು ಮಾತನಾಡುತ್ತಾರೆ ಎಂದು ಹೇಳಿದರು. ಅದಕ್ಕೆ ಬೇರೆಯವರನ್ನು ಕರೆಯಬೇಕಾಯಿತು. ನೀವು ಹೊರಗಡೆ ಎಲ್ಲೋ ಕುಳಿತಿದ್ದು ಏಕ್‌ದಮ್ ಬಂದು ಒಳಗಡೆ ಅವಕಾಶ ಕೊಡಲಿಲ್ಲ ಎಂದರೆ ಅದು ನಿಮ್ಮ ತಪ್ಪು.

ಶ್ರೀ ಯಡಿಯೂರಪ್ಪ.—ನಾನು ನನ್ನ ಬಗ್ಗೆ ಕೇಳಲಿಲ್ಲ. ನಮ್ಮ ಪಕ್ಷದ ಬಗ್ಗೆ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು.— ನಿಮ್ಮ ನಾಯಕರಾದ ಗಂಗಾಧರನ್ ಅವರನ್ನು ಕೇಳಿ. ನಿಮಗೂ ಅವರಿಗೂ ಏನೋ ಡಿಫರೆನ್ಸ್ ಇರಬಹುದು ಎಂದು ಕಾಣುತ್ತದೆ.

ಶ್ರೀ ಹೆಚ್. ಗಂಗಾಧರನ್.—ದಯಮಾಡಿ ಹಾಗೆ ತಿಳಿದುಕೊಳ್ಳಬೇಡಿ. ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ ಅಷ್ಟೆ.

ಶ್ರೀ ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರಿಂದ ಈ ತರಹ ಮಾತು ಬರಬಾರದು.

ಉಪಾಧ್ಯಕ್ಷರು.—ತಮ್ಮ ಕಡೆಯವರು ಮಾತನಾಡದಿದ್ದುದರಿಂದ ಬೇರೆಯವರನ್ನು ಕರೆದೆ. ತಮಗೂ ಅವಕಾಶ ಕೊಡೋಣ, ಕುಳಿತುಕೊಳ್ಳಿ.

* ಶ್ರೀ ಹೆಚ್. ನಾಗನಗೌಡ (ಕುರುಗೋಡು).—ಸನ್ಮಾನ್ಯ ಅಧ್ಯಕ್ಷರೇ, ಹೌಸಿಂಗ್ ಬೋರ್ಡ್ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಮಾತನಾಡಬಯಸುತ್ತೇನೆ. ಜನತಾ ಹೌಸ್‌ಗಳ ಬಗ್ಗೆ ಮಾನ್ಯ ಧರ್ಮಸಿಂಗ್ ಅವರು ಸಾಕಷ್ಟು ಹೇಳಿದ್ದಾರೆ. ಮೊನ್ನೆ ಕನ್‌ಸಲ್‌ಟೇಟಿವ್ ಕಮಿಟಿಯಲ್ಲಿನ ಮೀಟಿಂಗ್‌ನಲ್ಲಿ ಮಾನ್ಯ ಲಕ್ಷ್ಮೀಸಾಗರ್‌ರವರು ಹೌಸಿಂಗ್ ಬೋರ್ಡ್ ಮನೆಗಳ ಅಲಾಟ್‌ಮೆಂಟ್ ಬಗ್ಗೆ ಹೇಳುತ್ತಾ 90 ಪರ್ಸೆಂಟ್ ಮನೆಗಳನ್ನು ಲಾಟರಿ ಮೂಲಕ ಹಂಚಲಾಗುತ್ತದೆ ಎಂದಿದ್ದಾರೆ. ಈ ವಿಷಯದಲ್ಲಿ ನಾನು ವಿರೋಧ ಮಾಡುತ್ತೇನೆ. ಇಲ್ಲಿ ಲಾಟರಿ ಎತ್ತುವುದರಿಂದ ಯಾರು ಅದೃಷ್ಟವಂತರು ಇರುತ್ತಾರೆ ಅವರಿಗೆ ಮಾತ್ರ ಮನೆಗಳು ಸಿಕ್ಕಿ ದುರಾದೃಷ್ಟವಂತರಿಗೆ ಮನೆಗಳು ಸಿಗುವುದಿಲ್ಲ. ಹಾಗೂ ಇನ್ನೂ 10 ಪರ್ಸೆಂಟ್ ಮನೆಗಳನ್ನು ಬೋರ್ಡ್ ಅಪ್ರೂವಲ್‌ಗೆ ಹಾಗೂ ಸರ್ಕಾರದಿಂದ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಇದನ್ನು 25 ರಿಂದ 30 ಪರ್ಸೆಂಟ್ ವರೆಗೆ ಹೆಚ್ಚಿಸಬೇಕು ಎಂದು ನಾನು ಹೇಳುತ್ತೇನೆ. ಮತ್ತು ಮನೆಗಳ ನಿರ್ಮಾಣದ ಬಗ್ಗೆ ರಾಷ್ಟ್ರೀಕೃತ ಬ್ಯಾಂಕುಗಳು ಹೆಚ್ಚಿನ ಪಾತ್ರವನ್ನು ವಹಿಸಿ ಮನೆಗಳ ನಿರ್ಮಾಣದ ಕಡೆಗೆ ಗಮನ ಹರಿಸಿದರೆ ಹೌಸಿಂಗ್ ಪ್ರಾಬ್ಲಮ್ ಸಾಲ್ವ್ ಆಗುತ್ತದೆಂದು ಹೇಳುತ್ತೇನೆ. ಹಾಗೂ ಏನು 1 ಪರ್ಸೆಂಟ್ ಇಯರ್‌ಮಾರ್ಕ್ ಮಾಡಿದ್ದೀರಿ ಅದು ಬಹಳ ಕಡಿಮೆ ಇದೆ. ಇದು ತಮ್ಮ ಒಂದು ಪರ್‌ವ್ಯೂಗೆ ಬರುವುದಿಲ್ಲ. ಈ ಬಗ್ಗೆ ತಾವು ಕೇಂದ್ರ ಸರ್ಕಾರದ ಜೊತೆ ಒತ್ತಾಯ ತರಬೇಕೆಂದು ಹೇಳುತ್ತೇನೆ. ಇವತ್ತು ಹೌಸಿಂಗ್ ಬೋರ್ಡ್ ಕಾರ್ಯಕ್ರಮಗಳು ಏನು ಇವೆ ಇವು ಗ್ರಾಮಾಂತರದ ಮಟ್ಟಕ್ಕೂ ತಲುಪಬೇಕೆಂದು ನಾನು ಹೇಳುತ್ತೇನೆ. ಹಳ್ಳಿಗಾಡಿನ ಜನರೂ ಈ ಒಂದು ಯೋಜನೆಯ ಲಾಭವನ್ನು ಪಡೆಯಬೇಕೆಂದು ಹೇಳುತ್ತೇನೆ. ಇನ್ನು ಲಾಗ್ರಾಜುಯೇಟ್ಸ್‌ಗೆ 100 ಜನರಿಗೆ ಟ್ರೈನಿಂಗ್ ಕೊಡುವ ಯೋಜನೆ ಏನು 1943 ರಿಂದ ಇದೆ. ಅದು ಬರೀ ಬೆಂಗಳೂರು ಹಾಗೂ ಸುತ್ತಮುತ್ತ ಇರುವ ಜನರಿಗೆ ಅನುಕೂಲವಾಗುತ್ತಿದ್ದು ಈ ಯೋಜನೆಯನ್ನು 200 ಜನರಿಗೆ ಏರಿಸಿದರೆ ಹಳ್ಳಿಗಳ ಜನರೂ ಇದನ್ನು ಉಪಯೋಗಿಸಿಕೊಳ್ಳಬಹುದೆಂದು ಹೇಳುತ್ತೇನೆ. ಇನ್ನು ನೋಟರಿ ಬಗ್ಗೆ ಹೇಳಬೇಕೆಂದರೆ ಇದರಲ್ಲಿ 70 ಜನರನ್ನು ನೇಮಿಸಿಕೊಳ್ಳಬೇಕೆಂದು ಇದ್ದು ಇದರಲ್ಲಿ ಇನ್ನೂ ಕೆಲವು ಜಾಗಗಳು ಖಾಲಿ ಇವೆ. ಈ ವಿಷಯದಲ್ಲಿ ಸರ್ಕಾರಕ್ಕೆ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಮದ್ರಾಸ್‌ನಲ್ಲಿ ಏನು ಯಾರು ಬೇಕಾದರೂ ಅಡ್ವಕೇಟ್ ಮುಂದೆ ಅಫಿಡವಿಟ್ ಸೈನ್ ಮಾಡುವುದಕ್ಕೆ ಅವಕಾಶ ಇದೆ. ಅದೇ ರೀತಿಯ ಸಿಸ್ಟಮ್‌ನ್ನು ನಮ್ಮ ರಾಜ್ಯದಲ್ಲೂ ಇಂಟ್ರಡ್ಯೂಸ್ ಮಾಡಿದರೆ ಜನರಿಗೆ ಆಗುತ್ತಿರತಕ್ಕ ಕಷ್ಟಗಳು ಕಡಿಮೆಯಾಗುತ್ತವೆಂದು ಹೇಳುತ್ತೇನೆ. ಇನ್ನು ಏನು ಶಾಸಕರಿಗೆ ಟ್ರೈನಿಂಗ್ ಪ್ರೋಗ್ರಾಮನ್ನು ಕೇವಲ 40 ಜನರಿಗೆ ಸೀಮಿತ ಮಾಡಿಕೊಟ್ಟಿರಿ ಈ ಟ್ರೈನಿಂಗನ್ನು ಎಲ್ಲಾ ಶಾಸಕರಿಗೂ ಕೊಟ್ಟರೆ ಅವರು ಶಾಸನಸಭೆಗಳಲ್ಲಿ ಸರಿಯಾಗಿ ಕೆಲಸ ಮಾಡಬಹುದೆಂದು ಹೇಳಿ, ಇನ್ನು ಏನು ಪ್ರಶ್ನೆಗಳನ್ನು ಲಾಗ್‌ನಲ್ಲಿ ಎತ್ತುತ್ತಿದ್ದೀರಿ ಇದರಲ್ಲಿ ಇಂಪಾರ್ಟೆಂಟ್ ಹಾಗೂ ಅನ್–ಇಂಪಾರ್ಟೆಂಟ್ ಪ್ರಶ್ನೆಗಳೆಲ್ಲಾ ಬಂದು ಒಳ್ಳೆಯ ಪ್ರಶ್ನೆಗಳು ಹಾಗೆಯೇ ಉಳಿಯುತ್ತವೆ. ತಾವು ಪಾರ್ಲಿಮೆಂಟಿನಲ್ಲಿ ಏನು ಸಿಸ್ಟಂ ಇದೆ ಅದನ್ನು ತಂದಿದ್ದೀವೆಂದು ಹೇಳಿದ್ದೀರಿ. ಈ ಬಗ್ಗೆ ತಾವು ಬೇರೆ ಯಾವುದಾದರೂ

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಿಧಾನವನ್ನು ತಂದು ಅನುಕೂಲ ಮಾಡುವುದಾದರೆ ಒಳ್ಳೆಯದು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಸಭಾಪತಿಗಳೇ, ಗೃಹ ನಿರ್ಮಾಣ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ಮಾತ್ರ ನಾನು ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಮನೆಗಳನ್ನು ಕಟ್ಟುವುದಕ್ಕೆ 2 ಸಾವಿರ ರೂಪಾಯಿ ಸಾಲ, 1,500 ರೂಪಾಯಿ ಸಬ್ಸಿಡಿ ಹಾಗೂ 500 ರೂಪಾಯಿ ಬೆನಿಫಿಶಿಯರಿ ಕಾಂಟ್ರಿಬ್ಯೂಷನ್‌ನಿಂದ ಎಂದರೆ ಒಟ್ಟು 4 ಸಾವಿರ ರೂಪಾಯಿಯಿಂದ ಏನು ಮನೆಯನ್ನು ಕಟ್ಟಬೇಕೆಂದು ಯೋಜನೆ ರೂಪಿಸಿದ್ದೀರಿ ಈ ಹಣದಿಂದ ಮನೆ ಕಟ್ಟಲು ಸಾಧ್ಯವಿಲ್ಲವೆಂದು ನಾನು ಹೇಳುತ್ತೇನೆ ಮತ್ತು ಈಗಿನ ಒಂದು ಲೆಕ್ಕದ ಪ್ರಕಾರ 12,59,102 ಸೈಟ್‌ಲೆಸ್ ಮೆಂಬರ್ಸ್ ಪೈಕಿ 11,06,245 ಜನರಿಗೆ ಸೈಟು ಕೊಟ್ಟಿದ್ದು ಮಿಕ್ಕ 1,52,857 ಜನರಿಗೆ ಮಾತ್ರ ಕೊಡಬೇಕೆಂದು ಹೇಳಿದ್ದೀರಿ. ಸರ್ಕಾರ ಮನಸ್ಸು ಮಾಡಿದರೆ ಈ ಒಂದೂವರೆ ಲಕ್ಷ ಜನರಿಗೆ ಕೇವಲ 6 ತಿಂಗಳಲ್ಲಿ ಸೈಟು ಒದಗಿಸಬಹುದು ಎಂದು ನಾನು ಹೇಳುತ್ತೇನೆ. ಇನ್ನು ತಾವು ಏನು ಬಿ.ಡಿ.ಎ. ಹಾಗೂ ಸಿ.ಐ.ಟಿ.ಬಿ. ಮುಖಾಂತರ ಸೈಟ್‌ಗಳನ್ನು ಒದಗಿಸುತ್ತಿದ್ದೀರಿ ಇದರಿಂದಲೇ ಬೇಡಿಕೆಯನ್ನು ಪೂರೈಕೆ ಮಾಡಲು ಸಾಧ್ಯವಾಗಲಾರದಾದ್ದರಿಂದ ಯಾವ ರಿಜಿಸ್ಟರ್ಡ್ ಹೌಸಿಂಗ್ ಸೊಸೈಟಿಗಳು ಈ ಬಗ್ಗೆ ಮುಂದೆ ಬರುತ್ತವೆ ಅವಕ್ಕೂ ಅವಕಾಶ ಕೊಟ್ಟಲ್ಲಿ ಈ ಬಗ್ಗೆ ಪೂರ್ಣ ಈ ಸಮಸ್ಯೆ ಬಗೆಹರಿಯುತ್ತದೆ. ಆಗ ಈ ಸೊಸೈಟಿಗಳಿಂದ ಆ ಸಂಸ್ಥೆಗಳಿಗಿಂತ ಕಡಿಮೆ ದರದಲ್ಲಿ ಸೈಟ್‌ಗಳು ಸಿಗುತ್ತವೆಂದು ನಾನು ಹೇಳುತ್ತೇನೆ. ಆ ಸೊಸೈಟಿಗಳಿಂದ ತಾವು ಲೇಔಟ್ ಚಾರ್ಜಸ್ ಹಾಗೂ ಮತ್ತೆ ಏನು ಅಮೆನಿಟೀಸ್ ಕೊಡಬೇಕೋ ಆ ಲೆಕ್ಕದ ಹಣವನ್ನು ಪಡೆದುಕೊಂಡು ಅವನ್ನೆಲ್ಲಾ ಮಾಡಿಕೊಟ್ಟರೆ ಜನರಿಗೂ ಸಹಾಯವಾಗುತ್ತದೆ ಎಂದು ನಾನು ಹೇಳುತ್ತೇನೆ. ಇನ್ನು ಹುಡ್ಕೋ ಸ್ಕೀಮ್‌ಗಳಿಗೆ ಕೇಂದ್ರದಿಂದ ಹಣ ಬರುತ್ತಿದ್ದು ಅವರ ಯಾವ ಮಾದರಿಯ ಪ್ಲಾನ್ ಕೊಡುತ್ತಾರೋ ಆ ಮಾದರಿಯಲ್ಲಿ ಮನೆಯನ್ನು ಕಟ್ಟಬೇಕಾಗಿರುತ್ತದೆ. ಡಿಲ್ಲಿಯಲ್ಲಿರುವ ಜನ ಅಲ್ಲಿರತಕ್ಕ ವಾತಾವರಣಕ್ಕೆ ಅನುಗುಣವಾಗಿ ಪ್ಲಾನ್ ಕೊಟ್ಟಿದ್ದು ಅಂತಹ ಮನೆಗಳನ್ನು ಇಲ್ಲಿ ಕಟ್ಟಲು ಸಾಧ್ಯವಿಲ್ಲ. ಮೈಸೂರಿಗೆ ಇಬ್ಬರು ಮಂತ್ರಿಗಳಾದ ಮಾನ್ಯ ಲಕ್ಷ್ಮೀಸಾಗರ್ ಹಾಗೂ ಮಾನ್ಯ ಚಂದ್ರಶೇಖರ್‌ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಅಲ್ಲಿ ಲೇಔಟ್ ಮಾಡದೇ ಮನೆಗಳನ್ನು ಕಟ್ಟಿದ್ದಾರೆ. ಹೊಲ ಯಾವ ಮಟ್ಟದಲ್ಲಿ ಇತ್ತೋ ಅದಕ್ಕಿಂತಾ ಕೆಳಮಟ್ಟದಲ್ಲಿ ಫೌಂಡೇಷನ್ ಕಟ್ಟಿ ಮನೆಗಳನ್ನು ಕಟ್ಟಿದ್ದಾರೆ. ಮಳೆ ಬಂದಾಗ ಹೊಲದ ನೀರೆಲ್ಲಾ ಮನೆಗೆ ನುಗ್ಗಿ ಆ ಜನರು ದೋಣಿಯೊಳಗೆ ವಾಸ ಮಾಡಬೇಕಾದಂತಹ ಪರಿಸ್ಥಿತಿ ಬಂದಿದೆ. ಈ ಹುಡ್ಕೋ ಸ್ಕೀಮ್‌ಗೆ ಏನು ಹಣವನ್ನು ಕೊಡುತ್ತಾರೆ ಅದನ್ನು ಕೊಡಲಿ, ಅವನ್ನು ಕಟ್ಟತಕ್ಕದ್ದರ ಬಗ್ಗೆ ನಮ್ಮ ತಜ್ಞರೇ ಪ್ಲಾನ್ ಬರೆಯುವಂತಾಗಲಿ ಎಂದು ನಾನು ಹೇಳಬಯಸುತ್ತೇನೆ. ಈ ಬಗ್ಗೆ ತಾವು ಕೇಂದ್ರದ ಜೊತೆ ವ್ಯವಹಾರ ಮಾಡಬೇಕೆಂದು ಹೇಳುತ್ತೇನೆ. ಇನ್ನು ಹೌಸಿಂಗ್ ಬೋರ್ಡ್‌ನವರು ಏನು ಮನೆಗಳನ್ನು ಕಟ್ಟಿದ್ದಾರೆ ಅವುಗಳು ಸ್ಲಮ್‌ಗಳು ಎಂದು ನಾನು ಹೇಳಬೇಕಾಗುತ್ತದೆ. ಮೈಸೂರಿನಲ್ಲಿ ಒಂದು ಕಡೆ ಉದ್ದಕ್ಕೆ ಮನೆಗಳನ್ನು ಕಟ್ಟಿದ್ದಾರೆ. ಅವಕ್ಕೆ ಚರಂಡಿ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಹಾಗೂ ಈ ಮನೆಗಳ ಎದುರುಗಡೆ ಅಡ್ಡಲಾಗಿ ಮತ್ತೆ ಮನೆಗಳನ್ನು ಕಟ್ಟಿದ್ದು ಅಲ್ಲಿನ ಕೊಳಚೆ ನೀರೆಲ್ಲಾ ಈ ಮನೆಗಳ ಹತ್ತಿರ ಬರುತ್ತದೆ. ಹಾಗೂ ಈ ಮನೆಗಳ ಒಳಕ್ಕೆ ಹೋಗುತ್ತದೆ. ಈ ರೀತಿ ಅವರು ಸ್ಲಮ್‌ಗಳನ್ನು ಕ್ರಿಯೇಟ್ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಇನ್ನು ಶಾಸಕಾಂಗದ ಬಗ್ಗೆ ಹೇಳಬೇಕೆಂದರೆ, ಶಾಸಕರು ಸರಿಯಾಗಿ ಕೆಲಸ ಮಾಡಬೇಕಾದರೆ ಆಡಳಿತ ಜನರ ಕೈಗೆ ಸಿಕ್ಕಬೇಕು ಎಂದು ನಾನು ಹೇಳುತ್ತೇನೆ. ಇವತ್ತು ಅಧಿಕಾರಶಾಹೀ ಆಡಳಿತ ಮುಂದುವರೆದುಕೊಂಡು ಬಂದಿದೆ. ಅಧಿಕಾರ ಜನರ ಕೈಗೆ ಸಿಕ್ಕಿಲ್ಲ. ಇವತ್ತು ಶಾಸಕರೇ ತಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕಾದರೆ ಪ್ರತಿಯೊಬ್ಬ ಶಾಸಕರಿಗೂ ಆಯಾಯ ತಾಲ್ಲೂಕು ಆಫೀಸಿನಲ್ಲಿ ಪ್ರತ್ಯೇಕ ಕಛೇರಿ ಕೊಟ್ಟು, ಒಬ್ಬ ಕ್ಲರ್ಕ್ ಕೊಟ್ಟು ಅವರ ವ್ಯವಹಾರಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಪಟ್ಟಣಗಳಲ್ಲಿ ಕಾರ್ಪೊರೇಷನ್ ಇದ್ದು, ಅಲ್ಲಿ ಆಯಾ ಶಾಸಕರಿಗೆ ಜಾಗ ಒದಗಿಸಬಹುದು. ಇಲ್ಲಿ ಟೈಪಿಸ್ಟ್ಸ್ ಹಾಗೂ ನೌಕರರಿಗೆ ಏನೂ ಕೊರತೆ ಇರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಇಂತಹ ವ್ಯವಸ್ಥೆ ಇದೆ ಎಂದು ನಾನು ಹೇಳುತ್ತೇನೆ. ನಮ್ಮ ಶಾಸಕರಿಗೆ ಬೇಕಾದಂತಹ ಕಟಿಂಗ್ಸ್ ಆಗಲಿ, ಯಾವುದೇ ಪುಸ್ತಕದ ಕೆಲವು ಭಾಗಗಳನ್ನಾಗಲೀ ನಾವು ಮನೆಗೆ ತೆಗೆದುಕೊಂಡು ಹೋಗಿ ಸ್ಟಡಿ ಮಾಡಬೇಕಾದರೆ ಅವು ಕೇವಲ ಒಂದೊಂದೇ ಪ್ರತಿ ಇರುತ್ತವೆ. ಆದ್ದರಿಂದ ಅವುಗಳನ್ನು ಹೆಚ್ಚು ಪ್ರತಿಗಳನ್ನಾಗಿ ಮಾಡಿಕೊಳ್ಳುವ ಬಗ್ಗೆ ನಮ್ಮ ಶಾಸನಸಭೆಯ ಲೈಬ್ರರಿಯಲ್ಲಿ ಜೆರಾಕ್ಸ್ ಯಂತ್ರವನ್ನು ಅಳವಡಿಸುವುದು ಒಳ್ಳೆಯದು. ಇದನ್ನು ಮಾನ್ಯ ಲಕ್ಷ್ಮೀಸಾಗರ್ ಅವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಅನಂತರ ಇಲ್ಲಿ ನಾನೊಂದು ವಿನಂತಿಸಿಕೊಳ್ಳುವುದೇನೆಂದರೆ ಶ್ರೀ ವೈ. ರಾಮಕೃಷ್ಣರವರು ಇಲ್ಲಿ ನಡೆಯತಕ್ಕ ನಡವಳಿಕೆಯನ್ನು ಟೆಲಿವಿಜನ್ ಮುಖಾಂತರವಾಗಿ ಮತ್ತು ರೇಡಿಯೋ ಮುಖಾಂತರವಾಗಿ ಪ್ರಸಾರ

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಬೇಕೆಂದು ಹೇಳಿದರು. ಇದನ್ನು ನಾನೂ ಸಹ 3 ವರ್ಷಗಳಿಂದ ಅವರು ಅಧಿಕಾರದಲ್ಲಿದ್ದಾಗಲೂ ಹೇಳುತ್ತಿದ್ದೆ. ಈಗಲೂ ಸಹ ಹೇಳುತ್ತಿದ್ದೇನೆ. ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿರತಕ್ಕ ಜನ ಇಲ್ಲಿ ಸದನದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುವುದಕ್ಕಾದರೂ ಬಿಡದಿದ್ದರೆ ಹೊರಗಡೆ ಲಾನ್‌ನಲ್ಲಿ ಮೈಕ್ ಸೆಟ್‌ಗಳ ಅರೇಂಜ್ ಮಾಡಿ ಇಡಿ. ಅಲ್ಲಿಯಾದರೂ ಅವರು ಕೂತುಕೊಂಡು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನೀವು ಇಲ್ಲಿ ಜಗಳವಾಡುವುದನ್ನು ಜನ ಕೇಳಿದರೆ ಪುನಃ ನಿಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸುವುದೇ ಬೇಡವೆಂದು ಹೇಳುತ್ತಾರೆ...

ಒಬ್ಬ ಮಾನ್ಯ ಸದಸ್ಯರು.—ಇಲ್ಲಿ ಜಗಳವಾಡುವುದನ್ನು ಮೈಕ್ ಮುಖಾಂತರವಾಗಿ ಜನ ಕೇಳಿಸಿಕೊಂಡರೆ ಮುಂದಿನ ಸಾರಿ ವೋಟೇ ಕೊಡುವುದಿಲ್ಲ...

ಶ್ರೀ ಜಿ. ಹೆಚ್. ಗಂಗಾಧರನ್.—ಗೊತ್ತಾಗಲಿ ಬಿಡಿ. ಜನ ನಮ್ಮನ್ನು ಆರಿಸಿ ಹವಾ ನಿಯಂತ್ರಿತ ಕಟ್ಟಡದಲ್ಲಿ ಕೂರಿಸಿದ್ದಾರೆ. ಅವರು ನಮ್ಮನ್ನು ಆರಿಸಿ ಕಳುಹಿಸಿರುವ ಋಣಕ್ಕಾದರೂ ನಾವು ಇಲ್ಲಿ ಹೀಗೆ ನಡೆದುಕೊಳ್ಳುತ್ತೇವೆ ಎಂಬುದು ಗೊತ್ತಾಗಲಿ, ಆ ದೃಷ್ಟಿಯಿಂದ ಟೆಲಿವಿಜನ್ ಮತ್ತು ರೇಡಿಯೋ ಮುಖಾಂತರ ಸಹ ಸಾಧ್ಯವಾಗುವುದಾದರೆ ಅದನ್ನೂ ಸಹ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ, ನಮ್ಮ ಕರ್ನಾಟಕ ವಿಧಾನಮಂಡಲದಲ್ಲಿನ ರಿಸರ್ಚ್ ವಿಂಗ್‌ನಲ್ಲಿರತಕ್ಕ ಸಿಬ್ಬಂದಿ ಏನೇನೂ ಸಾಲುವುದಿಲ್ಲ. ರಿಸರ್ಚ್ ಅಸಿಸ್ಟೆಂಟ್‌ರವರ 2 ಪೋಸ್ಟ್ ಖಾಲಿ ಇವೆ. 5 ವರ್ಷವಾದರೂ ಇನ್ನೂ ಅದನ್ನು ಭರ್ತಿಮಾಡಿಲ್ಲ. ಇನ್ನು ಟೈಪಿಸ್ಟನ್ನು ತೆಗೆದುಕೊಂಡು ಹೋಗಿ ಯಾವುದೋ ಮೂಲೆಯಲ್ಲಿ ಹಾಕಿದ್ದೀರಿ, ಇನ್ನು ಲೆಜಿಸ್ಲೇಚರ್ಸ್‌ಗೇ ಎಂದು ಸ್ಪೆಷಲ್ ಟೈಪಿಸ್ಟ್ 8–10 ಜನರೆಂದು ಮಾಡಿದ್ದೀರಿ. ಅರವನ್ನೂ ಸಹ ಯಾವ ಮೂಲೆಯಲ್ಲಿ ಹಾಕಿದ್ದೀರೋ ಗೊತ್ತಿಲ್ಲ. ದಯಮಾಡಿ ಅವರನ್ನೆಲ್ಲಾ ಇಲ್ಲಿಯೇ ಇರತಕ್ಕ ರಿಸರ್ಚ್ ವಿಂಗ್‌ನಲ್ಲಿ ಟೈಪಿಸ್ಟ್‌ಗಳು ಕೂಡುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರೆಡೇಷನ್ ಲಿಸ್ಟ್ ಆಧಾರದ ಮೇಲೆ ಪ್ರಮೋಷನ್ ಕೊಡಬೇಕೆಂದು ದೇಶದ ಎಲ್ಲಾ ಭಾಗದ ವ್ಯವಹಾರಗಳನ್ನೂ ನಾವು ಇಲ್ಲಿ ಮಾಡುತ್ತೇವೆ. ಆದರೆ ಇಲ್ಲಿಯೇ ಕೆಲಸ ಮಾಡುತ್ತಿರುವ ನಮ್ಮ ಶಾಸನ ಸಭೆಯ ಎಷ್ಟೋ ಅಧಿಕಾರಿಗಳಿಗೆ ಪ್ರಮೋಷನ್ ಕೊಟ್ಟಿಲ್ಲ, ಇನ್ನು ಪಾಪ ಈ ಸ್ಟೆನೋಗ್ರಾಫರ್ಸ್ ಏನಿದ್ದಾರೆ ಅವರು ಜೀವಮಾನ ಪರ್ಯಂತ ಸ್ಟೆನೋಗ್ರಾಫರ್ಸ್ ಆಗಿ ಪ್ರಾಣ ಬಿಡುತ್ತಿದ್ದಾರೆ. ಬೇರೆ ಇಲಾಖೆಯಲ್ಲಿರತಕ್ಕ ಸ್ಟೆನೋಗ್ರಾಫರ್ಸ್ ಅಂಡರ್ ಸೆಕ್ರಟರಿಯಾಗುವುದಕ್ಕೆ ಅವಕಾಶವಿದೆ. ಆದರೆ ನಮ್ಮಲ್ಲಿ ಇದನ್ನು ಮಾಡಿಕೊಟ್ಟಿಲ್ಲ. ಅದನ್ನೂ ಸಹ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ಟೆನೋಗ್ರಾಫರ್ಸ್‌ಗೂ ಕೂಡ ಆ ಒಂದು ಪ್ರಮೋಷನ್‌ಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಜೆ.ಪಿ.ಯವರು ನಿಧನವಾದ ನಂತರ ಅವರ ಭಾವಚಿತ್ರವನ್ನು ಇಲ್ಲಿ ಇಡುವ ಬಗ್ಗೆ ಕಾಂಗ್ರೆಸ್ ಮಿತ್ರರೂ ಸಹ ಹಿಂದೆ ಒಪ್ಪಿಕೊಂಡಿದ್ದರು. ಎರಡೂ. ಎರಡೂವರೆ ವರ್ಷವಾದರೂ ಜೆ.ಪಿ.ಯವರ ಭಾವಚಿತ್ರವನ್ನು ಇಲ್ಲಿ ಹಾಕಿಲ್ಲ. ಆದುದರಿಂದ ಈಗಲಾದರೂ ಜನತಾ ಸರ್ಕಾರದವರು ಜೆ.ಪಿ.ಯವರ ಭಾವಚಿತ್ರವನ್ನು ಇಲ್ಲಿ ಹಾಕಿಸುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಆಡುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ. ನಮ್ಮ ಸ್ನೇಹಿತರುಗಳೆಲ್ಲಾ ನ್ಯಾಯಾಲಯಗಳ ಬಗ್ಗೆ ಮಾತನಾಡಿದ್ದಾರೆ ಆದುದರಿಂದ ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ನ್ಯಾಯಾಲಯಗಳಲ್ಲಿ ಅನೇಕ ಕಟ್ಟಳೆಗಳಲ್ಲಿ ಮಾನ್ಯ ಸದಸ್ಯರುಗಳು ಹೇಳಿದಹಾಗೆ ಬಹಳ ತಡವಾಗುತ್ತಿದೆ. ಇದು ನಿಜವಾದ ಸಂಗತಿ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ. ಇದಕ್ಕೆ ತಾವು ನ್ಯಾಯಾಲಯಗಳಲ್ಲಿ ನ್ಯಾಯಾಧೀಶರನ್ನು ಹೆಚ್ಚು ಮಾಡಬೇಕು. ಆ ರೀತಿ ಮಾಡಿದರೆ ಜನರು 3–4 ವರ್ಷ ಕೋರ್ಟಿಗೆ ಅಲೆದಾಡುವಂಥಾದ್ದು ತಪ್ಪಿದ ಹಾಗಾಗುತ್ತದೆ. ನಮ್ಮ ದಾವಣಗೆರೆಯ ನ್ಯಾಯಾಲಯದ ಬಗ್ಗೆ ಹೇಳುವುದಾದರೆ, ಸರ್ಕಾರ ನಮ್ಮಲ್ಲಿಗೆ ಮಾತ್ರ ಬಹಳ ನಿರ್ಲಕ್ಷ್ಯ ಮಾಡಿದೆಯೆಂದು ಹೇಳಿದರೆ ತಪ್ಪಾಗಲಾರದು. ದಾವಣಗೆರೆಯ ನ್ಯಾಯಾಲಯ ಯಾವ ರೀತಿಯಾಗಿ ಇದೆ ಎಂಬುದನ್ನು ನೋಡುವುದಕ್ಕೆ ಕಾನೂನು ಮಂತ್ರಿಗಳು ಬರಬೇಕೆಂದು ಅವರಿಗೆ ಆಹ್ವಾನ ನೀಡುತ್ತಿದ್ದೇನೆ. ನ್ಯಾಯಾಲಯವೆಂದು ಏನು ಹೇಳುತ್ತೇವೆಯೋ ಅದೇ ಇವತ್ತು ಮಾಯವಾಗಿದೆ. 50 ಸಾವಿರ ಜನಸಂಖ್ಯೆ ಇರತಕ್ಕಂಥ ರಾಣೆಬೆನ್ನೂರಿನಲ್ಲಿರತಕ್ಕ ಕೋರ್ಟ್ ಎಷ್ಟೋ ಚೆನ್ನಾಗಿದೆ. ಆದರೆ ದಾವಣಗೆರೆಯಲ್ಲಿ ಎರಡೂವರೆ ಲಕ್ಷ ಜನ ವಾಸ ಮಾಡತಕ್ಕ ಜಾಗದಲ್ಲಿ ನೋಡಿದರೆ ಸಿವಿಲ್

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೋರ್ಟ್ ಒಂದು ಕಡೆ ಇದ್ದರೆ ಮ್ಯಾಜಿಸ್ಟ್ರೇಟರ್‌ರವರ ಕೋರ್ಟು ಮತ್ತೊಂದು ಕಡೆ ಇದೆ. ಈ ರೀತಿಯಾಗಿ ಬೇರೆ ಬೇರೆ ಕಡೆಗಳಲ್ಲಿ ಇರುವುದರಿಂದ, ನಮ್ಮ ವಕೀಲರು ಯಾವ ಕೋರ್ಟ್‌ಗೆ ಹೋಗಿದ್ದಾರೆ, ಯಾವಾಗ ಬರುತ್ತಾರೆ ಎಂಬುದೇ ಗೊತ್ತಾಗುವುದಿಲ್ಲ. ಇದರಿಂದ ಕಕ್ಷಿದಾರರಿಗೂ ಸಹ ತಮ್ಮ ತಮ್ಮ ಲಾಯರುಗಳನ್ನು ಹುಡುಕಿಕೊಂಡು ಅಲೆದು ಅಲೆದು ಸುಸ್ತಾಗಿ ಕೊನೆಗೆ ಲಾಯರ್ ಸಿಗದಿದ್ದರೆ ಅವರ ಕೇಸ್ ಅಡ್ಜರ್ನ್ ಆಗುವಂಥ ಪರಿಸ್ಥಿತಿ ಇದೆ. ಈ ರೀತಿಯಾದ ಅನೇಕ ತೊಂದರೆಗಳು ಇವೆ. ಆದುದರಿಂದ ಮಾನ್ಯ ಕಾನೂನು ಸಚಿವರು ಇದರ ಕಡೆಗೆ ಹೆಚ್ಚಿನ ಗಮನಕೊಟ್ಟು ನಮ್ಮ ದಾವಣಗೆರೆಯಲ್ಲಿ ಸರಿಯಾದ ರೀತಿಯಲ್ಲಿ ಕೋರ್ಟನ್ನು ನಿರ್ಮಾಣ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಗೃಹ ನಿರ್ಮಾಣ ಮಂಡಲಿಯ ಬಗ್ಗೆ ಹೇಳುವುದಾದರೆ ನಮ್ಮ ದಾವಣಗೆರೆಗೆ ತುಂಬಾ ಅನ್ಯಾಯ ವಾಗಿದೆ. ಇಲ್ಲಿ ಬಹಳ ವರ್ಷಗಳಿಂದಲೂ ಕೂಡ ಗೃಹಗಳನ್ನು ನಿರ್ಮಾಣ ಮಾಡತಕ್ಕ ವ್ಯವಸ್ಥೆಯಾಗಿಲ್ಲ. ಇದು ಕೈಗಾರಿಕಾ ನಗರ, ವ್ಯಾಪಾರ ಕೇಂದ್ರ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಬಹಳ ಮುಂದುವರಿದಿರತಕ್ಕ ದೊಡ್ಡ ನಗರ. ಹಿಂದಿನ ಸರ್ಕಾರ ಇಲ್ಲಿ ಗೃಹನಿರ್ಮಾಣ ಮಾಡುವ ಬಗ್ಗೆ ಸ್ವಲ್ಪ ಪ್ರಯತ್ನ ಮಾಡಿತ್ತು. ಆದರೆ ಏತಕ್ಕೋ ಏನೋ ಕೆಲಸವೇನೂ ಆಗಲಿಲ್ಲ. ಶ್ರೀ ಶಿವಪ್ಪನವರು ಹೌಸಿಂಗ್ ಬೋರ್ಡ್‌ನ ಛೇರ್ಮನ್ ಆಗಿದ್ದರು. ಆಗ ಅವರು ಸುಮಾರು 80 ಎಕರೆ ಜಮೀನನ್ನು ಅಕ್ವೈರ್ ಮಾಡುವುದಕ್ಕೆ ಪ್ರಯತ್ನಪಟ್ಟರು. ಆದರೆ ಅದು ಹಾಗೇಯೇ ನಿಂತುಹೋಯಿತು. ಇದರಿಂದ ನಮ್ಮ ದಾವಣಗೆರೆ ಮಹಾನಗರಕ್ಕೆ ಯಾರೇ ಆಗಲೀ, ಅವರು ಸರ್ಕಾರೀ ನೌಕರರೇ ಆಗಲೀ ಅಥವಾ ಬೇರೆ ಯಾರೇ ಬಂದರೂ ಕೂಡ ವಾಸಮಾಡುವುದಕ್ಕೆ ಮನೆ ಸಿಕ್ಕುವು ದಿಲ್ಲ. ಇದರಿಂದಾಗಿ ಯಾರೂ ಸಹ ಇಲ್ಲಿ ವಾಸ ಮಾಡುವುದಕ್ಕೆ ಇಷ್ಟಪಡುತ್ತಿಲ್ಲ. ಏತಕ್ಕೆಂದರೆ ಮನೆಗಳೇ ಸಿಗುತ್ತಿಲ್ಲ. ಆದುದರಿಂದ ಗೃಹ ನಿರ್ಮಾಣ ಮಂಡಲಿಯವರು ಆದಷ್ಟು ಜಾಗ್ರತೆ ಮನೆಗಳನ್ನು ಕಟ್ಟಿಸಿ ಕೊಡತಕ್ಕದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಈ ಹೌಸಿಂಗ್ ಬೋರ್ಡ್ ಮತ್ತು ಅರ್ಬನ್ ಡೆವಲಪ್‌ಮೆಂಟ್ ಇಲಾಖೆಯ ಬೇಡಿಕೆಯನ್ನು ಇಂಗ್ಲೀಷಿನಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಏನು ಕೊಟ್ಟಿದ್ದಾರೆಂಬುದು ನನಗೆ ಸರಿಯಾಗಿ ಅರ್ಥವಾಗುವುದಿಲ್ಲ. ಇವರಿಗೆ ಕನ್ನಡದಲ್ಲಿ ಕೊಡುವುದಕ್ಕೆ ಏನು ತೊಂದರೆ ಇದೆ ಎಂಬುದು ಗೊತ್ತಾಗುತ್ತಿಲ್ಲ. ತಾವು ಕನ್ನಡಕ್ಕೇ ಪ್ರೋತ್ಸಾಹ ಕೊಡುತ್ತೇವೆ. ಕನ್ನಡದಲ್ಲಿಯೇ ಎಲ್ಲಾ ವ್ಯವಹಾರ ನಡೆಸುತ್ತೇವೆಂದು ಹೇಳತಕ್ಕವರು ಇಂಗ್ಲೀಷಿನಲ್ಲಿ ಕೊಟ್ಟಿರು ವುದರಿಂದ ಬಹಳ ಬೇಸರದಿಂದ ನಾನು ಇದನ್ನು ಹರಿದುಹಾಕುತ್ತಿದ್ದೇನೆ. ನಮಗೆ ಇಂಗ್ಲೀಷ್‌ನಲ್ಲಿ ಏತಕ್ಕೆ ಕೊಡುತ್ತೀರಿ ? ನಾನು ಸುಮಾರು ನಾಲ್ಕು ವರ್ಷಗಳ ಹಿಂದೆ ಇದೇ ರೀತಿ ಹರಿದು ಹಾಕಿದ್ದೇನೆ. ತಾವು ಕೊಡತಕ್ಕದ್ದು ಕನ್ನಡದಲ್ಲಿ ಕೊಡಬೇಕು. ಅದು ಎಲ್ಲರಿಗೂ ಗೊತ್ತಾಗಬೇಕು. ತಾವು ಏನು ಕೊಡುತ್ತೀರಾ ಅದು ಜನರಿಗೆ ಗೊತ್ತಾಗಬೇಕು. ತಾವು ಇಂಗ್ಲೀಷ್‌ನಲ್ಲಿ ಕೊಡತಕ್ಕದ್ದು ಇಲ್ಲಿ ಅನೇಕ ಜನರಿಗೆ ಗೊತ್ತಾಗುವುದಿಲ್ಲ. ತಾವು ಕೊಡತಕ್ಕದ್ದು ತೆಗೆದುಕೊಂಡು ಹೋಗಿ ಬೇರೆಯವರಿಗೆ ಕೊಟ್ಟರೆ ಅವರಿಗೂ ಸಹ ಗೊತ್ತಾಗುವುದಿಲ್ಲ. ತಾವು ಕನ್ನಡದಲ್ಲಿ ಕೊಟ್ಟಿದ್ದರೆ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಬಹುದಾಗಿತ್ತು. ಈಗ ತಾವು ಇಂಗ್ಲೀಷ್ ನಲ್ಲಿ ಕೊಡುವುದರಿಂದ, ನೀವು ಏನು ಕೊಡುತ್ತೀರಾ ಅದನ್ನು ನೋಡಿಕೊಂಡು ಹೋಗಬೇಕಾಗಿದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಇಷ್ಟೊಂದು ಸಿಟ್ಟು ಮಾಡುವುದು ಬೇಡ. ಮುಂದೆ ಕನ್ನಡದಲ್ಲಿ ಕೊಡಿ ಎಂದು ಹೇಳಿ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ನಾನು ಎಷ್ಟು ಸಾರಿ ಹೇಳಿದ್ದೇನೆ. ಹಿಂದೆ ಕಾನೂನು ಸಚಿವರು ವಿರೋಧಪಕ್ಷದ ನಾಯಕರಾಗಿದ್ದಾಗ ಅವರೂ ಸಹ ಹೇಳಿದ್ದರು. ಇವತ್ತು ಮಂತ್ರಿಗಳಾಗಿದ್ದಾರೆ. ಅಧಿಕಾರ ನಡೆಸುತ್ತಿದ್ದಾರೆ. ಆಡಳಿತದಲ್ಲಿದ್ದಾರೆ. ಅವರು ಏತಕ್ಕೆ ಕೊಡಬಾರದು ? ಆದ್ದರಿಂದ ಇನ್ನು ಮುಂದಾದರೂ ಯಾವುದೇ ಪತ್ರವ್ಯವಹಾರ ನಮಗೆ ಕೊಡಬೇಕಾದರೆ ಕನ್ನಡದಲ್ಲಿಯೇ ಒದಗಿಸಲಿಕ್ಕೆ ನಮಗೆ ಅಧ್ಯಕ್ಷರು ಸಹಾಯ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ವಿಷಯ ಕನ್ನಡದಲ್ಲಿ ಒದಗಿಸಲಿಕ್ಕೆ ತಾವು ಸಹಾಯ ಮಾಡಬೇಕು. ಇನ್ನು ಜನತಾ ಮನೆಗಳ ಬಗ್ಗೆ ಹೇಳಬೇಕೆಂದರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಜನತಾ ಮನೆಗಳು ಮಳೆ ಬಂದು ಬಿದ್ದುಹೋಗುತ್ತಿವೆ. ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಉಪವಾಸ ಕುಳಿತಿದ್ದಾರೆ. ಧರಣಿ ಮಾಡುತ್ತಿದ್ದಾರೆ. 20 ದಿವಸಗಳಾಯಿತು. ಆ ಬಗ್ಗೆ ಸರ್ಕಾರ ಏನೂ ತೀರ್ಮಾನ ತೆಗೆದುಕೊಂಡಿಲ್ಲ. ಇದೇರೀತಿ ಆಗಿ ಆಗಿ ನವಲಗುಂದದ ತರಹ ರೊಚ್ಚಿಗೆದ್ದು ಹೋರಾಟ ಮಾಡತಕ್ಕ ಪರಿಸ್ಥಿತಿ ಬರಬಹುದು. ಇವೊತ್ತು ಆ ಮನೆಗಳು ಬಿದ್ದುಹೋದರೆ ಅವರ ಗತಿ ಏನಾಗಬೇಕು. ತಾವು ಬಡವರ ಮನೆ ಕಟ್ಟಿಸುತ್ತೇವೆ. ಬಡವರನ್ನು ಉದ್ಧಾರ ಮಾಡುತ್ತೇವೆಂದು ಹೇಳುವುದಲ್ಲ, ಅಲ್ಲಿ ಮನೆಗಳು ಬಿದ್ದುಹೋಗುತ್ತಿವೆ. ಅದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ತಿಳಿಸಬೇಕು.

ಉಪಾಧ್ಯಕ್ಷರು.—ಮುಂದೆ ಏನು ಮಾಡಬೇಕು ಅದಕ್ಕೆ ಸಲಹೆ ಕೊಡಿ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಚಳ್ಳಕೆರೆಯಲ್ಲಿ ಮನೆ ಬಿದ್ದು, ಎರಡು ಮಕ್ಕಳು ಸತ್ತು, ಗಂಡ ಹೆಂಡತಿ ಇಬ್ಬರೂ ಸೊಂಟ ಮುರಿದು ಆಸ್ಪತ್ರೆಯಲ್ಲಿ ಮಲಗಿದ್ದಾರೆ. ಜನತಾ ಮನೆಗಳ ಬಗ್ಗೆ ಚಿತ್ರದುರ್ಗಕ್ಕೆ 43 ಲಕ್ಷ

ರೂಪಾಯಿ ಬಿಡುಗಡೆ ಮಾಡಬೇಕೆಂದು ಇದೆ, ಅದನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಂಡು ಅಧ್ಯಕ್ಷರು ಇಷ್ಟುಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ವರದಿಯ ಕೊನೆಯ ಭಾಗದಲ್ಲಿ ಭೂಸುಧಾರಣೆ ವಿಭಾಗ ಇದೆ. ಅದರ ಬಗ್ಗೆ ಎರಡು ನಿಮಿಷ ಮಾತ್ರ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಬಡ ಗೇಣಿದಾರರಿಗೆ ಕಾನೂನು ನೆರವು ಎಂದು ತೋರಿಸಿದ್ದಾರೆ. ಇದರ ಬಗ್ಗೆ ನಾನು ನೇರವಾಗಿ ಬಹಳ ಮುಖ್ಯವಾದ ವಿಚಾರವನ್ನು ಹೇಳುತ್ತೇನೆ. ಮಾನ್ಯ ಕಾನೂನು ಮಂತ್ರಿಗಳಿಗೆ ಎಷ್ಟರಮಟ್ಟಿಗೆ ಅದರ ಮೇಲೆ ಪ್ರೀತಿ ಇದೆ ಎಂದರೆ, ಲಕ್ಷ್ಮೀಸಾಗರ್ ಅಂದರೆ ಕಾನೂನು, ಕಾನೂನು ಅಂದರೆ ಲಕ್ಷ್ಮೀಸಾಗರ್ ಆ ರೀತಿ ಇದೆ. ಅವರು ಕಾನೂನಿನ ಬಗ್ಗೆ ಲಕ್ಷ್ಯ ಕೊಡಬಹುದು, ಆದರೆ ಕಾನೂನನ್ನು ಜಾರಿಗೆ ತರಬೇಕಾದರೆ ಮುಂದೆ ಏನಾಗುತ್ತದೆ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇಲ್ಲಿ ಲೆಕ್ಕ ಕೊಟ್ಟಿರುವ ಬಗ್ಗೆ ನಾನು ಒಂದು ವಿಚಾರವನ್ನು ಹೇಳುತ್ತೇನೆ. 8,373 ರಿಟ್ ಅರ್ಜಿಗಳು ಸರ್ಕಾರದ ನೆರವಿನ ಮೂಲಕ ಗೇಣಿದಾರರ ಪರವಾಗಿ ದಾಖಲಾಗಿವೆ ಎಂದು ಹೇಳಿದ್ದಾರೆ. ನಾನು ಈ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳ ಬಳಿ ಚರ್ಚೆ ಮಾಡಬೇಕೆಂದು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಮಾನ್ಯ ಮಂತ್ರಿಗಳಿಗೆ ನನ್ನ ಬಳಿ ಮಾತನಾಡಲಿಕ್ಕೆ ವೇಳೆ ಸಿಕ್ಕಲಿಲ್ಲವೋ ಅಥವಾ ಅವರಿಗೆ ನನ್ನ ಬಳಿ ಮಾತನಾಡಲಿಕ್ಕೆ ಇಷ್ಟ ಇರಲಿಲ್ಲವೋ ಗೊತ್ತಾಗಲಿಲ್ಲ. ಈಗ 8,373 ಪ್ರಕರಣಗಳಲ್ಲಿ ಸುಮಾರು 7,000 ದಷ್ಟು ಪ್ರಕರಣಗಳು ಮುಖ್ಯ ನ್ಯಾಯಾಲಯದಲ್ಲಿ ಇಬ್ಬರು ವಕೀಲರಾದ ಬಿ. ಆರ್. ಸುಬ್ಬಣ್ಣ ಹಾಗೂ ಎಸ್. ಆರ್. ನಾಯಕ್ ಅವರ ಕಡೆ ಇವೆ. ಅವು ಸುಮಾರು ಐದಾರು ವರ್ಷಗಳಿಂದಲೂ ಇವೆ. ಅವರು ಈ ಕಾನೂನು ನೆರವಿನ ಖಾತೆಗೆ ವಕೀಲರಾಗಿ ನೇಮಿಸಲ್ಪಟ್ಟವರು, ಅವರು ಕೆಲಸ ಮಾಡುತ್ತಿದ್ದಾರೆ. ಈಗ 7,000 ಜನ ಗೇಣಿದಾರರು ತೊಂದರೆಯಲ್ಲಿದ್ದಾರೆ. ಏಕೆಂದರೆ, ಮಾನ್ಯ ಮಂತ್ರಿಗಳು ಈ ಇಬ್ಬರು ವಕೀಲರನ್ನು ಕಡಿಮೆ ಮಾಡಿ. ಬೇರೊಬ್ಬರು ವಕೀರಲನ್ನು ನೇಮಿಸಿದ್ದಾರೆ. ನಾನು ದೊಡ್ಡ ವಕೀಲ ಅಲ್ಲ, ನಾನೊಬ್ಬ ಚಿಕ್ಕ ವಕೀಲ. ವಕೀಲ ಮತ್ತು ಕಕ್ಷಿದಾರರ ಸಂಬಂಧವನ್ನು ಕಾನೂನಿನಿಂದ ನಿರ್ಧಾರ ಮಾಡಲಿಕ್ಕೆ ಆಗುವುದಿಲ್ಲ. ಕೇಸನ್ನು ಕಾನೂನಿನಿಂದ ಮಾಡಲಿಕ್ಕೆ ಬರುತ್ತದೆ. ಈಗ 7 ಸಾವಿರ ಕೇಸುಗಳು ಆ ವಕೀಲರ ಬಳಿ ಬೇರೆ ಬೇರೆ ಹಂತಗಳಲ್ಲಿವೆ. ಈ ಇಬ್ಬರು ವಕೀಲರಿಗೆ ತಪ್ಪಿಸಿ ಬೇರೆಯವರಿಗೆ ಕೊಟ್ಟರೆ ಈ 7 ಸಾವಿರ ಕಕ್ಷಿದಾರರು ಹೊಸ ವಕೀಲರ ಜೊತೆ ಹೇಗೆ ಹೊಂದಿಕೊಳ್ಳಬೇಕಕು. ಇವರು ಹೊಂದಿಕೊಳ್ಳಬೇಕಾದರೆ ಇನ್ನು ಎಷ್ಟು ಕಾರಲ ಬೆಳೆಯಬೇಕು. ಮಾನ್ಯ ಮಂತ್ರಿಗಳು ಇದರ ಬಗ್ಗೆ ನಿರ್ಧಾರ ಮಾಡಬೇಕು. ನನ್ನದು ಮಾನ್ಯ ಮಂತ್ರಿಗಳು ತೆಗೆದುಕೊಂಡ ನಿರ್ಧಾರದ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ನಾನು ಹೇಳುವುದಿಷ್ಟೆ, 7 ಸಾವಿರ ಕೇಸುಗಳಲ್ಲೂ ಯಾವ ರೀತಿ ಅಭ್ಯಾಸ ಮಾಡಿ ಯಾವ ಮಟ್ಟಕ್ಕೆ ತಂದಿರುತ್ತಾರೆ ಗೊತ್ತಿರುವುದಿಲ್ಲ. ಆದ್ದರಿಂದ ಈ 7 ಸಾವಿರ ಕೇಸುಗಳು ಏನಿವೆ ಇವುಗಳನ್ನು ನೋಡಿಕೊಳ್ಳತಕ್ಕ ಇಬ್ಬರು ವಕೀಲರು ಏನಿದ್ದಾರೆ ಅವರಿಗೆ ಇದರಿಂದ ತಪ್ಪಿಸಬಾರದು. ತಾವು ತಪ್ಪಿಸಿದರೆ ನನ್ನ ಅಭಿಪ್ರಾಯದ ಪ್ರಕಾರ ಯಾವುದೋ ಪಿಸ್ಟೆಲೆ ಇದೆ, ಯಾವುದೋ ಒತ್ತಡ ಇದೆ ಎನ್ನುವ ಅಭಿಪ್ರಾಯಕ್ಕೆ ನಾನು ಬರಬೇಕಾಗುತ್ತದೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇದು 7 ಸಾವಿರ ಗೇಣಿದಾರರ ಸಮಸ್ಯೆ ಇದೆ. ಇವು ಬೇರೆ ಬೇರೆ ಹಂತಗಳಲ್ಲಿವೆ. ಆದ್ದರಿಂದ ತಾವು ಈ ರೀಟೈನರ್‌ಷಿಪ್ ಎಂದು ಏನು ಕೊಡುತ್ತೀರಿ, ಅದನ್ನು ಈ ವಕೀಲರಿಗೆ ಕೊಡುವುದು ಬೇಡ. ಈ ಕೇಸಸ್ ಅವರ ಕೈಯಲ್ಲಿ ಕೊಟ್ಟ ಮೇಲೆ ಗೇಣಿದಾರರು ಅವರ ಜೊತೆ ಹೊಂದಿಕೊಂಡಿರಬೇಕಾಗುತ್ತದೆ. ನಿಕಾಲೆಯಾದ ಕೇಸ್‌ಗೆ ಏನು ಸಂಭಾವನೆ ಸರ್ಕಾರ ನಿರ್ಧಾರ ಮಾಡಿತ್ತು ಅಷ್ಟು ಕೊಡಬಹುದು. ಮಾನ್ಯ ಮಂತ್ರಿಗಳು ಇದು ತೀರಾ ಸಣ್ಣ ವಿಚಾರ ಎಂದು ತಿಳಿದುಕೊಳ್ಳಬಾರದು. ಇವೊತ್ತು ಎಲ್ಲಾ ಶಾಸಕರೂ ಗೇಣಿದಾರರ ಪರವಾಗಿ ಇರುವುದರಿಂದ, ಎಲ್ಲರೂ ಇದರ ಬಗ್ಗೆ ಸಾಗರ್ ಅವರ ಮೇಲೆ ಒತ್ತಡ ತರಬೇಕಾಗಿದೆ. ಆ ರೀತಿ ಒತ್ತಡ ತಂದರೂ ಮಾಡುತ್ತೀರಾ ಎನ್ನುವ ಭರವಸೆ ಇಲ್ಲ. ತಮ್ಮಲ್ಲಿ ನೇರವಾಗಿ ಹೇಳಬೇಕು ಎಂದರೆ, ನಮ್ಮ ಜನ ಹೇಳುವುದು ಏನು, ನಾವು ಇವರನ್ನು ಆಯ್ಕೆ ಮಾಡಿದ್ದೇವೆ, ಇವರು ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ನಮ್ಮ ತೊಂದರೆಗಳನ್ನು ಹೇಳುತ್ತಾರೆ ಎಂದು ತಿಳಿದುಕೊಂಡಿರುತ್ತಾರೆ. ನಾವು ಮಂತ್ರಿಗಳ ಹತ್ತಿರ ಮಾತನಾಡಲಿಕ್ಕೆ ಪ್ರಯತ್ನ ಮಾಡಿದರೆ, ನಮ್ಮ ಹತ್ತಿರ ಮಾತನಾಡಲಿಕ್ಕೆ ಅವರಿಗೆ ಅವಕಾಶವೇ ಇರುವುದಿಲ್ಲ. ಇದನ್ನು ನನ್ನ ಕೈಯಿಂದ ಸಹಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ನಾನು ಸಾಗರ್ ಅವರ ಹತ್ತಿರ ಮಾತನಾಡಲಿಕ್ಕೆ ಟ್ರೈ ಮಾಡಿದ್ದೇನೆ. ನಾನು ಮುಖ್ಯವಾದ ವಿಚಾರ ಮಾತನಾಡಬೇಕಾಗಿದೆ, 5 ನಿಮಿಷ ಅವಕಾಶ ಕೊಟ್ಟು ಮಾತನಾಡಬೇಕು ಎಂದು ಕೇಳಿದ್ದೇನೆ. ಈ ಸದನದಲ್ಲಿ ಕುಳಿತು ಮಾತನಾಡಲಿಕ್ಕೆ ಪ್ರಯತ್ನ ಮಾಡಿದರೆ ಹೊರಗಡೆ ಮಾತನಾಡಲಿಕ್ಕೆ

---

* ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೇಳುತ್ತಾರೆ. ಹೊರಗಡೆ ಮಾತನಾಡಲಿಕ್ಕೆ ಪ್ರಯತ್ನ ಮಾಡಿದರೆ, ಇದು ಹೊರಗಡೆ ಮಾತನಾಡುವಂಥ ವಿಷಯವೇ ಎಂದು ಹೇಳುತ್ತಾರೆ. ನಾನು ಅವರ ಮನೆಗೂ ಹೋಗಲಿಕ್ಕೆ ಆಗುವುದಿಲ್ಲ. ಇದು ಗೇಣಿದಾರರ ವಿಚಾರ. ಈಗ ಇಬ್ಬರು ವಕೀಲರು 7 ಸಾವಿರ ಕೇಸುಗಳನ್ನು ನೋಡುತ್ತಿದ್ದಾರೆ.

ಉಪಾಧ್ಯಕ್ಷರು.—ಗೇಣಿದಾರರ ಹಿತರಕ್ಷಣೆ ಮಾಡಿ ಎಂದು ಒಂದೇ ಮಾತಿನಲ್ಲಿ ತಾವು ಹೇಳಬಹುದು.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನ ಮಾತಿನ ಬಗ್ಗೆ ಲಕ್ಷ್ಯ ಕೊಟ್ಟಿದ್ದರೆ ನಾನು ನಿಜವಾಗಿಯೂ ಕೂಡ ಈಗ 5 ನಿಮಿಷ ಮಾತನಾಡಲಿಕ್ಕೆ ಇಷ್ಟ ಇರಲಿಲ್ಲ. ನಾನು ಈಗ ಈ ಸದನದ ವೇದಿಕೆಯನ್ನು ಉಪಯೋಗಿಸಿಕೊಂಡು ಈ ವಿಚಾರವನ್ನು ಹೇಳುತ್ತಿದ್ದೇನೆ. ದಯಮಾಡಿ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. 7 ಸಾವಿರ ಕೇಸುಗಳ ಬಗ್ಗೆ ಕೊಟ್ಟಿರತಕ್ಕ ಇಬ್ಬರು ವಕೀಲರನ್ನು ಹಾಗೆ ಇಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ಸುಮಾರು 8 ಜನ ಮಾನ್ಯಸದಸ್ಯರು ನನ್ನ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಹಲವಾರು ರೀತಿಯಲ್ಲಿ ಟೀಕೆಗಳನ್ನು ಮಾಡಿ, ಕೆಲವು ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ.

ಮೊದಲನೆಯದಾಗಿ ಮಾಜಿ ಸಚಿವರಾದ ಮಾನ್ಯ ವೈ. ರಾಮಕೃಷ್ಣರವರು ಮಾತನಾಡುತ್ತಾ, ನೀವು ಗೃಹ ಖಾತೆಗೆ ಸಂಬಂಧಪಟ್ಟಂತೆ ಪರ್‌ಫಾರ್ಮೆನ್ಸ್ ಬಜೆಟನ್ನು ಮಾಡಿದ್ದೀರಿ, ಅದನ್ನು ಕಾನೂನು ಶಾಖೆಗೆ ಏತಕ್ಕೆ ಕೊಡಲಿಲ್ಲ ಎಂದು ಹೇಳಿದರು. ಇದಕ್ಕೆ ನಾನು ಈಗಾಗಲೇ ಅಂದರೆ ನಿನ್ನೆಯ ದಿವಸವೇ ಉತ್ತರವನ್ನು ಕೊಟ್ಟಿರುವುದರಿಂದ ಮತ್ತೆ ಅದನ್ನೇ ಹೇಳುವುದು ಬೇಡ. ಈ ಸಭೆಯು ಕೂತು ಕೆಲಸ ಮಾಡತಕ್ಕ ದಿನಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು, ಏಕೆಂದರೆ ಹಿಂದೆ ಈ ದಿನಗಳು ಕಡಿಮೆಯಾಗಿವೆ. ಈ ಸಭೆಯಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆಯೂ ಮುಕ್ತವಾದ ಮತ್ತು ಸಾಕಷ್ಟು ಸಮಯ ಸಿಕ್ಕತಕ್ಕ ಅವಕಾಶವನ್ನು ಉಂಟುಮಾಡತಕ್ಕ ಸನ್ನಿವೇಶ ಈ ಸಭೆಗೆ ಇರಬೇಕು. ಅವಸರವಸರವಾಗಿ ಮಾಡಿದರೆ ಏನೂ ಪ್ರಯೋಜನವಿಲ್ಲ ಎಂದು ಹೇಳಿದರು. ಇದಕ್ಕೆ ನಾನು ಒಂದು ಮಾತನ್ನು ಹೇಳುತ್ತೇನೆ. ಹಿಂದೆ ನಡೆದಿರತಕ್ಕ ದಿನಗಳಿಗಿಂತಲೂ ನಾವು ಏನೂ ಕಡಿಮೆ ದಿನಗಳನ್ನು ಇಡುವುದಿಲ್ಲ. ಇದರ ಬಗ್ಗೆ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕೂತು ಮಾತನಾಡೋಣವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಹಿಂದೆ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನರ್ಪಿಸಲು, ಆಯವ್ಯಯದ ಮಂಜೂರಾತಿಗೆ ಹಾಗೂ ಚಳಿಗಾಲದ ಅಧಿವೇಶನ ಎಂದು ಒಂದು ವರ್ಷದಲ್ಲಿ 3 ಸಾರಿ ಅಧಿವೇಶನವನ್ನು ಮಾಡಲಾಗುತ್ತಿತ್ತು. ಆದರೆ ಕಾರಣಾಂತರದಿಂದ ಬರುಬರುತ್ತಾ ವರ್ಷಕ್ಕೆ ಎರಡೇ ಸಾರಿ ಕೂತುಕೊಳ್ಳಬೇಕಾಗಿ ಬರುತ್ತಿದೆ. ನಾವು 3 ಸಾರಿ ಅಧಿವೇಶನವನ್ನು ನಡೆಸಿದರೆ ಹೆಚ್ಚಿನ ಕೆಲಸ ಮಾಡುವುದಕ್ಕೆ ಬಿಲ್ ವಗೈರೆಗಳನ್ನು ನಿಧಾನವಾಗಿ ಚರ್ಚೆಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಅರ್ಥದಲ್ಲಿ ನಾನು ಹೇಳಿರುವುದು.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಮನಸ್ಸಿನ ವ್ಯಾಪ್ತಿ, ಚಿಂತನೆ, ಯಾವ ಕಡೆಗೆ ಹೋಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಾವೂ ಕೂಡ ನಮ್ಮ ವಕೀಲರ ಗುಂಪಿನವರು. ನಮ್ಮ ಶಾಸಕಾಂಗವು ಕಾರ್ಯಾಂಗದಿಂದ ಪ್ರತ್ಯೇಕ ಆಗಬೇಕೆಂದು ಬಹಳ ದಿವಸಗಳಿಂದ ಒತ್ತಾಯ ಬರುತ್ತಿದೆ. ಆದರೆ ಈ ವಿಷಯವನ್ನು ಈ ಮನೆಯಲ್ಲಿ ಬಹಿರಂಗವಾಗಿ ಪ್ರಸ್ತಾಪ ಮಾಡುವುದು ಬೇಡವೆಂದು ಹಿಂದೆ ತೀರ್ಮಾನವಾಗಿತ್ತು. ಮಾಜಿ ಕಾನೂನು ಮಂತ್ರಿಗಳಿಬ್ಬರೂ ಇಲ್ಲೇ ಇದ್ದಾರೆ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡು ಈ ವರ್ಷ ಮೇ ತಿಂಗಳಲ್ಲಿ ಶಾಸಕಾಂಗ ಪ್ರತ್ಯೇಕವಾಗಬೇಕೆಂದು ಕ್ಯಾಬಿನೆಟ್ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಈ ವಿಚಾರದಲ್ಲಿ ನಾವು ಹಿಂದಕ್ಕೆ ಹೋಗತಕ್ಕ ಪ್ರಶ್ನೆಯೇ ಇಲ್ಲ. ಹಾಗಾದರೆ ನೀವು ಅಧಿಕಾರಕ್ಕೆ ಬಂದು 9 ತಿಂಗಳಾದರೂ ಇನ್ನೂ ಏತಕ್ಕೆ ಸುಮ್ಮನಿದ್ದೀರೆಂದು ಕೇಳುವುದಿಲ್ಲ. ಎವಿಡೆನ್ಸ್ ಆಕ್ಟ್ ರೂಲ್ 112 ರ ಪ್ರಕಾರ ಒಂದು ಮಗು ಹುಟ್ಟಬೇಕಾದರೂ 246 ದಿನಗಳು ಬೇಕು. ಈಗ್ಗೆ 35 ವರ್ಷಗಳಿಂದ ಆಗದೇ ಇದ್ದುದನ್ನು ನಾವು ಇದೇ ಮೇ ತಿಂಗಳಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಇನ್ನು ಈ ವಿಧಾನ ಮಂಡಲಕ್ಕೆ 20 ಕೋಟಿ ರೂ. ಖರ್ಚು ಮಾಡುತ್ತಿದ್ದೀರಿ ಎಂದು ಮಾನ್ಯ ಸದಸ್ಯರಾದ ರಂಗನಾಥ್‌ರವರು ಹೇಳಿದರು...

ಶ್ರೀ ಕೆ. ಹೆಚ್. ರಂಗನಾಥ್.—ನೀವು ಹೇಳಿದಿರಿ ಎಂದು ನಾನು ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಈ ಇಲಾಖೆಗೆ ಎಷ್ಟು ಹಣ ಬೇಕಾಗುತ್ತದೆಂಬ ಬಗ್ಗೆ ಒಂದು ಬೇಡಿಕೆ ಸಭೆಯ ಮುಂದಿದೆ. ಅದರ ಬಗ್ಗೆ ನಾನು ಈಗ ಮಾತನಾಡುವುದಿಲ್ಲ. ಅವರಿಗೆ ಸ್ವಾತಂತ್ರ್ಯ ಬೇಕು. ತಮ್ಮ ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ಅವರಿಗೆ ಸ್ವಾತಂತ್ರ್ಯ ಬೇಕೆಂದು ನಾವು ನಿರ್ಣಯವನ್ನು ತೆಗೆದುಕೊಂಡಿ

ದ್ದೇವೆ. ಇದಕ್ಕೆ ಸಂಬಂಧಪಟ್ಟ ವಿವರಗಳನ್ನೆಲ್ಲಾ ಯೋಚನೆ ಮಾಡಿ ಇದು ಪೂರ್ಣವಾಗಿ ಜಾರಿಗೆ ತರುವು ದಕ್ಕೆ ಪ್ರಯತ್ನ ಮಾಡುತ್ತೇವೆ.

Sri. K. H. Ranganath.—It has appeared in the Press under a very big caption "Legislature Secretariat made Independent" ಎಂದು ಹೇಳಿ ಮಾನ್ಯ ರಘುಪತಿಯವರ ಹೇಳಿಕೆ ಆಯಿತು.

"Announcing this major decision taken up at the Cabinet Meeting to-day, the Information Minister Mr. M. Raghupathy told newsmen that Legislature Secretariat should now come under a Board consisting of Speaker of the Assembly and Chairman of the Council and the Legislature Secretary. He said, the Secretariat would continue to get Rs. 20 crores annually for its administration."

ಇದನ್ನೇ ನಾನು ಹೇಳಿದ್ದು. 20 ಕೋಟಿ ರೂ. ಬಜೆಟ್‌ನಲ್ಲಿ ಬಂದಿದೆ ಎಂದು ಕೇಳಿದ್ದು.

ಶ್ರೀ ಎ. ಲಕ್ಷ್ಮೀಸಾಗರ್.—ಈ ವರ್ಷದಲ್ಲಿ ಎಷ್ಟು ಹಣ ಬೇಕಾಗುತ್ತದೆಂಬುದನ್ನು ಇದರಲ್ಲಿ ನಮೂದಿ ಸಿದ್ದೇವೆ. ಇದರ ಬಗ್ಗೆ ನಾನು ಉತ್ತರವನ್ನು ಕೊಡುವುದಕ್ಕೂ ಸಿದ್ಧವಾಗಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಇದು ಯಾರೋ ಹೇಳಿದ ಮಾತಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಈಗ ವಾದ ಬೇಡ. ಇವತ್ತು ಸಭೆಯ ಮುಂದೆ ಏನು ಬೇಡಿಕೆ ಇದೆ ಇದರ ಬಗ್ಗೆ ಚರ್ಚೆಯಾಗಬೇಕು. ಅವರು ಏನು ಹೇಳಿದರೋ, ಪತ್ರಿಕೆಯಲ್ಲಿ ಅದು ಏನು ವರದಿ ಗಿದೆಯೋ ಅದರ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರ ತೀರ್ಮಾನವನ್ನು ತೆಗೆದು ಕೊಡಿದೆ....

ಶ್ರೀ ಕೆ. ಹೆಚ್. ರಂಗನಾಥ್.—ಹಾಗಾದರೆ ಪತ್ರಿಕೆಗಳಲ್ಲಿ ಮಂತ್ರಿಗಳ ಹೇಳಿಕೆಗಳು ಬಂದರೆ ನೀವು ಯಾರೂ ನಂಬಬೇಡಿ ಎಂದು ನಾವು ಜನರಿಗೆ ಹೇಳೋಣವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಮಾತನಾಡುತ್ತಾ, ಈ ಮಸೂದೆಗಳನ್ನು ಕನ್ನಡದಲ್ಲೇ ತಯಾರು ಮಾಡಬೇಕೆಂದು ಹೇಳಿದ್ದಾರೆ. ನಾವೂ ಕೂಡ ಕನ್ನಡದಲ್ಲೇ ತಯಾರು ಮಾಡುತ್ತಿದ್ದೇವೆ. ನಾನು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಕೊಟ್ಟ ಹೇಳಿಕೆಯನ್ನು ತಾವು ಉದಾಹರಣೆಗೆ ಇಟ್ಟುಕೊಂಡು ಹೇಳಿದ್ದೀರೆಂದು ಕಾಣುತ್ತದೆ.

ಶ್ರೀ ವೈ. ರಾಮಕೃಷ್ಣ.—ತಾವು ಮಾಡುತ್ತಿದ್ದೀರಿ. ಇದು ಬಹಳ ಪ್ರಮುಖವಾದ ಮಸೂದೆ. ಇದು ಗ್ರಾಮೀಣ ಅಭಿವೃದ್ಧಿ. ಗ್ರಾಮಾಂತರ ಪ್ರದೇಶದ ಜನರ ಅಭಿವೃದ್ಧಿಗೆ ಸಂಬಂಧಪಟ್ಟಿದ್ದು. ಇಂಥ ಪ್ರಮುಖ ವಾದ ಮಸೂದೆಗಳನ್ನು ಕನ್ನಡಕ್ಕೆ ಅನುವಾದಮಾಡಿ ಕನ್ನಡದಲ್ಲೇ ಅಚ್ಚುಹಾಕಿಸಿ ಎಂದು ನಾನು ಹೇಳುತ್ತಿರು ವುದು.

ಶ್ರೀ ಕೆ. ಹೆಚ್. ರಂಗನಾಥ್.—ಮೊದಲು ಕನ್ನಡದಲ್ಲಿ ಬರೆದು ಅನಂತರ ಇಂಗ್ಲೀಷ್‌ಗೆ ಅನುವಾದ ಮಾಡಿಸಿ. ಈಗ ಮಾಡಿರುವುದು ತಪ್ಪು ಎಂದು ತಮಗೇ ಗೊತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನೂ ಕೂಡ ಅದನ್ನೇ ಹೇಳಿದ್ದೇನೆ. ಈಗ ಮಾಡಿದ್ದು ತಪ್ಪಾಗಿದೆ. ಆದ್ದ ರಿಂದಲೇ ಇದನ್ನು ಕನ್ನಡದಲ್ಲೂ ಮಾಡುತ್ತಿದ್ದೇವೆಂದು ಹೇಳಿದ್ದೇನೆ. ಯಾವ ಯಾವ ಕಾನೂನುಗಳನ್ನು ಇಂಗ್ಲೀಷ್‌ನಲ್ಲಿ ಮಾಡಿದೆ ಅದನ್ನೆಲ್ಲಾ ಕನ್ನಡಕ್ಕೆ ತರ್ಜುಮೆ ಮಾಡಿಸುತ್ತೇವೆಂದು ಹೇಳಿದ್ದೇನೆ. ಆದರೆ ಈ ಮಸೂದೆಯನ್ನು ಈ ಸಾರಿ ಮಾತ್ರ ಕನ್ನಡದಲ್ಲಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮುಂದಿನ ಸಾರಿ ಮಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸಚಿವರಿಗೆ ಇಂಗ್ಲೀಷ್ ಮತ್ತು ಸಂಸ್ಕೃತದಲ್ಲಿ ವ್ಯಾಮೋಹ ಜಾಸ್ತಿ ಎಂದು ಕಾಣುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮೋಹ ಇದ್ದಿದ್ದರೆ ಇನ್ನೂ ಏನೇನೋ ಆಗಿಬಿಡುತ್ತಿದ್ದ. ಮೋಹ ಇಲ್ಲದಿರು ವುದರಿಂದಲೇ ನಾನು ಇನ್ನೂ ಹೀಗೇ ಇದ್ದೇನೆ. ನಿಮಗೆ ಮೋಹ ಇರುವುದರಿಂದ ನೀವು ಹಾಗಿದ್ದೀರಿ. ವಿಷಯ ವನ್ನು ತಿಳಿದುಕೊಂಡು ಯಾವ ಯಾವ ಸಮಯದಲ್ಲಿ ಏನೇನು ಮಾಡಬೇಕೆಂಬುದನ್ನು ಶಾಸ್ತ್ರೀಯವಾಗಿ ಚರ್ಚೆ ಮಾಡಿ ಅಭ್ಯಾಸ ಮಾಡುತ್ತಿದ್ದೇನೆ. ನಾನು ಇನ್ನೂ ವಿದ್ಯಾರ್ಥಿಯಾಗಿಯೇ ಇದ್ದೇನೆ. ಈ ಮಸೂದೆಗಳನ್ನು ಸರಳವಾದ ಕನ್ನಡದಲ್ಲಿ ತಯಾರು ಮಾಡಬೇಕೆಂದು ಮಾನ್ಯ ಸದಸ್ಯರುಗಳು ಉದಾಹರಣೆಗಳನ್ನು ಕೊಟ್ಟಿ ದ್ದಾರೆ. ಏತಕ್ಕೆಂದರೆ ಒಂದು ವಿಚಾರ, ಉತ್ತರವನ್ನು ಕೊಡುವಾಗ ನನ್ನ ನಿಲುವನ್ನು ತಿಳಿಸಬಯಸುತ್ತೇನೆ. ಮನುಷ್ಯ ಸರಳವಾಗಿದ್ದರೆ ಮನುಷ್ಯನು ಮಾಡತಕ್ಕಂಥ ಕಾನೂನು ಕೂಡ ಸರಳವಾಗಿರುತ್ತದೆ. ಮನುಷ್ಯನ

ವ್ಯವಹಾರ ಸರಳವಾಗಿದ್ದರೆ ಮನುಷ್ಯನು ಮಾಡತಕ್ಕಂಥ ವ್ಯವಹಾರಕ್ಕೆ ಸಂಬಂಧಪಟ್ಟ ಕಾನೂನೂ ಕೂಡ ಸರಳವಾಗಿರುತ್ತದೆ." ಎರಡು ಸಾವಿರ ವರ್ಷಗಳ ಇತಿಹಾಸ ಇರತಕ್ಕಂತಹ ಕಾನೂನನ್ನು ಹುಡುಕಿ ನಾನು ಮಾಡಿರುವುದಿಲ್ಲ. ಇವರಲ್ಲಿ ಏನು ಇದೆ ಎಂದು ತಿಳಿದುಕೊಳ್ಳುವುದಕ್ಕಾಗಿ ಉಪಾಧ್ಯಾಯನಾಗಿ, ವಕೀಲನಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿರುತ್ತೇನೆ. ಮಾನ್ಯ ರಾಮಕೃಷ್ಣರವರು ಹೇಳಿದ ರೀತಿಯಲ್ಲಿ ಮಾಡಲಿಕ್ಕೆ ಆಗುತ್ತದೆಯೋ, ಇಲ್ಲವೋ ಎನ್ನುವ ಸಮಸ್ಯೆ ನನ್ನ ಮನಸ್ಸಿನಲ್ಲಿ ಇದೆ. ಇಷ್ಟು ಸರಳವಾಗಿ ಮಾಡಿದರೂ ಕೂಡ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕಾನೂನನ್ನು ಮಾಡಬೇಕಾಗಿರುವುದರಿಂದ, ವಿಷಯ ತೊಡಕಾಗಿರುವುದರಿಂದ ಸರಳವಾಗಿ ನೇರವಾಗಿ ಕಾನೂನನ್ನು ಮಾಡುವುದು ಕಷ್ಟಸಾಧ್ಯವಾಗಿರುತ್ತದೆ. ಆದರೆ ಒಂದು ಮಾತನ್ನು ತಮ್ಮ ಮುಖಾಂತರ ಮಾನ್ಯ ರಾಮಕೃಷ್ಣರವರಿಗೆ ಹೇಳಬಯಸುತ್ತೇನೆ. ಯಾವುದೇ ಕಾನೂನನ್ನು ಮಾಡುವುದಾದರೂ ಅದರ ಕರಡು ಪ್ರತಿಯನ್ನು ಮಾಡಿ ಅದರ ಪ್ರತಿಯನ್ನು ತಮ್ಮ ಕೈಗೆ ಕೊಡುತ್ತೇವೆ.

ಶ್ರೀ ವೈ. ರಾಮಕೃಷ್ಣ.—ಸರಳವಾಗಿ ಕನ್ನಡದಲ್ಲಿ ಮಸೂದೆಯನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪಾಸ್ ಮಾಡುವುದು ಅಷ್ಟೇ ಅಲ್ಲ, ಪ್ರಾಮಾಣಿಕವಾಗಿ ವಿಷಯಗಳನ್ನೂ, ಅಭಿಪ್ರಾಯಗಳನ್ನೂ ಕನ್ನಡದಲ್ಲಿ ಅಚ್ಚುಹಾಕಿಸಿ ಸರಳವಾಗಿರುವಂತೆ ಏತಕ್ಕೆ ಮಾಡಬಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ಅದರಲ್ಲಿ ವಾದವೇ ಇಲ್ಲ. ಇನ್ನು ರೇಡಿಯೋ ಪ್ರಚಾರವಾಗುವ ಹಾಗೆ ಸಭೆಯ ಕಾರ್ಯಕಲಾಪಗಳು ಟೆಲಿವಿಷನ್ ಮುಖಾಂತರವಾಗಿ ಬರಬೇಕೆಂದು ಹೇಳಿದ್ದೀರಿ. ನನಗೆ ಗೊತ್ತಿರತಕ್ಕಂಥ ವಿಷಯ, ನನ್ನ ತಿಳುವಳಿಕೆಯ ಪ್ರಕಾರ.... ಮಾನ್ಯ ಗಂಗಾಧರನ್‌ರವರು ಪ್ರಸ್ತಾಪ ಮಾಡಿದ್ದಾರೆ. ಹಿಂದಿನ ಸಭೆಯಲ್ಲೂ ಕೂಡ ಇದೇ ವಿಷಯದ ಮೇಲೆ ಚರ್ಚೆಯಲ್ಲಿ ಭಾಗವಹಿಸಿ ವಿಷಯ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಕೇಂದ್ರ ಸರ್ಕಾರ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಪಾರ್ಲಿಮೆಂಟಿನಲ್ಲಿಯೇ ನಡೆಯಲಿ, ನಮ್ಮಲ್ಲಿಯೇ ನಡೆಯಲಿ ನನಗೂ ಕೂಡ ಆಕಾಂಕ್ಷೆ ಇದೆ. ಪ್ರಜಾಪ್ರಭುತ್ವ ಇರತಕ್ಕಂತಹ ಯಾವ ದೇಶದಲ್ಲಿಯೂ ಕೂಡ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇಂಗ್ಲೆಂಡ್‌ನಲ್ಲಿ ಇದೆ ಎಂದರೆ ಅದು ನನಗೆ ಗೊತ್ತಿಲ್ಲ. ನಾನು ತಿಳಿದುಕೊಂಡ ಹಾಗೆ ಯಾರು ಭಾಷಣ ಮಾಡಿದ್ದಾರೆ ಅವರ ಡಿಬೇಟ್‌ನ್ನು ಪ್ರಚಾರ ಮಾಡುತ್ತಾರೆಯೇ ಹೊರತು ಅವರ ಮುಖಚರ್ಯೆಯನ್ನು ತೋರಿಸುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಸಭೆಯಲ್ಲಿ ಏನೇನು ನಡೆಯುತ್ತದೆ ಅದೆಲ್ಲ ಟೆಲಿವಿಷನ್ನಿನಲ್ಲಿ ಬಂದರೆ ನನ್ನ ಅಭ್ಯಂತರವೇನೂ ಇಲ್ಲ. ಜನತಾ ಶಾಸಕರು, ಜನತೆಯಿಂದ ಆರಿಸಿಬಂದ ಶಾಸಕರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಸಾಕ್ಷೀಭೂತವಾಗಿ ಚಿತ್ರ ಕಣ್ಣುಮುಂದೆ ಬಂದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಎಚ್. ಗಂಗಾಧರನ್.—ಅದರ ಬಗ್ಗೆ ಒಂದು ನಿರ್ಣಯವನ್ನು ಮಾಡಿ, ಕೇಂದ್ರವನ್ನು ಒತ್ತಾಯ ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಬಹುದು. ಅದಕ್ಕೆ ನನ್ನ ಅಭ್ಯಂತರವಿಲ್ಲ. ಈ ಮನೆಯ ಕಾರ್ಯಕಲಾಪಗಳು, ಡಿಬೇಟ್ಸ್ ಪ್ರಿಂಟಾಗಿ ಬರುವುದು ಏತಕ್ಕೆ ತಡವಾಯಿತು ಎಂದು ಮಾನ್ಯ ರಾಮಕೃಷ್ಣರವರು ಕೇಳಿದ್ದಾರೆ. ತಡವಾಗಿದೆ, ಜುಲೈ 1982 ರದ್ದು ಬಂದಿಲ್ಲ. ಪ್ರೆಸ್‌ನಲ್ಲಿ ಗಲಾಟೆಯಾಗಿದೆ ಎನ್ನುವ ಕಾರಣ ಕ್ಕೋಸ್ಕರವಾಗಿ ತಡವಾಗಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಲು ಇಷ್ಟಪಡುತ್ತೇನೆ.

ಇನ್ನು ಸಾರ್ವಜನಿಕ ಕುಂದುಕೊರತೆಗಳ ಬಗ್ಗೆ ಹೇಳುವುದಾದರೆ.

ಶ್ರೀ ಕೆ. ಎಚ್. ರಂಗನಾಥ್.—ಲೆಜಿಸ್ಲೇಚರ್‌ಗೆ ಒಂದು ಪ್ರತ್ಯೇಕವಾದ ಪ್ರೆಸ್‌ನ್ನು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಬಹುದು. ಮಹತ್ವ ಬಂದಲ್ಲಿ ಪ್ರಸ್ತಾಪ ಮಾಡೋಣ. ಮತ್ತೊಂದು ಸಲಹೆ, ಹಿಂದೆ ಹೇಳಿದಂತೆ ನನ್ನ ಆಫೀಸಿನಲ್ಲಿ ದಿನನಿತ್ಯ ಗಮನಿಸಿದ್ದು, ಕುಂದುಕೊರತೆ ಏನು ಇದೆ ಅದರ ಬಗೆ ಮಾತನಾಡಬೇಕೆಂದರೆ ಇದು ಒಂದು ಬೃಹತ್ ಪ್ರಮಾಣದ ಒಂದು ಇಲಾಖೆ. ಇದು ಸರ್ಕಾರದ ಎಲ್ಲಿ ಇಲಾಖೆಗಳನ್ನೂ ಕೂಡ ಆವರಿಸಿಕೊಂಡರತಕ್ಕಂಥ, ಮಹಾ ಘೋರಣೆಗಳನ್ನು ಕೂಡಿಕೊಂಡಿರತಕ್ಕಂಥ, ಮನಸ್ಸಿನ ಅಂತರಾಳದಿಂದ ಬರತಕ್ಕಂಥ ನೋವುಗಳು, ಕುಂದುಕೊರತೆಗಳು ಇಲ್ಲಿ ಸಿಗುತ್ತವೆ. ಇದನ್ನು ನಮ್ಮ ಸರ್ಕಾರದವರು ಏನು ಮಾಡಿದ್ದಾರೆ ಎಂದರೆ ಅದಕ್ಕಾಗಿಯೇ ಒಂದು ಪ್ರತ್ಯೇಕವಾದ ಇಲಾಖೆಯನ್ನು ಮಾಡಿ ಅದಕ್ಕೆ ಒಬ್ಬ ಮಂತ್ರಿ ಎಂದು ಹೇಳಿಬಿಟ್ಟು ನನ್ನನ್ನು ಕೂರಿಸಿದ್ದಾರೆ. ಇದರ ಬಗ್ಗೆ ನಾನು ಸ್ವಲ್ಪ ದಿವಸ ಕೆಲಸ ಮಾಡಿ ಯಾವ ರೀತಿಯಲ್ಲಿ ಕುಂದುಕೊರತೆಗಳನ್ನು ನಿವಾರಣೆ ಮಾಡಬೇಕೆನ್ನುವ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ತಿಳಿದುಕೊಳ್ಳಬೇಕೆಂದು ಪ್ರಯತ್ನ ಮರಾಡಿ ಹರಿಯಾಣ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶಗಳಿಂದ ಸಾಹಿತ್ಯಗಳನ್ನು ತರಿಸಿ ಅದರ ಸಹಾಯವನ್ನು ಕೂಡ ತೆಗೆದುಕೊಂಡಿರುತ್ತೇವೆ. ಆದರೆ ಇದನ್ನು ವಿಚಾರ ಮಾಡತಕ್ಕಂಥ ಒಂದು ಇಲಾಖೆಯೇ ಆದಮೇಲೆ ಇದಕ್ಕೆ ಸರಿಯಾದ ರೀತಿಯಲ್ಲಿ ಶಾಸ್ತ್ರೋಕ್ತವಾಗಿ ಆಡಳಿತಾತ್ಮಕ ಚೌಕಟ್ಟಿನಲ್ಲಿ ಬರತಕ್ಕಂಥ ರೀತಿಯಲ್ಲಿ ಕುಂದುಕೊರತೆಗಳನ್ನು ನಿವಾರಿಸಲು ಜವಾಬ್ದಾರಿಯಿಂದ

ಸರ್ಕಾರ ಒಂದು ಆಜ್ಞೆಯನ್ನು 1-7-1983 ರಂದು ಹೊರಡಿಸಲಾಯಿತು. ಜಿಲ್ಲಾಮಟ್ಟದಲ್ಲಿ ಅಸಿಸ್ಟೆಂಟ್ ಕಮಿಷನರ್, ಸಬ್‌ಡಿವಿಜನ್ ಮಟ್ಟದಲ್ಲಿ, ಇದಕ್ಕೆ ಶಾಸ್ತ್ರೀಯವಾಗಿ, ಕ್ರಮಬದ್ಧವಾಗಿ...

ಶ್ರೀ ಕೆ. ಹೆಚ್. ರಂಗನಾಥ್.—ಇದಕ್ಕಾಗಿಯೇ ಇಲಾಖೆಯ ಅವಶ್ಯಕತೆ ಇದೆ ಎಂದು ತಾವು ಸಮರ್ಥನೆ ಮಾಡುತ್ತಿದ್ದೀರಿ. ಇದಕ್ಕಾಗಿಯೇ ಬೇರೆ ಬೇರೆ ಖಾತೆಗಳಿವೆ. ಮಂತ್ರಿಗಳು ಇದ್ದಾರೆ, ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ. ಏನೇನು ತೊಂದರೆಗಳಿವೆ ಅದನ್ನು ನಿವಾರಣೆ ಮಾಡುವ ಸಲುವಾಗಿ ಇಲಾಖೆಯವರು ಇದ್ದಾರೆ. ಅದನ್ನು ಮಾಡುವುದು ಅವರ ಕರ್ತವ್ಯವಾಗಿರುತ್ತದೆ. ಗ್ರಿವೆನ್ಸ್‌ಸ್‌ಗೆ ಒಂದು ಇಲಾಖೆ., ಒಬ್ಬ ಮಂತ್ರಿ ಎಂದರೆ ಯಾವ ದೇಶದಲ್ಲಿ ಇದೆ. ಮಂತ್ರಿಗಳಾದರೂ ಇರುವುದು ಏತಕ್ಕೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ರಂಗನಾಥ್‌ರವರ ಚಿಂತನೆಯನ್ನು ಅವರಿಗೇ ಬಿಟ್ಟಿದ್ದೇನೆ. ಈ ಖಾತೆಯನ್ನು ಮಂತ್ರಿಗಳ ವಶಕ್ಕೆ ಕೊಟ್ಟು ಅದನ್ನು ಪ್ರತ್ಯೇಕವಾಗಿ ನಡೆಸತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಇಲ್ಲದೇ ಹೋದರೂ ಹಿಂದಿನ ಸರ್ಕಾರ ಕೂಡ ಇದಕ್ಕೆ ಒಂದು ವ್ಯವಸ್ಥೆಯನ್ನು ಆಡಳಿತಾತ್ಮಕ ದೃಷ್ಟಿಯಿಂದ ಅದನ್ನೆಲ್ಲಾ ಮಾಡಿತ್ತು ಎನ್ನುವುದನ್ನು ನೆನಪಿಗೆ ತಂದುಕೊಡುವುದಕ್ಕೆ ಇಷ್ಟಪಡುತ್ತೇನೆ. ರಾಜಾರೋಷವಾಗಿ ಬರತಕ್ಕಂಥ ದೂರುಗಳನ್ನು ಕ್ರಮವಾಗಿ ಆಯಾ ಹಂತದಲ್ಲಿಯೇ ನಿಷ್ಕರ್ಷೆಮಾಡಿ ಕಾಲಮಿತಿಯೊಳಗೆ ಉತ್ತರವನ್ನು ಕೊಡಬೇಕೆಂದು ಸರ್ಕಾರ ಆಜ್ಞೆಯನ್ನು ಕೂಡ ಹೊರಡಿಸಲಾಗಿದೆ. ಮತ್ತು ಆಯಾ ಅಧಿಕಾರಿಗಳು ಆಯಾ ಮಟ್ಟದಲ್ಲಿಯೇ ಕುಂದುಕೊರತೆಗಳ ಬಗ್ಗೆ ಭೇಟಿಮಾಡಿ ಒಂದುತಿಂಗಳ ಒಳಗೆ ತೀರ್ಮಾನವನ್ನು ಕೊಡಬೇಕೆಂದು ಆಜ್ಞೆಯನ್ನೂಕೂಡ ಹೊರಡಿಸಿದ್ದೇವೆ. ಮಾನ್ಯ ಸದಸ್ಯರು ತಾತ್ವಿಕವಾದ ಆಕ್ಷೇಪಣೆಯನ್ನು ಎತ್ತಿದ್ದಾರೆ. ಅದಕ್ಕೆ ಹೇಳುವುದಾದರೆ ಸರ್ಕಾರ ಮತ್ತು ಬೇರೆ ಬೇರೆ ಮಟ್ಟದ ಅಧಿಕಾರಿಗಳು ಕುಂದು ಕೊರತೆಗಳನ್ನು ನಿವಾರಣೆ ಮಾಡತಕ್ಕಂಥ ಅಧಿಕಾರಿಗಳು ಇರುವಾಗ, ಜವಾಬ್ದಾರಿ ಅವರಿಗೆ ಇರುವಾಗ ಪ್ರತ್ಯೇಕವಾದ ಇಲಾಖೆ ಏತಕ್ಕೆ ಬೇಕೆಂದು ಕೇಳಿದ್ದಾರೆ. ಇದಕ್ಕೆ ನನ್ನ ಉತ್ತರವಾದರೂ ಇಷ್ಟೆ, ಇಲ್ಲಿಯವರೆಗೆ ನಮಗೆ ತಿಂಗಳಿಗೆ ಸರಾಸರಿ 7 ಸಾವಿರ ಅರ್ಜಿಗಳು ಬರುತ್ತಿವೆ. ಇವುಗಳ ಬಗ್ಗೆ ಕ್ರಮ ತೆಗೆದುಕೊಳ್ಳ ಬೇಕೆಂದು ನಾವು ಆಯಾ ಇಲಾಖೆಗಳಿಗೆ ಕಳುಹಿಸಿಕೊಡುತ್ತೇವೆ. ಅನೇಕ ಸಂದರ್ಭಗಳಲ್ಲಿ ನಮಗೆ ಬರತಕ್ಕಂಥ ದೂರುಗಳು ಮತ್ತು ಅಹವಾಲುಗಳು ಬಗ್ಗೆ ನೇರವಾಗಿ ಸಹಾಯ ಮಾಡಿದಂಥ ಸನ್ನಿವೇಶ ಮತ್ತು ಉದಾಹರಣೆಗಳಿವೆ. ಆದ್ದರಿಂದ ಇದರಿಂದ ಏನೂ ಪ್ರಯೋಜನ ಇಲ್ಲ ಎಂದು ಅಲ್ಲ. ಆಡಳಿತಾತ್ಮಕವಾಗಿ ಆಯಾ ಹಂತದಲ್ಲಿಯೇ ತೀರ್ಮಾನ ತೆಗೆದುಕೊಳ್ಳಬೇಕಾಗಿದ್ದರೂ ಸಹ ಈ ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಮುಂದೆ ಇದು ಸೂಕ್ತವಾಗಿ ಕಾಣದಿದ್ದರೆ, ಈ ಪದ್ಧತಿಯನ್ನು ಬಿಟ್ಟುಬಿಡುವುದಕ್ಕೆ ಏನೂ ಕಷ್ಟವಾಗುವುದಿಲ್ಲ. ಈ ಹಿಂದಿನ ಒಂದು ಅನುಭವದಿಂದ ಹೇಳಬೇಕಾದರೆ ದೂರುಗಳು ಹಳ್ಳಿಯಿಂದ ಬೆಂಗಳೂರಿನ ವಿಧಾನಸೌಧದವರೆಗೆ ಅಂದರೆ ಮಂತ್ರಿಗಳಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಬಂದೇ ಬರುತ್ತವೆ. ಈ ರೀತಿ ಬಂದಂಥ ದೂರುಗಳನ್ನು ಪ್ರತ್ಯೇಕವಾಗಿ ನೋಡಲು ಅವಕಾಶ ಇಲ್ಲದಿರುವುದರಿಂದ ಇಂತಹ ದೂರುಗಳನ್ನು ಹೇಗೆ ತೀರ್ಮಾನ ಮಾಡುವುದು ? ಇವೊತ್ತು ಬೆಳಿಗ್ಗೆ ಮದುವೆಯಾಗಬೇಕಾಗಿದೆ ಹಣದ ಸಹಾಯ ಮಾಡಿ ಎಂದು ಒಬ್ಬರು ಬಂದಿದ್ದರು ; ನಾನು ಹಣ ಎಲ್ಲಿಂದ ತರಲಿ ?

ಶ್ರೀ ಕೆ. ಹೆಚ್. ರಂಗನಾಥ್.—ಯಾರನ್ನು ಮದುವೆಯಾಗಬೇಕೆಂದು ಬಂದಿದ್ದರು ?

ಉಪಾಧ್ಯಕ್ಷರು.—ಬಂದಿದ್ದವರು ಯಾರು ಎಂದು ಕೇಳಿ.

ಶ್ರೀ ಕೆ. ಹೆಚ್. ರಂಗನಾಥ್.—ಅವರು ಉತ್ತರ ಕೊಟ್ಟ ಮೇಲೆ ಮತ್ತೆ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ. ನನ್ನನ್ನು ಮದುವೆಯಾಗುವಂತಹ ದಡ್ಡರು ಯಾರೂ ಇಲ್ಲ. ಆದರೆ ಮಾನ್ಯ ರಂಗನಾಥ್ ಅವರು ಬೇಕೆಂದು ಕೇಳಿ ಇಲ್ಲಿಯವರೆಗೆ ನನ್ನ ಹತ್ತಿರ ಯಾರೂ ಬಂದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ತಮ್ಮ ಹತ್ತಿರ ಬರುವುದಕ್ಕೆ ನಾನು ಅವಕಾಶ ಕೊಟ್ಟಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಬಹಿರಂಗವಾಗಿ ಇದನ್ನೆಲ್ಲಾ ಹೇಳಿದರೆ ಅವರಿಗಿರುವಂತಹ ಅಲ್ಪಸ್ವಲ್ಪ ಅವಕಾಶವೂ ತಪ್ಪಿಹೋಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರಿಗೆ ಬೇರೆ ರೀತಿಯಿಂದ ಅವಕಾಶವಿರುವುದು ನನಗೆ ಗೊತ್ತಿಲ್ಲ. ಈ ಹೊಸ ಪದ್ಧತಿಯಿಂದ ನಮಗೆ ಬಂದಂಥ ಅನುಭವ ಹೇಳಬೇಕೆಂದರೆ ಈಗಲೇ ಸಾಧ್ಯವಿಲ್ಲ. ಏಕೆಂದರೆ ನಮಗೆ ಈ ಬಗ್ಗೆ ತಹಶೀಲ್ದಾರರ ಮಟ್ಟದಿಂದ ಸಬ್-ಡಿವಿಜನ್ ಆಫೀಸ್‌ಗಳಿಂದ, ಡಿ.ಸಿ. ಅವರುಗಳಿಂದ ವರದಿಗಳು ಬಂದಮೇಲೆ ಯಾವ ರೀತಿ ಈ ದೂರುಗಳ ಕೆಲಸಗಳು ನಡೆಯುತ್ತಿವೆ ಎಂಬ ಬಗ್ಗೆ ಮಾಹಿತಿ ಸಿಗುತ್ತದೆ, ಇದು ಅಖಂಡವಾಗಿದೆ. ಈ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಬಂದಂಥ ದೂರುಗಳನ್ನು ಸಹಾನುಭೂತಿಯಿಂದ ಗ್ರಹಿಸಬೇಕಾಗುತ್ತದೆ. ಪ್ರಜೆಗಳಲ್ಲಿ ನಾನಾ ರೀತಿಯ ದುಃಖದುಮ್ಮಾನಗಳು ಸಂಕಟಗಳು ಹಾಗೂ ಕುಂದುಕೊರತೆಗಳು ಇರುತ್ತವೆ, ಇವುಗಳನ್ನೆಲ್ಲಾ ಸಹಾನುಭೂತಿಯಿಂದ ಕೇಳುವುದಕ್ಕಾಗದರೂ ಒಬ್ಬರು ಮಂತ್ರಿಗಳು ಇರಬೇಕೇ ಅಥವಾ ಬೇಡವೇ ?

ಶ್ರೀ ಜೆ. ಡಿ. ಸೋಮಪ್ಪ.—ಅಂದರೆ ಬೇರೆ ಮಂತ್ರಿಗಳು ಸಹಾನುಭೂತಿಯಿಂದ ಕೇಳುತ್ತಿಲ್ಲವೆಂದು ಅರ್ಥವೇ ?

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಅಹವಾಲುಗಳನ್ನು ಕೇಳಲು ನಾನು ತಮ್ಮ ಕ್ಷೇತ್ರಕ್ಕೆ ಬರುತ್ತೇನೆ. ಎಲ್ಲರ ಕುಂದುಕೊರತೆಗಳನ್ನು ಕೇಳಲು ನಾನಾ ಇಲಾಖೆಗಳು ಇರಬಹುದು. ಆದರೆ ಒಬ್ಬ ಮನುಷ್ಯನಿಗೆ ಸಂತೋಷವಾದಾಗ ಅದನ್ನು ತನ್ನ ಸ್ನೇಹಿತರ ಬಳಿ ಹೋಗಿ ಹೇಳಿಕೊಳ್ಳುವುದಕ್ಕೆ ಯಾವರೀತಿ ಪ್ರಯತ್ನ ಮಾಡುತ್ತಾನೋ ಅದೇ ರೀತಿ ಒಬ್ಬ ವಿದ್ಯಾರ್ಥಿ ಪರೀಕ್ಷೆಯಲ್ಲಿ ಫೇಲ್ ಆದಾಗ ಫೇಲಾದ ಇನ್ನೊಬ್ಬ ವಿದ್ಯಾರ್ಥಿ ಹತ್ತಿರವೇ ಹೋಗಿ ತನ್ನ ಸಂಕಟವನ್ನು ಹೇಳಿಕೊಳ್ಳುತ್ತಾನೆ. ಅದೇ ರೀತಿಯಲ್ಲಿ ಸಂಕಟದಲ್ಲಿರುವವರಿಗೆ ಕೂಡಲೇ ಏನೂ ಸಹಾಯ ಮಾಡುವುದಕ್ಕಾಗದಿದ್ದರೂ ಸಹ, ಏನಪ್ಪ, ತೊಂದರೆಯಲ್ಲಿದ್ದೀಯಾ, ದೇವರು ನಿನಗೆ ಒಳ್ಳೆಯದನ್ನು ಮಾಡಲಿ ಎಂದು ಹೇಳುವಂಥ ಒಬ್ಬ ಮಂತ್ರಿ ಇರಬೇಡವೇ ? ಈಗಿನ ಸರ್ಕಾರದಲ್ಲಿ ಸಂಕಟದಲ್ಲಿರುವವರನ್ನು ಸಮಾಧಾನ ಮಾಡತಕ್ಕಂಥ ಒಂದು ಚಿಂತನೆ ನಡೆದಿದೆ. ಮನುಷ್ಯನ ಅಂತರಾಳದಿಂದ ಬರತಕ್ಕಂಥ ನೋವುಗಳಿಗೆ ನೂರಾರು ಕಾರಣಗಳಿರುತ್ತವೆ.

ಶ್ರೀ ವೈ. ರಾಮಕೃಷ್ಣ.—ಇವರನ್ನು ಕರುಣಾಸಾಗರ ಎಂದು ಕರೆಯಬಹುದು. ಏಕೆಂದರೆ, ಗಾಣಗಿತ್ತಿ ಅಯ್ಯೋ ಎಂದರೆ ನೆತ್ತಿ ತಣ್ಣಗಾಗುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಒಂದು ಪರಿಣಾಮ ಮತ್ತು ಇದರ ಒಂದು ಅನುಕೂಲತೆ...

ಶ್ರೀ ಹನುಮಂತರಾವ್ ದೇಸಾಯಿ.—ನಾನು ಈ ಮನೆಗೆ ಹೊಸಬನಿದ್ದೇನೆ. ಈ ಸದನ ಇಲ್ಲಿಯವರೆಗೆ ಮೂರು ಸಲ ಸೇರಿದೆ. ನಾನು ಇಲ್ಲಿ ಪ್ರತಿದಿನವೂ ಕೇಳುತ್ತಿರುವುದೇನೆಂದರೆ, ಮಾನ್ಯ ಲಕ್ಷ್ಮೀಸಾಗರ್ ಅವರು ಬ್ರಹ್ಮಚಾರಿ, ಶ್ರೀ ರಘುಪತಿ ಅವರು ಬ್ರಹ್ಮಚಾರಿ, ಶ್ರೀ ರಾಂದೇವ್ ಅವರು ಬ್ರಹ್ಮಚಾರಿ ಆಗಿರುವುದರಿಂದ ಕೆಲವರು ಇದನ್ನೇ ಒಂದು ದೊಡ್ಡ ವಿಷಯವನ್ನಾಗಿ ಮಾಡಿದ್ದಾರೆ. ಆದ್ದರಿಂದ ಇವರುಗಳು ಆದಷ್ಟು ಜಾಗ್ರತೆ ಮದುವೆ ಮಾಡಿಕೊಳ್ಳಬೇಕೆಂದು "ತಮ್ಮ ಮೂಲಕ ಸೂಚಿಸುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ಬಗ್ಗೆ ತಾವು ಅರ್ಜಿ ಹಾಕಿ. ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರೊಬ್ಬರ ಉದ್ದೇಶವೂ ಸಫಲವಾಗುವುದಿಲ್ಲ. ಈ ಕುಂದು ಕೊರತೆಗಳನ್ನು ನೋಡಿಕೊಳ್ಳಲು ಆಗುವಂತಹ ಖರ್ಚಿಗೆ ಹಣದ ವ್ಯವಸ್ಥೆ D.P.A. R. Head of Account 252—Secretatiat………ನಿಂದ ಆಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಪ್ರತ್ಯೇಕ ಇಲಾಖೆ ಇದಕ್ಕಾಗಿಯೇ ಇದೆ. ಇವರ ಅಧೀನ ಕಛೇರಿಗಳು ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಇವೆ. ಮತ್ತು ಇದಕ್ಕಾಗಿಯೇ ಒಂದು ಪ್ರತ್ಯೇಕ ಡೈರೆಕ್ಟರೇಟ್ ಇರುತ್ತದೆಂದು ಹೇಳುವಾಗ ಇದಕ್ಕೆ ಒಂದು ಸೆಪರೇಟ್ ಬಡ್ಜೆಟ್-ಹೆಡ್ ಇರಬೇಕಾಗುತ್ತದೆಯಲ್ಲವೇ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ಯಾವ ರೀತಿ ಕೆಲಸ ಮಾಡಬೇಕೆಂಬುದಕ್ಕೆ ಸರ್ಕಾರದ ಆಜ್ಞೆಯೇ ಇದೆ. ಇದರ ಪ್ರಕಾರ ಈಗ ಕೆಲಸ ನಡೆಯುತ್ತಿದೆ.

ಇನ್ನು ಕಾಮನ್‌ವೆಲ್ತ್ ಅಸೋಸಿಯೇಷನ್ ಕಾರ್ಯಚಟುವಟಿಕೆಗಳನ್ನು ತಿಳಿದುಕೊಳ್ಳಲು ಹೊರದೇಶಗಳಿಗೆ ಹೋಗಿ ಬಂದು ನನ್ನ ಒಂದು ತಿಳುವಳಿಕೆಯ ಮಟ್ಟವನ್ನು ಮತ್ತು ವೈಶಾಲ್ಯತೆಯನ್ನು ಹೆಚ್ಚು ಮಾಡಿಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದಾರೆ. ಈ ಬಗ್ಗೆ ಅವಶ್ಯಕತೆ ಬಂದರೆ ನೋಡೋಣ ಎಂದು ಹೇಳುತ್ತೇನೆ.

ಇನ್ನು ನಮ್ಮಲ್ಲಿ ಲೀಗಲ್ ಜಸ್ಟೀಸ್ ಆಗಿದೆ, ಆದರೆ ಸೋಷಿಯಲ್ ಜಸ್ಟೀಸ್ ಕಡಿಮೆ ಆಗಿದೆ ಎಂದು ಹೇಳಿದ್ದಾರೆ. ಆದರೆ ಲೀಗಲ್ ಜಸ್ಟೀಸ್‌ನಲ್ಲಿಯೇ ಸೋಷಿಯಲ್ ಜಸ್ಟೀಸ್ ಸಹ ಸೇರಿಕೊಂಡಿದೆ. ಆದರೂ ಸಹ ಕಾನೂನು ಪರಿಪಾಲನೆಯಲ್ಲಿ ಈ ತರಹದ ಶಂಕೆ ಬಂದರೆ...

SRI. Y. RAMAKRISHNA.—Justice is the mother and law is the child. According to the present—day system, dispensation of justice according to law will deliver only legal justice but not social justice. I am prepared to justify it once again.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಆ ತರಹ ಅನಿಸುವುದಿಲ್ಲ. ಆಮೇಲೆ ಕೋಡಿಫಿಕೇಷನ್ ವಿಂಗ್ ಕೆಲಸ ಮಾಡಲು ವ್ಯವಸ್ಥೆ ಮಾಡಿದ್ದೇವೆ. ಇದರ ಕೆಲಸ ನಡೆಯುತ್ತಿದೆ ಎಂದು ಹೇಳುತ್ತೇನೆ. opinions by the Law Department………ಬಗ್ಗೆ ಹೇಳಿದ್ದಾರೆ. The opinions are being codified and printed. They will be distributed to all the departments for guidance. ಆಮೇಲೆ separate Karnataka Legal Service ಮಾಡಿ ಎಂದು ಹೇಳಿದ್ದಾರೆ. ಇದರ ಬಗ್ಗೆಯೂ ತೀವ್ರವಾದಂಥ ವಿಚಾರ ನಡೆದಿದೆ.

ಇನ್ನು ಕೋರ್ಟುಗಳಲ್ಲಿ ಇತ್ಯರ್ಥವಾಗದಿರುವಂತಹ ಪ್ರಕರಣಗಳು ಜಾಸ್ತಿ ಇವೆ., ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿ ಈ ಕೇಸ್‌ಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು

ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನು ಯಾರಿಗೆ ತಲುಪಿಸಬೇಕೋ ಅವರಿಗೆ ತಲುಪಿಸುತ್ತೇನೆಂದು, ಈ ಸಮಯದಲ್ಲಿ ಹೇಳುತ್ತೇನೆ. ಇನ್ನು ಹೆಚ್.ಆರ್.ಸಿ. ಕೇಸ್ ಬಗ್ಗೆ ಹೇಳಿದ್ದಾರೆ. They are pending in H.R.C. Court. ಎಂದು ಹೇಳಿದ್ದಾರೆ. But they are not pending in H.R.C. Court. They are all pending in Civil Courts. ಈ ಹಿಂದೆ ಈ ಕಾನೂನನ್ನು ಪರಿಷ್ಕಾರ ಮಾಡಬೇಕೆಂದು ಮತ್ತು ಇದಕ್ಕೆ ಕೆಲವೊಂದು ತಿದ್ದುಪಡಿಗಳನ್ನು ಮಾಡಬೇಕೆಂದು ಸಲಹೆಗಳು ಬಂದಾಗ ಇದನ್ನೆಲ್ಲಾ ಸಮಗ್ರವಾಗಿ ನೋಡಿ ಒಂದು ವರದಿ ಕೊಡುವಂತೆ ಪ್ರಮೀಳಾ ಕಮಿಟಿ ಎಂದು ಮಾಡಲಾಗಿತ್ತು. ಆ ಕಮಿಟಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ವರದಿಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ವಿ. ಎಲ್. ಪಾಟೀಲ್ ಅವರಿಗೆ ಹೇಳಿದ್ದೇವೆ. ಅವರು ಆಗಲಿ ಎಂದು ಹೇಳಿದ್ದಾರೆ. ಈಗಿರುವಂತಹ ಲೋಪದೋಷಗಳನ್ನು ತಿದ್ದಲು ಈ ಕಾನೂನಿಗೆ ಸಾಕಷ್ಟು ತಿದ್ದುಪಡಿಗಳಾಗಬೇಕೆಂದು ಈ ಕಮಿಟಿಯವರು ಸಲಹೆ ಮಾಡಿದ್ದಾರೆ. Draft Act is before the Government and it is with my friend Sri. V. L. Patil.

ಆಮೇಲೆ ಕೋರ್ಟುಗಳನ್ನು ಜಾಸ್ತಿ ಮಾಡಬೇಕೆಂದು ಈ ಹಿಂದಿನ ಸರ್ಕಾರ ಮಾಡಿದಂಥ ನಿರ್ಣಯವನ್ನು ಬದಿಗೊತ್ತಿದ್ದೀರಿ ಎಂದು ಹೇಳಿದ್ದಾರೆ. ಈಗ ಹೊಸದಾಗಿ 37 ಕೋರ್ಟುಗಳನ್ನು ಮಾಡಬೇಕಾಗಿದೆ. ಸರ್ಕಾರದ ಶಿಫಾರಸ್ಸನ್ನು ಹೈಕೋರ್ಟಿನವರು ಒಪ್ಪಿಕೊಂಡಮೇಲೆ ನಾವು ಮುಂದುವರೆಯಬೇಕಾಗುತ್ತದೆ. ಈ ವರ್ಷ 7–8 ಕೋರ್ಟುಗಳನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಹಣದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಕೋರ್ಟುಗಳನ್ನು ಸ್ಥಾಪನೆ ಮಾಡಬೇಕೆಂದಿದ್ದೇವೆ. ಆದಷ್ಟು ಜನರಿಗೆ ಹತ್ತಿರವಾದಂಥ ಸ್ಥಳದಲ್ಲಿ ಕೋರ್ಟುಗಳಿರಬೇಕೆಂಬ ತತ್ವವನ್ನು ನಾವು ಕೈಬಿಟ್ಟಿಲ್ಲವೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲೆಲ್ಲಿ ನಿಧಾನವಾಗಿದೆ ಏತಕ್ಕೆ ಎನ್ನುವುದನ್ನು ನಿಮಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಲಿಟಿಗೇಷನ್ ಮೇಲೆ ಒಂದು ಉಸ್ತುವಾರಿಯನ್ನು ಇಟ್ಟುಕೊಳ್ಳುತ್ತೇವೆಂದು ಹೇಳಿದ್ದೇನೆ. ಇದರ ಬಗ್ಗೆ ವಿವರವಾಗಿ ಆಮೇಲೆ ಹೇಳುತ್ತೇನೆ. ಎಕ್ಸಿಕ್ಯೂಷನ್ ಕೇಸಸ್ ಲ್ಯಾಂಡ್ ರಿಫಾರ್ಮ್ಸ್ ಕೇಸಸ್ ಏನು ಮಾಡಬೇಕು ಅದರ ಬಗ್ಗೆ ಕೂಡ ಕರ್ನಾಟಕ ರಾಜ್ಯದ ಮುಖ್ಯ ನ್ಯಾಯಾಧೀಶರ ಜೊತೆ ಪ್ರಸ್ತಾಪಮಾಡಿ ತಿಳಿಸಿದ್ದೇವೆ. ಅದಕ್ಕೆ ಒಂದು ವ್ಯವಸ್ಥೆ ಮಾಡಬೇಕೆಂದು ಅದರ ಬಗ್ಗೆ ಕೂಡ ಚಿಂತನೆ ನಡೆದಿದೆ. ಪಬ್ಲಿಕ್ ವಿಂಗ್ ಲಾಂಗ್‌ವೇಜ್ ಕಮಿಷನ್ ಮತ್ತು ಲೇಬರ್ ಟ್ರಿಬ್ಯೂನಲ್ಸ್ ಬಗ್ಗೆ ಮಾತನಾಡಿದ್ದೇವೆ. ಅದರ ಬಗ್ಗೆ ತೀವ್ರವಾದ ವಿಚಾರ ನಡೆದಿದೆ ಇದರ ಬಗ್ಗೆ ಕೂಡ ಬೇಗ ತೀರ್ಮಾನ ತೆಗೆದುಕೊಳ್ಳುತ್ತೇವೆ. ಡಿಪಾರ್ಟ್‌ಮೆಂಟ್ ಆಫ್ ಕನ್ನಡ ಅಂಡ್ ಕಲ್ಚರ್ ನಾವು ಹೊಂದಿಸಲು ಪ್ರಸ್ತಾಪ ಮಾಡಿದ ಮೇಲೆ ಅದು ಈಗ ಒಂದು ಪರಿಸ್ಥಿತಿಗೆ ಬಂದಿದೆ. Work is in progress. First Volume is likely to be published by first of November, 1983. ಆಮೇಲೆ ಕೋರ್ಟ್ ಫೀ ಕಡಿಮೆ ಮಾಡಬೇಕೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರ ಕಾನೂನು ಮಂತ್ರಿಗಳ ಸಮ್ಮೇಳನ ಮಾಡಿದಾಗ ತಾವೂ ಕೂಡ ಹೋಗಿದ್ದೀರಿ. ಅದು ಸದ್ಯದಲ್ಲಿ ಕಡಿಮೆ ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಈ ಸಭೆಯೊಳಗೆ ಹೇಳಿದ್ದೀರಿ. ಪ್ರಸಕ್ತ ಮಾಡುವುದಕ್ಕೆ ಚಿಂತನೆಯಲ್ಲಿದೆ. ಇದು ಎಲ್ಲಾ ರಾಜ್ಯಗಳಿಗೂ ಅನ್ವಯವಾಗತಕ್ಕದ್ದು. ಗೌರ್ನಮೆಂಟ್ ಪ್ಲೀಡರ್ ಫೀ ಜಾಸ್ತಿ ಮಾಡಬೇಕೆಂದು ಹೇಳಿದ್ದೀರಿ. ಈಗ ರಿವೈಸ್ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಲಾ ಗ್ರಾಜುಯೇಟ್ಸ್‌ಗಳಿಗೆ ಟ್ರೈನಿಂಗ್ ಕೊಡತಕ್ಕ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಹೇಳಿದರು. ಈಗ 100 ಜನಗಳಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಲಾಯರ್ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಲಾಯರ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡುತ್ತೇವೆ. ಬಡವರ ಬಗ್ಗೆ ಅನುಕಂಪ ಇರತಕ್ಕ ಲಾಯರ್‌ಗಳಿಗೆ ಕೆಲಸ ಕೊಡಬೇಕೆಂದು ಹೇಳಿದ್ದಾರೆ, ಆ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದೊಂದು ಜಿಲ್ಲೆಗೂ ಲೀಗಲ್ ಏಡ್ ಅಡ್ವೋಕೇಟ್ ಇದ್ದರೂ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ತಿಳಿದುಬಂದು ಅದಕ್ಕೋಸ್ಕರ ಹೊಸ ಸ್ಕೀಮ್ ಹಾಕಿಕೊಂಡು ಎಲ್ಲೆಲ್ಲಿ ಕೋರ್ಟ್‌ಗಳಿವೆ ಅಲ್ಲೆಲ್ಲಾ ಒಬ್ಬೊಬ್ಬರು ಲಾಯರ್‌ಗಳನ್ನು ಕೊಡತಕ್ಕ ಯೋಜನೆ ಇದೆ. ಲೀಗಲ್ ಏಡ್ ಕಮಿಟಿ ಮಾಡಿ ಅದರ ಸಲಹೆ ಪ್ರಕಾರ ಮಾಡಲಾಗುತ್ತದೆ. ಅವರಿಗೆ ಷೆಡ್ಯೂಲ್ ಫೀ ಏನಿದೆ ಅದರ ಪ್ರಕಾರ ಫೀ ಕೊಡುವ ತೀರ್ಮಾನವಾಗಿದೆ. ಕಾನೂನು ನೆರವು ಕೊಡುವಾಗ ತಿಳುವಳಿಕೆ ಪಡೆದಿರತಕ್ಕವರಿಗೆ ಆ ಕೆಲಸವನ್ನು ವಹಿಸಿ ಎಲ್ಲರಿಗೂ ನ್ಯಾಯ ಸಿಗತಕ್ಕ ಕೆಲಸ ಮಾಡಬೇಕೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಪ್ರಚಾರ ಆಗಬೇಕು. ಸಮಾಜದ ಎಲ್ಲರ ಸಹಕಾರ ಇದಕ್ಕೆ ಬೇಕು ಹಾಗೆ ಆದರೆ ಸಹಾಯವಾಗಬಹುದು ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರಾಸಿಕ್ಯೂಷನ್ ಕನ್‌ವಿಕ್ಷನ್ ಕಡಿಮೆಯಾಗಿದೆ. ನಾನು ರಿವ್ಯೂ ಮಾಡಿದ್ದೇನೆ, ಸುಮಾರು ಆರೇಳು ಸಾವಿರ ರಿವ್ಯೂ ಮಾಡಿದ್ದೇನೆ. ಅದರಲ್ಲಿ ಏನಾಗಿದೆ ಅಂದರೆ ಕೇಸ್ ಹೋಗುತ್ತದೆ. ಅದನ್ನು ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್‌ನ ಸಂಬಂಧಪಟ್ಟ ಅಧಿಕಾರಿಗಳು ನೋಡುತ್ತಾರೆ, ಕಾನೂನು ರೀತಿ ಕಲಂ, ಸೆಕ್ಷನ್ ಎಲ್ಲಾ ಸರಿಯಾಗಿ ಆಗುತ್ತದೆ. ವಿಚಾರಣೆಯ ಸಮಯದಲ್ಲಿ

ಕೈಕೊಡುತ್ತಾರೆ ಏನು ಮಾಡೋಣ ? ಸಮಾಜದಲ್ಲಿ ಜನ ಸರಿಯಾಗಿ ಆಗಬೇಕು, ನ್ಯಾಯಬದ್ಧವಾಗಿ ನಡೆದು ಕೊಳ್ಳಬೇಕು.

ಶ್ರೀ ವೈ. ರಾಮಕೃಷ್ಣ.—ನಾನು ಸ್ಪಷ್ಟವಾಗಿ ಹೇಳುತ್ತೇನೆ. ಪಕ್ಕದ ರಾಜ್ಯವಾದ ಮದ್ರಾಸ್‌ನಲ್ಲಿ ನೂರಕ್ಕೆ 50 ಪರ್ಸೆಂಟ್ ಕನ್‌ವಿಕ್ಷನ್ ಆಗುತ್ತದೆ. ದಯವಿಟ್ಟು ನಮ್ಮಲ್ಲಿ ಎಷ್ಟು ಕನ್‌ವಿಕ್ಷನ್ ಆಗಿದೆ ಎಂದು ಹೇಳಬೇಕು. I want definite information.

ಶ್ರೀ ಎ. ಲಕ್ಷ್ಮೀಸಾಗರ್.—ಶಿಕ್ಷೆಯಾದ ಸಂಖ್ಯೆ ಕಡಿಮೆ ಎಂದು ಹೇಳುತ್ತೇನೆ. ಚಾರ್ಜ್‌ಶೀಟ್ ಕಾನೂನು ಪ್ರಕಾರ ಇದ್ದು ಎಲ್ಲಾ ದೃಷ್ಟಿಯಿಂದಲೂ ಅದು ಯೋಗ್ಯವಾದ ತೀರ್ಮಾನವಾಗಿ ಶಿಕ್ಷೆ ಆಗುತ್ತದೆ ಎಂದು ಗೊತ್ತಾಗುತ್ತದೆ. ಆದರೆ ವಿಟ್‌ನೆಸ್ ಬಾಕ್ಸ್‌ನಲ್ಲಿ ಹೋದಾಗ ನನಗೆ ಗೊತ್ತಿಲ್ಲ ಅಂದರೆ ಏನು ಮಾಡ ಬೇಕು ? ಅದಕ್ಕೋಸ್ಕರ ನಾನು ಹೇಳಿದ್ದು ನಮ್ಮ ಸಮಾಜದಲ್ಲಿ ಅನ್ಯಾಯಗಳನ್ನು ಮಾಡತಕ್ಕವರನ್ನು ಗಮನದಲ್ಲಿಟ್ಟು ಕೋರ್ಟ್‌ನಲ್ಲಿ ಕೇಸ್ ನಡೆಯುತಕ್ಕ ಸಂದರ್ಭದಲ್ಲಿ ನ್ಯಾಯದ ಪರವಾಗಿ ಸಾಕ್ಷಿ ಹೇಳಿದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮಂತ್ರಿಗಳೂ ಕೂಡ ವಕೀಲರಾಗಿ ಕೆಲಸ ಮಾಡಿದ್ದಾರೆ. ನಾನು ವಕೀಲನಾಗಿ ಕೆಲಸ ಮಾಡಿದ್ದೇನೆ. ಸಾಕ್ಷಿ ಹೇಳುವ ಒಂದು ಹಂತದಲ್ಲಿ ಕೇಸುಗಳು ಹೋಗಿಬಿಡುತ್ತವೆಂದು ಹೇಳತಕ್ಕದ್ದು 10 ಅಂಶ ಸರಿ ಇರಬಹುದು. ನೀವು ಪ್ರಾಸಿಕ್ಯೂಷನ್ ಮಾಡುವಾಗ ತಪ್ಪು ಮಾಡಿದಾಗ, ನಿಮ್ಮ ಪೋಲೀಸ್ ಅಧಿಕಾರಿಗಳು ಕೇಸನ್ನು build up ಮಾಡುವಾಗ ಸರಿಯಾಗಿಲ್ಲದೆ ಇದ್ದರೆ ಸಾಕ್ಷಿ ಹೇಳುವವರು ಏನು ಮಾಡುತ್ತಾರೆ? There is inherent defect in the investigation process. ನಿಮ್ಮ ಪ್ರಾಸಿಕ್ಯೂಟರ್ ಯಾವ ರೀತಿ ಇದ್ದಾರೆಂಬುದು ತಮಗೆ ಗೊತ್ತಿದೆ, ಅವರ ಪ್ರಾಮಾಣಿಕ ವಾಗಿ ಕೆಲಸ ಮಾಡದಿದ್ದರೆ. ಸಾಕ್ಷಿ ಹೇಳುವವರನ್ನು ದಾರಿ ತಪ್ಪಿಸುವಂತಹ ಕೆಲಸ ಅನೇಕ ಸಲ ನಡೆಯು ವುದರಿಂದ ಕೇಸುಗಳು ಫೇಲ್ ಆಗುವುದಕ್ಕೆ ಕಾರಣವಾಗುತ್ತದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಒಂದು ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮ ಹುಕ್ಕೇರಿ ತಾಲ್ಲೂಕಿನೊಳಗೆ 6 ಕೊಲೆಗಳು ಆದವು. ಇವತ್ತಿನ ದಿವಸ ಕೊಲೆ ಮಾಡಿದಂತಹ ಜನರಿಗೆ ಏನಾಯಿತು ? ಇನ್ನು ಮುಂದೆ ಕೊಲೆ ಮಾಡಲಿಕ್ಕೆ ಹೋಗುತ್ತೇವೆಂದು ಎಲೆ-ಅಡಿಕೆ ಕೊಟ್ಟು ಹೋಗುತ್ತಾರೆ. ಇವನ್ನು ದಯಮಾಡಿ ತಿಳಿದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ಗ್ರಹಿಸಬೇಕು. ಇನ್‌ವೆಸ್ಟಿ ಗೇಷನ್‌ನಲ್ಲಿ ತಪ್ಪಿರಬಹುದು. ಅಂದರೆ, ಚಾರ್ಜ್‌ಶೀಟ್ ಆಗಿರುತ್ತದೆ. ತಾವು ಹೇಳುವ ತರಹ ಆಗುವುದು ಕಡಿಮೆ. ನನ್ನ ಹತ್ತಿರ ಅಂತಹ ಕೇಸುಗಳು ಬಂದಿಲ್ಲ. All witnesses turn hostile. Criminal witnesses turn hostile. Material witnesses turn hostile. Eye witnesses turn hostile. It is the fate of the cases.

ಶ್ರೀ ಎಂ. ವೀರಪ್ಪ ಮೊಯ್ಲಿ.—ವಿಟ್‌ನೆಸಸ್ ಟರ್ನ್ ಹಾಸ್ಟೈಲ್ ಆಗತಕ್ಕದ್ದು ಹೇಳಬೇಡಿ. ಅದರಲ್ಲಿ ಎರಡು ವಿಧವಾಗಿ ಹೋಗುತ್ತದೆ, ಒಂದು ಗೊತ್ತಿದೆ ಸ್ಟೇಟ್‌ಮೆಂಟ್ ರಿಕಾರ್ಡ್ ಮಾಡುವಾಗ ವಿಟ್‌ನೆಸಸ್ ಏನು ಹೇಳುತ್ತಾರೆ ಅದನ್ನು ರಿಕಾರ್ಡ್ ಮಾಡದೆ, ಇನ್‌ವೆಸ್ಟಿಗೇಷನ್ ಆಫೀಸರ್ ಅವನ ಮನಸ್ಸಿಗೆ ಬಂದಹಾಗೆ ರಿಕಾರ್ಡ್ ಮಾಡಿದರೆ. ಸತ್ಯಾಂಶ ಕೋರ್ಟ್‌ನಲ್ಲಿ ಬಂದಾಗ ಕಾನ್‌ಟ್ರಡಿಕ್ಷನ್ ಆಗುತ್ತದೆ. ಕೆಲವು ಅಂಶ ಸತ್ಯಾಂಶ ಇರಬಹುದು. I don't think that is more than 5 per cent inherent defect in the prosecution. ಅಲ್ಲಿ ಉದ್ದೇಶಪೂರ್ವಕವಾಗಿ ಹೀಗೆ ಆಗುತ್ತದೆ. ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ಅವರು ಸರಿಯಾಗಿ ಪ್ರಾಸಿಕ್ಯೂಷನ್ ಮಾಡಲಿಕ್ಕೆ ನಿಮ್ಮ ಪ್ರಾಸಿಕ್ಯೂಷನ್ ಆಫೀಸರ್ ಅಡ್ವೋಕೇಟ್ ಇವರಿಗೆ ಈ ಬಗ್ಗೆ ಸರಿಯಾಗಿ ಇನ್‌ವೆಸ್ಟಿಗೇಷನ್ ಪ್ರೋಸೆಸ್ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಅದು ನಮಗೆ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಅಭಿಪ್ರಾಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ನನಗೆ ಇಲ್ಲಿಯವರೆಗೆ ಬಂದಿರುವ ಮಾಹಿತಿಯ ಆಧಾರದ ಮೇಲೆ ಹೇಳುವುದಾದರೆ ಅವರು ಹೇಳುವಂಥ ದೋಷ ಅದರಲ್ಲಿ ನನಗೆ ಕಂಡುಬರಲಿಲ್ಲ. ನಾನು ಅಲ್ಲಿ ದೋಷವಿಲ್ಲವೆಂದು ಹೇಳುತ್ತಿಲ್ಲ. ನನಗೆ ಬಂದಿರತಕ್ಕ ಮಾಹಿತಿಯ ಆಧಾರದ ಮೇಲೆ ಎಲ್ಲವನ್ನೂ ಸ್ಕ್ರೀನ್ ಮಾಡಿರುತ್ತೇನೆ. ಚಾರ್ಜ್‌ಶೀಟು ರಿಪೈಸ್‌ನಿಂದ ಪತ್ತೆ ಆಗಿರುತ್ತದೆ. ಕೇಸ್ ನಿಲ್ಲತಕ್ಕದ್ದು ಒಂದೊಂದು ಕೋರ್ಟ್‌ನಲ್ಲೂ ಸಾಕ್ಷಿ ಹೇಳಬೇಕು. ಅಲ್ಲಿ ಗಂಡಾಂತರ ಬರುತ್ತದೆ. ನನ್ನ ಹತ್ತಿರ ಇಲ್ಲಿಯವರೆಗೆ ಬಂದಿರುವ ಮಾಹಿತಿ ಪ್ರಕಾರ ಆ ಒಂದು ತಿಳುವಳಿಕೆ ಯಿಂದ ಈ ಮಾತನ್ನು ಹೇಳುತ್ತೇನೆ. ನಾನು ಸಾರ್ವಜನಕರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಅನ್ಯಾಯ ವಾದಾಗ ಅದರ ವಿರುದ್ಧ ಕೇಸುಗಳು ಬಂದಾಗ ಅದು ಪೂರ್ಣವಾಗುವವರೆಗೆ ಜನ ಸಾಕ್ಷಿ ಹೇಳಬೇಕು. 27 ವರ್ಷಗಳ ಕಾಲ ಲಾಯರ್ ಕೆಲಸ ಮಾಡಿದ್ದೇನೆ. ನಾನು ಕ್ರಿಮಿನಲ್ ಕೇಸುಗಳನ್ನು ನೋಡಿದ್ದೇನೆ, ಅದು ನನಗೆ

ತಿಳುವಳಿಕೆ ಇದೆ. ಇದು ಎಲ್ಲರ ತಿಳುವಳಿಕೆಯೂ ಇದೆ, ನಾನು ಹೆಡ್ಡನಲ್ಲ. ನಿಮ್ಮ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಂಡಿದ್ದೇನೆ. ಇದನ್ನು ಕಡಿಮೆ ಮಾಡುವುದಕ್ಕೆ ಏನು ಮಾಡಿದ್ದೇನೆ ಎನ್ನುವುದನ್ನು ಹೇಳುತ್ತೇನೆ.

ಮತ್ತೊಂದು ವಿಷಯವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ ಸುಪ್ರೀಂ ಕೋರ್ಟಿನ ಒಂದು ಬೆಂಚನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದು ಮತ್ತು ಹೈಕೋರ್ಟಿನ ಒಂದು ಬೆಂಚನ್ನು ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಸ್ಥಾಪನೆ ಮಾಡುವುದು. ಈ ಬಗ್ಗೆ ಕೇಂದ್ರ ಸರ್ಕಾರದವರ ನಿಲುವನ್ನು ತೆಗೆದುಕೊಳ್ಳಬೇಕು. ಮತ್ತು ನ್ಯಾಷನಲ್ ಲಾ ಸ್ಕೂಲನ್ನು ಸ್ಥಾಪನೆ ಮಾಡುವುದಕ್ಕೆ ರಾಜ್ಯ ಸರ್ಕಾರದಿಂದ ಏನೇನು ಸೌಲಭ್ಯಗಳು ಬೇಕೋ ಆ ಎಲ್ಲಾ ಸೌಲಭ್ಯಗಳನ್ನೂ ಸಹ ಒದಗಿಸಿಕೊಡಲಾಗುವುದು. ಅವರು ಈಗ ಈ ಸ್ಕೂಲನ್ನು ಸೆಂಟ್ರಲ್ ಕಾಲೇಜಿನ ಒಂದು ವಿಭಾಗದಲ್ಲಿ ನಡೆಸುತ್ತಿದ್ದಾರೆ. ಆದರೆ ಈ ಸ್ಕೂಲ್‌ಗಾಗಿ ಹೊಸದಾಗಿ ಕಟ್ಟಡವನ್ನೂ ಸಹ ಸ್ಥಾಪನೆ ಮಾಡಬೇಕು ಎನ್ನುವ ಉದ್ದೇಶ ಕೂಡ ಸರ್ಕಾರಕ್ಕೆ ಇದೆ.

ಶ್ರೀ ವೈ. ರಾಮಕೃಷ್ಣ,—ಸ್ವಾಮಿ, ಎರಡನೇ ಸುತ್ತಿನ ಹಣ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನಾನು ತಮಗೆ ಒಂದು ಮಾತನ್ನು ಹೇಳಬೇಕೆಂದರೆ ಈ ನ್ಯಾಷನಲ್ ಲಾ ಸ್ಕೂಲ್‌ಗೆ ಸರ್ಕಾರದಿಂದ ಏನೇನು ಸೌಲಭ್ಯಗಳು ಬೇಕೋ ಆ ಎಲ್ಲಾ ಸೌಲಭ್ಯಗಳನ್ನೂ ಸಹ ಒದಗಿಸಿ ಕೊಡುತ್ತೇವೆ. ಮತ್ತೆ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು ಮೊಬೈಲ್ ಕೋರ್ಟ್‌ಗಳಿಗೆ ವ್ಯಾನ್‌ಗಳನ್ನು ಒದಗಿಸಿಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಆದರೂ ಕೂಡ ಹೈಕೋರ್ಟ್‌ನವರು ಒಪ್ಪಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ ಹೇಳಿದರು ಕಾಪಿಗಳು ಹೈಕೋರ್ಟಿನಲ್ಲಿ ಸಿಗಬೇಕಾದರೆ ಬಹಳ ಕಷ್ಟವಾಗುತ್ತಿದೆ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ಹೇಳಿದರು. ಆದ್ದರಿಂದ ಸರ್ಕಾರ ಇದರ ಬಗ್ಗೆ ಒಂದು ನಿಲುವನ್ನೂ ಸಹ ತೆಗೆದುಕೊಂಡಿದೆ. ಅದು ಏನೆಂದರೆ Copying machines have been supplied to the High Court. Providing refresher courses to the judicial officers and their subordinate staff is agreed in principle. Proposed to provide telephones to judicial officers in Bangalore has been accepted and is being implemented. A car to every district judge has been sanctioned.

SRI. Y. RAMAKRISHNA.—That has been incorporated in the report of the last year itself.

SRI. A. LAKSHMISAGAR.—Two matadar vans have been sanctioned for the use of the judicial officers in Bangalore City and they are being used. It is also proposed to provide designated quarters to the judicial officers and details are being worked out. Review of the work done by the Government Pleaders. Asst. Government Pleaders in the State Revenue Divisions is being done and similarly the work of the High Court Advocates and Pleaders is being reviewed once in every three months Revenue divisions-wise.

ನಾವು ಯಾವ ಕೆಲಸವನ್ನು ಮಾಡಿದ್ದೇವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿದುಕೊಳ್ಳಬೇಕು. ನಾವು ಸುಮಾರು 3 ತಿಂಗಳಿಗೊಂದು ಸಾರಿ ರಿವ್ಯೂ ವರ್ಕ್ ಮಾಡುತ್ತಿದ್ದೇವೆ. ನಾವು ಮಾಡುವಂಥ ಕೆಲಸದಲ್ಲಿ ಯಾವತ್ತೂ ಕೂಡ ಹಿಂದೆ ಬಿದ್ದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ. ನಾನು ಎಲ್ಲಾ ಇಲಾಖೆಯ ಅಂದರೆ ನ್ಯಾಯಾಂಗ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಅವರಿಗೆ ಏನೇನು ತೊಂದರೆಗಳು ಇವೆ ಎನ್ನುವ ಬಗ್ಗೆ ಕೂಡ ನಾನು ವಿಚಾರ ವಿನಿಮಯ ಮಾಡಿದ್ದೇನೆ. ಅನೇಕ ಸಲ ಗೌರ್ನಮೆಂಟ್ ಪ್ಲೀಡರ್ಸ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ಸ್. ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ಮತ್ತು ಅಸಿಸ್ಟೆಂಟ್ ಗೌರ್ನಮೆಂಟ್ ಪ್ಲೀಡರ್ಸ್‌ನ್ನು ಕರೆಸಿ ಸಮಾಲೋಚನೆ ಮಾಡಿದ್ದೇನೆ. ಅಧಿಕಾರಿಗಳಿಗೆ ಏನೇನು ಕಷ್ಟಕಾರ್ಪಣ್ಯಗಳು ಇವೆ ಆ ಎಲ್ಲಾ ಕಷ್ಟಕಾರ್ಪಣ್ಯಗಳನ್ನು ನಿವಾರಣೆ ಮಾಡುವುದಕ್ಕೆ ನಾವು ಒಂದು ಸೆಲ್ ನಿರ್ಮಾಣ ಮಾಡಿದ್ದೇವೆ.

Consultative Committee has been formed. That Committee met on 28th July 1983 and review of work in respect of the work in the

Law Department has been carried out, The Senior Law Officers inspect, and representations received from the public in the Law Department have been expeditiously disposed of by the Cell specially created for this parpose. The Home Department has been requested to look into various deficiences noticed in the conduct of criminal Prosecution and suggest remedial measure therefor in the public interest. I would not like to disclose all thoses details. I hove drawn the attention of the Home Department, and the Home Department has alerted all the police officers in the district to look into those deficiencies. ನಾವು ಏನೇನು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆಂದು ವಿವರವಾಗಿ ಹೇಳುವುದಕ್ಕೆ ಹೊರಟರೆ ತೊಂದರೆಯಾಗುತ್ತದೆ. In order to effectively translate Central Acts and State Acts an official language Commission is being constituted in the State. Details regarding the members of the Commission are being finalised. An index of Acts enforced in the State has already been published but in view of large number of changes the same is being re-printed to in corporatethe changes. Law Department is in charge of printing of States Acts, Rules, Rules notification and orders. As the Government Printing Press is finding it difficult to cope with printing work, efforts are being made to get them printed in private presses. The work relating to printing work of the above publications is expected to be completed in about six months. ಕಾಪಿಗಳು ಸಿಗುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಾನು ಈ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಯಿತು. ಡಿಪಾರ್ಟ್‌ಮೆಂಟ್‌ನವರಿಗೆ ಯಾವ ರೇಟ್‌ನಲ್ಲಿ ಪ್ರಿಂಟ್ ಮಾಡುತ್ತಿದ್ದರೋ ಅದೇ ರೇಟ್‌ನಲ್ಲಿ ನಾವು ಬೇರೆ ಕಡೆಯಿಂದ ಪ್ರಿಂಟ್ ಮಾಡಿಸುತ್ತಿದ್ದೇವೆ. ಮತ್ತೆ ಮಾನ್ಯ ಸದಸ್ಯರು ಕಾನೂನು ಪುಸ್ತಕಗಳು ಸಿಗುತ್ತಿಲ್ಲವೆಂದು ಹೇಳಿದರು. ಆ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಜವರಗಿ ಹನುಮಂತರಾವ್ ದೇಸಾಯಿಯವರು ಕೂಡ ಈ ಮಾತನ್ನು ಹೇಳಿದರು. ಅವರಿಗೂ ಕೂಡ ಈಗ ಸಮಾಧಾನವಾಗಿದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ನಾವು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಹಂತ ಹಂತವಾಗಿ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಧರ್ಮಸಿಂಗ್‌ರವರು ಗೃಹಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ಮಾನ್ಯ ಸದಸ್ಯರಿಗೆ ಉತ್ತರ ಹೇಳುವುದಾದರೆ ನಾನು ಇದರಲ್ಲಿ ರಾಜಕೀಯ ಬೆರೆಸಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಅವರು ಮಾತನಾಡುವಾಗ ರಾಜಕೀಯ ಬೇಡವೆಂದು ಹೇಳಿದರು. ಸ್ವಾಮಿ, ಮಾನ್ಯ ಸದಸ್ಯರು ಹೌಸ್‌ಗಳನ್ನು ಒದಗಿಸಿಕೊಡುವ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ನಮ್ಮ ರಾಜ್ಯದಲ್ಲಿ ಇವತ್ತು ಸುಮಾರು 3·07 ಕೋಟಿ ಜನರಿದ್ದಾರೆ. ಇದರಲ್ಲಿ ಹಳ್ಳಿಗಾಡಿನ ಜನಸಂಖ್ಯೆ ಸುಮಾರು 2·63 ಕೋಟಿ. ಪಟ್ಟಣಗಳಲ್ಲಿ ವಾಸಮಾಡತಕ್ಕಂಥವರ ಸಂಖ್ಯೆ 1·07 ಕೋಟಿ. ಇದರಲ್ಲಿ ಮನೆಗಳ ಲೆಕ್ಕ ಹಾಕಿದರೆ ಸೆನ್ಸಸ್ ಪ್ರಕಾರ 82 ಲಕ್ಷ ಗ್ರಾಮಾಂತರ ಪ್ರದೇಶದಲ್ಲಿ 59 ಲಕ್ಷ ಮತ್ತು ಪಟ್ಟಣ ಪ್ರದೇಶದಲ್ಲಿ 23 ಲಕ್ಷ ಮನೆಗಳು ಇವೆ. ನಮ್ಮ ರಾಜ್ಯದಲ್ಲಿ ಸುಮಾರು 280 ಸೆಟ್ಲ್‌ಮೆಂಟ್‌ಗಳು ಇವೆ. ನಮ್ಮ ತೊಂದರೆಯ ಗಾತ್ರದ ಬಗ್ಗೆ ಹೇಳುವುದಾದರೆ ನಮಗೆ ವರ್ಷಕ್ಕೆ 12 ಲಕ್ಷ ಮನೆಗಳು ಬೇಕಾಗುತ್ತವೆ. ಇದನ್ನು ಮಾಡಬೇಕಾದರೆ 3 ಲಕ್ಷ ಮನೆಗಳು ಪಟ್ಟಣ ಪ್ರದೇಶದಲ್ಲೂ ಮತ್ತು 9 ಲಕ್ಷ ಮನೆಗಳು ಹಳ್ಳಿಗಾಡು ಪ್ರದೇಶದಲ್ಲೂ ಮಾಡಬೇಕಾಗುತ್ತದೆ. ಇದಕ್ಕೆ ತಗಲತಕ್ಕಂಥ ಒಟ್ಟು ವೆಚ್ಚ 190 ಕೋಟಿ ರೂಪಾಯಿಗಳು ಒಂದು ವರ್ಷಕ್ಕೆ.

ಶ್ರೀ ಧರ್ಮಸಿಂಗ್.—ನಾನು ಕೇಳುವುದೇನೆಂದರೆ 20 ಅಂಶ ಕಾರ್ಯಕ್ರಮದ ಪ್ರಕಾರ ಜನತಾ ಮನೆಗಳನ್ನು ಕೊಡುತ್ತಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಗೃಹ ಸಮಸ್ಯೆಯ ಸಮಗ್ರ ಚಿತ್ರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ನಮಗೆ ಇರುವ ಏಜೆನ್ಸಿಗಳೆಂದರೆ ಹುಡ್ಕೋ, ಕರ್ನಾಟಕ ಹೌಸಿಂಗ್ ಬೋರ್ಡ್, ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್, ಕೋಆಪರೇಟಿವ್ ಸೊಸೈಟೀಸ್ ಮತ್ತು ಬೇರೆ ಏಜೆನ್ಸಿಗಳು ಇವೆ. ಇವೆಲ್ಲವನ್ನೂ ಪೂರ್ಣ ಮಾಡಬೇಕಾದರೆ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಹತ್ತು ಸಾವಿರ ಮನೆಗಳನ್ನೂ, ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ 20 ಸಾವಿರ, ಮತ್ತು ಕೋಆಪರೇಟೀವ್ ಸೊಸೈಟೀಸ್ ಮತ್ತು ಇತರ ಏಜೆನ್ಸಿಗಳಿಗೆ 20 ಸಾವಿರ ಒಟ್ಟು 50 ಸಾವಿರ ಮನೆಗಳನ್ನು ಮಾಡತಕ್ಕ ಶಕ್ತಿಯನ್ನು ಇವುಗಳು ಪಡೆದಿವೆ.

ಶ್ರೀ ಎಂ. ಎಸ್. ಕೃಷ್ಣನ್.—ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ 73 ರಿಂದ 82 ರವರೆಗೆ ಗ್ರಾಮಾಂತರ ಮನೆಗಳಿಗೆ 1 ಲಕ್ಷ 7 ಸಾವಿರದ 926 ರೂಪಾಯಿಗಳು ಅಂತ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಗ್ರಾಮಾಂತರ ಪ್ರದೇಶದ ಮನೆಗಳಿಗೆ ನಾನು ಆಮೇಲೆ ಬರುತ್ತೇನೆ. ಈ ಪರ್‌ಫಾರ್ಮೆನ್ಸ್ ಬಜೆಟ್ ಅಪ್‌ಟುಡೇಟ್ ಆಗಿಲ್ಲ. ಇದರ ವಿವರಗಳನ್ನು ನಾನು ಆಮೇಲೆ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿಯವರೆಗಿನ ಸಾಧನೆ ತೃಪ್ತಿಕರವಾಗಿಲ್ಲ. ಇದೇ ಪ್ರಮಾಣದಲ್ಲಿ ಮುಂದುವರೆದಿದ್ದಾದರೆ ಇನ್ನೂ 20 ವರ್ಷ ಬೇಕಾಗುತ್ತದೆ.

ಶ್ರೀ ಧರ್ಮಸಿಂಗ್.—ಜನಸಂಖ್ಯೆಯ ಆಧಾರದ ಮೇಲೆ ಎಷ್ಟು ಮನೆಗಳು ಬೇಕು ಎಂಬುದು ನಿಮಗೆ ಗೊತ್ತಿದೆ. ಆದರೆ ಈ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಕೈಗಾರಿಕಾ ಕಾರ್ಮಿಕರಿಗೆ, ದುರ್ಬಲವರ್ಗದವರಿಗ ಜನತಾ ಮನೆಗಳಿಗೆ ಹಣವನ್ನು ಇಟ್ಟಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಅಪ್‌ಟುಡೇಟ್ ಫಿಗರ್ಸ್ ಅಲ್ಲ.

ಶ್ರೀ ಧರ್ಮಸಿಂಗ್.—ಈ ಸರ್ಕಾರಕ್ಕೆ ಕಾರ್ಮಿಕರ ಬಗ್ಗೆ ಕಳಕಳಿ ಇದೆಯೋ ಎಂಬುದು ನೇರವಾದ ಪ್ರಶ್ನೆ. ಇವತ್ತು ಏನಾಗಿದೆ ಎಂದರೆ, ಕೈಗಾರಿಕಾ ಕಾರ್ಮಿಕರಿಗೆ, ದುರ್ಬಲವರ್ಗದವರಿಗೆ 1981–82 ರಲ್ಲಿ 2 ಲಕ್ಷ ರೂಪಾಯಿ ಖರ್ಚು ಮಾಡಿದ್ದೆವು. 1982–83 ಕ್ಕೆ 10 ಲಕ್ಷ ರೂಪಾಯಿಗಳನ್ನು ನಾವು ಇಟ್ಟಿದ್ದೆವು. ನೀವು ಈ ವರ್ಷ ಎಷ್ಟು ಇಟ್ಟಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಏಕೆ ಹೀಗೆ ಅವಸರ ಮಾಡುತ್ತಿದ್ದಾರೆ? ಅವರು ಮಾಡಿದಂತಹ ಪ್ರಸ್ತಾಪದ ವಿಷಯಕ್ಕೆ ನಾನಿನ್ನೂ ಬಂದಿಲ್ಲ. ನಾನು ಎಲ್ಲಾ ವಿವರಗಳನ್ನೂ ಕೊಟ್ಟಮೇಲೆ ಅವರಿಗೆ ಸಮಾಧಾನವಾಗದಿದ್ದರೆ ಅವರು ನಂತರ ಬೇಕಾದರೆ ಪ್ರಶ್ನೆ ಕೇಳಬಹುದು.

ಉಪಾಧ್ಯಕ್ಷರು.—ಮೊದಲು ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ಕೊಡಲಿ. ಆಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಇಂಟಿಗ್ರೇಟೆಡ್ ಏರಿಯಾದಲ್ಲಿ ಕೆಲಸಗಾರರಿಗೆ ಏನೂ ಮಾಡಿಲ್ಲ. ಹಣ ಇಟ್ಟಿಲ್ಲ ಎಂದು ತಾವೇನು ಹೇಳಿದ್ದೀರಿ. ಆ ಪಾಯಿಂಟನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ಉತ್ತರ ಬೇಕಾದರೆ ಹೇಳುತ್ತೇನೆ. ಆದರಿಂದ ನಿಮಗೆ ಸಮಾಧಾನ ಆಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. 1983–84 ರಲ್ಲಿ ಕಟ್ಟಲಾಗುವ ಮನೆಗಳಿಗೆ ಆರ್ಥಿಕ ಅವಶ್ಯಕತೆ ಈ ರೀತಿ ಇದೆ. ಗ್ರಾಮಾಂತರ ಪ್ರದೇಶದ ಮನೆಗಳಿಗೆ 11 ಕೋಟಿ 60 ಲಕ್ಷ ರೂಪಾಯಿ. ಭಾಗ್ಯಮಂದಿರ. ಅರ್ಬನ್ ಹೌಸಿಂಗ್ 234 ಲಕ್ಷ ರೂಪಾಯಿ. ಗ್ರಾಮಾಂತರ ಪ್ರದೇಶದಲ್ಲಿ ಸೈಟುಗಳು 72 ಲಕ್ಷ. ಪಟ್ಟಣ ಪ್ರದೇಶದಲ್ಲಿ ಸೈಟುಗಳು 54 ಲಕ್ಷ ರೂಪಾಯಿ. ಟ್ರೈಬಲ್ ಹೌಸಿಂಗ್ ಸ್ಕೀಮ್ 37 ಲಕ್ಷ ರೂಪಾಯಿ. ಕೆ.ಹೆಚ್.ಬಿ.ಗೆ ಸಾಲ 141 ಲಕ್ಷ ರೂಪಾಯಿ. ಒಟ್ಟು 16·98 ಕೋಟಿ ರೂಪಾಯಿಗಳು. ಹುಡ್ಕೋ ರೂರಲ್ ಹೌಸಿಂಗ್‌ಗೆ 675 ಲಕ್ಷ ರೂಪಾಯಿ. ಕೆ.ಹೆಚ್.ಬಿ.ಯ. ಇ.ಡಬ್ಲ್ಯು.ಎಸ್. ಎಲ್.ಐ.ಜಿ. ಎಂ.ಐ.ಜಿ., ಹೆಚ್.ಐ.ಜಿ.. 1,100 ಲಕ್ಷ ರೂಪಾಯಿಗಳು. ಇತರೆ 200. ಲಕ್ಷ ರೂಪಾಯಿಗಳು. ಒಟ್ಟು 1975 ಲಕ್ಷ ರೂಪಾಯಿಗಳು. ಡಿಬೆಂಚರ್ಸ್ ಮೂಲಕ 275 ಲಕ್ಷ ರೂಪಾಯಿಗಳು, ಅಲಾಟೀಸ್ 500 ಲಕ್ಷ ರೂಪಾಯಿ ಮತ್ತು ಕೆ.ಹೆಚ್.ಬಿ.ಯನ್ನೂ ಸಹ ಒಳಗೊಂಡು ಸರ್ಕಾರದಲ್ಲಿರುವ ಹಣದ ಲೆಕ್ಕ 4.266 ಲಕ್ಷ ರೂಪಾಯಿಗಳು. ಇದು ನಮ್ಮ ಹಣಕಾಸಿನ ಸ್ಥಿತಿ. ಈ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಅಚ್ಚಾಗಿರುವುದು ತಪ್ಪೆಂದು ನಾನು ಹೇಳಿಲ್ಲ. ಈಗ ನಾನು ಹೇಳುತ್ತಿರುವುದು ಅಪ್‌ಟುಡೇಟ್ ಆಗಿದೆ.

SRI. DHARAM SINGH.—You are misleading the House. ಪಬ್ಲಿಕ್ ಹೌಸಿಂಗ್ ಸ್ಕೀಮ್‌ನಲ್ಲಿ ಭಾಗ್ಯಮಂದಿರ, ಹೌಸಿಂಗ್ ಅಂಡರ್ ಟ್ರೈಬಲ್ ಏರಿಯಾ ಸಬ್‌ಪ್ಲಾನ್, ಅಸಿಸ್ಟೆನ್ಸ್ ಟು ಹೌಸಿಂಗ್ ಬೋರ್ಡ್‌ಗೆ ಒಟ್ಟು 65·40 ಕೋಟಿ ಅಂತ ಹೇಳುತ್ತಿದ್ದೀರಿ. 1983–84 ರಲ್ಲಿ 20·19 ಕೋಟಿ ರೂಪಾಯಿ ಮಾತ್ರ ಇಟ್ಟಿದ್ದೀರಿ. ಆದರೆ ನಾವು 1982–83 ರಲ್ಲಿ 25·25 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ನೀವು ಆರು ಕೋಟಿ ರೂಪಾಯಿ ಕಡಿಮೆ ಏಕೆ ಇಟ್ಟಿದ್ದೀರಿ ? ಇದರಲ್ಲಿ ಪ್ಲಾನ್‌ನಲ್ಲಿ ಮತ್ತು ನಾನ್‌ಪ್ಲಾನ್‌ನಲ್ಲಿ ಎಷ್ಟು ಖರ್ಚು ಮಾಡುತ್ತೀರಿ ?

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಮೊದಲು ಪೂರ್ತಿಯಾಗಿ ಉತ್ತರ ಕೊಡಲಿ. ಆಮೇಲೆ ನಿಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಶ್ರೀ ಧರ್ಮಸಿಂಗ್‌ರವರು ಹೇಳಿದ ಎಲ್ಲಾ ವಿಚಾರಗಳನ್ನೂ ನಾನು ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆ. ಅವರು ಸ್ವಲ್ಪ ಸಮಾಧಾನದಿಂದ ಕುಳಿತುಕೊಂಡರೆ ನಾನು ಎಲ್ಲಾ ವಿಷಯಗಳ ಬಗ್ಗೆ ಉತ್ತರ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ತಾವು ಮಂತ್ರಿಗಳಾಗಿದ್ದವರು. ಶ್ರೀಮಾನ್ ಲಕ್ಷ್ಮೀಸಾಗರ್‌ರವರು ತಾವು ಉತ್ತರ ಹೇಳಿದ ಮೇಲೆ ಏನಾದರೂ ಸಂದೇಹ ಇದ್ದರೆ ಕೇಳಬಹುದು ಎಂದು ಹೇಳಿದ್ದಾರೆ. ತಾವು ಪ್ರತಿಯೊಂದಕ್ಕೂ ಹೀಗೆ ಎದ್ದು ಎದ್ದು ನಿಂತುಕೊಂಡರೆ ಅವರು ಉತ್ತರ ಕೊಡುವುದಾದರೂ ಹೇಗೆ ?

ಶ್ರೀ ಧರ್ಮಸಿಂಗ್.—ನಾನು ಯಾವುದೇ ಟೀಕೆ ಟಿಪ್ಪಣಿ ಮಾಡುವುದಕ್ಕೆ ಹೋಗಿಲ್ಲ. ಅಂಕಿ ಅಂಶಗಳ ಮುಖಾಂತರ ಹೇಳಿದ್ದೇನೆ ಅಷ್ಟೆ. ಇವತ್ತು 20 ಅಂಶಗಳ ಕಾರ್ಯಕ್ರಮದಿಂದ ಬಡವರಿಗೆ ಅನುಕೂಲವಾಗುತ್ತದೆ. ಈ ಯೋಜನೆಯಲ್ಲಿ ಕಡಿಮೆ ಹಣ ಇಟ್ಟಿದ್ದೀರಿ ಎಂದು ನಾನು ಹೇಳುತ್ತಿರುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಧರ್ಮಸಿಂಗ್ ಅವರಿಗೆ ಅರ್ಥವಾಗುತ್ತಿಲ್ಲ. ನಾನು ಉತ್ತರ ಹೇಳುವುದಿಲ್ಲವೆಂದು ಹೇಳಿದ್ದೇನೆಯೇ ? ಬರೀ ಪುಸ್ತಕದಲ್ಲಿ ಇದೆಯೆಂದು ಹೇಳಿದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—ಪುಸ್ತಕದಲ್ಲಿ ಇರುವುದನ್ನು ತಾವು ಮರೆತುಹೋಗಬಹುದು. ಏಕೆಂದರೆ 1981–82 ರಲ್ಲಿ ಕೆಲಸ ನಡೆಯದೆ ಅದನ್ನು 1982–83 ರಲ್ಲಿ ಮಾಡಿದ್ದಾರೆ. ಹೀಗಿರುವಾಗ 1983–84 ಕ್ಕೆ ಏನಾಗುತ್ತದೆ ? ಆದ್ದರಿಂದಲೇ ಈ ಪ್ರಶ್ನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಕೇಳಿದ್ದನ್ನು ನಾನು ಹೇಳುತ್ತಿದ್ದೇನೆ. ಈ ವರ್ಷ ಮನೆ ಕಟ್ಟತಕ್ಕಂತಹ ಕಾಮಗಾರಿಗಳಿಗೆ ಇರತಕ್ಕಂತಹ ಹಣ. ಒಂದು ಸಾಮಾನ್ಯವಾದ ಟೀಕೆ ಏನು ಬಂದಿದೆ ಎಂದರೆ.. ಜನತಾ ಸರ್ಕಾರ ಜನತಾ ಮನೆಗಳನ್ನು ಕಟ್ಟತಕ್ಕಂತಹ ಕೆಲಸಗಳಿಗೆ ಹಣವನ್ನು ಕಡಿಮೆ ಕೊಟ್ಟಿದೆ. ಕೇವಲ 11 ಕೋಟಿ 60 ಲಕ್ಷ ಹಣವನ್ನು ಮಾತ್ರ ಇಟ್ಟಿದೆ ಎನ್ನತಕ್ಕಂತಹ ಮಾತನ್ನು ಹೇಳಿದ್ದೇನೆ. ಏತಕ್ಕಾಗಿ ಅಷ್ಟನ್ನು ಇಟ್ಟಿದ್ದೇವೆಂಬುದನ್ನು ಹೇಳುವುದಕ್ಕೆ ಹೊರಟರೆ ನನಗೆ ಅವಕಾಶವನ್ನೇ ಕೊಡುವುದಿಲ್ಲ. ಕಡಿಮೆ ಹಣವನ್ನು ಇಟ್ಟಿರುವುದು ನಿಜ. 11 ಕೋಟಿ 60 ಲಕ್ಷ ಮಾತ್ರ. ಬಡ್ಜೆಟ್ಟಿನಲ್ಲೂ ಈ ಮಾತನ್ನು ಹೇಳಿದ್ದೇವೆ. ಇದು ಸಾಲದು ಎನ್ನುವುದನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಇನ್ನೂ ಮುಗಿದಿಲ್ಲ. ರಿ ಅಪ್ರೋಪ್ರಿಯೇಷನ್ ಆಗುವ ಸಂದರ್ಭಗಳೂ ಇವೆ. ಅಂದರೆ ಕೆಲವು ಕಡೆ ಖರ್ಚಾಗದೆ ಇರತಕ್ಕಂತಹ ಹಣವನ್ನು ಇದಕ್ಕಾಗಿ ಡೈವರ್ಟ್ ಮಾಡತಕ್ಕಂತಹ ಸಂದರ್ಭ ಇದೆ. ಇದೂ ಅಲ್ಲದೆ ಇದಕ್ಕಾಗಿ ಕಂಟಿನ್‌ಜೆನ್ಸಿ ಫಂಡ್‌ನಿಂದ 1 ಕೋಟಿ ರೂಪಾಯಿಗಳನ್ನೂ ಕೂಡ ಈ ಕೆಲಸವನ್ನು ಮಾಡುವುದಕ್ಕೋಸ್ಕರ ನಾವು ತೆಗೆದುಕೊಂಡಿದ್ದೇವೆ. ಇದಕ್ಕಾಗಿ ಹೆಚ್ಚು ಹಣವನ್ನು ಕೊಡುವುದಕ್ಕಾಗಲಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಈ ಸಾಲಿನ ಆಯವ್ಯಯದಲ್ಲೇ 160 ಕೋಟಿ ರೂಪಾಯಿಗಳ ಡೆಫಿಸಿಟ್ ಬಡ್ಜೆಟ್ ಎಂಬುದನ್ನು ನಿಮಗೆ ಈಗಾಗಲೇ ತಿಳಿಸಿದ್ದೇವೆ. ಮತ್ತೆ ಹಿಂದಿನ ಸರ್ಕಾರ ಇದ್ದಂತಹ ಸಮಯದಲ್ಲಿ 45 ಕೋಟಿ ರೂಪಾಯಿಗಳನ್ನು ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಮಾಡಿದೆ ಎಂಬ ಮಾತೂ ಅದರಲ್ಲಿ ಉಲ್ಲೇಖವಾಗಿದೆ. ಹಣಕಾಸಿನ ಮುಗ್ಗಟ್ಟನ್ನು ನಾವು ಎದುರಿಸುತ್ತಿದ್ದೇವೆ. ಆದ್ದರಿಂದ ಈ ಮಾತನ್ನು ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಗ್ರಹಿಸುತ್ತಾರೆಂದು ಭಾವಿಸುತ್ತೇನೆ. ಅವರ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಇದಕ್ಕಾಗಿ ಜಾಸ್ತಿ ಹಣವನ್ನು ಕೊಟ್ಟಿದ್ದಾರೆ ನಿಜ. ನಾನು ಇಲ್ಲ ಅಂತ ಹೇಳಲಿಲ್ಲ. ನಾನು ಹೇಳಿದ್ದು ಏನೆಂದರೆ. ನಮ್ಮಲ್ಲಿ ಈಗಿರುವ ಹಣಕಾಸಿನ ದೃಷ್ಟಿಯಿಂದ ಹೆಚ್ಚು ಹಣವನ್ನು ಇದಕ್ಕಾಗಿ ಇಡುವುದಕ್ಕಾಗಲಿಲ್ಲ ಎಂದು ಪ್ರತ್ಯೇಕವಾಗಿ ಅವರಿಗೆ ಹೇಳಬೇಕಾಗಿಲ್ಲ.

ಆಮೇಲೆ ಡಿಸ್ಟ್ರಿಬ್ಯೂಷನ್ ಆಫ್ ಹೌಸ್‌ಸೈಟ್ಸ್.

ಶ್ರೀ ಧರ್ಮಸಿಂಗ್.—ಇಂಡಸ್ಟ್ರಿಯಲ್ ವರ್ಕರ್ಸ್ ಮತ್ತು ವೀಕರ್ ಸೆಕ್ಷನ್‌ರವರಿಗೆ ಏನು ಹಣವನ್ನು ಕೊಟ್ಟಿದ್ದೀರಿ ಎಂಬುದು ನೀವು ಕೊಟ್ಟಿರುವ ಸ್ಟೇಟ್‌ಮೆಂಟ್‌ನ ಪೇಜ್ 3 ರ ಎರಡನೇ ಪ್ಯಾರಾದಲ್ಲಿದೆ. ಏಕೆ ಈ ಸಾರಿ ಇದಕ್ಕಾಗಿ ಹಣವನ್ನು ಕೊಟ್ಟಿಲ್ಲ ? ಇದರಿಂದ ಕೈಗಾರಿಕಾ ಕಾರ್ಮಿಕರು ಹಾಗೂ ವೀಕರ್ ಸೆಕ್ಷನ್ ಬಗ್ಗೆ ನಿಮಗೆ ಆಸಕ್ತಿ ಇಲ್ಲ ಅಂತ ಹೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೇ. ನಾನು ಪೂರ್ಣವಾಗಿ ಉತ್ತರವನ್ನು ಹೇಳಿದ ಮೇಲೆ ನಂತರ ಬೇಕಾದರೆ ವಿವರಣೆಯನ್ನು ಕೇಳಲಿ. ಮಾನ್ಯ ಸದಸ್ಯರಿಗೆ ಏಕೆ ಇಷ್ಟು ಅವಸರ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈ ಸಲ ಎಲ್.ಐ.ಜಿ., ಎಂ.ಐ.ಜಿ., ಇ.ಡಬ್ಲ್ಯೂ.ಎಸ್. ಹಾಗೂ ಇ.ಎಲ್‌ಸಿ.ಹೆಚ್.ಎಸ್‌ನ, ಅಂದಾಜಿನ ಚೌಕಟ್ಟಿನಲ್ಲೇ ಇವರಿಗೂ ಕೊಡತಕ್ಕಂತಹ ಚಿಂತನೆ ಬಂದಿರುವುದರಿಂದ ಇಂಡಸ್ಟ್ರಿಯಲ್ ವರ್ಕರ್ಸ್‌ಗಾಗಿ ಹೋದ ವರ್ಷ ಹಣವನ್ನು ಇಟ್ಟಹಾಗೆ ಈ ಸಾರಿ ಇಟ್ಟಿಲ್ಲ.

ಶ್ರೀ ಧರ್ಮಸಿಂಗ್.—ಏಕೆ ಇಟ್ಟಿಲ್ಲ ? ಬಡವರ ಬಗ್ಗೆ ಹಾಗೂ ಕಾರ್ಮಿಕರ ಬಗ್ಗೆ ಈ ಸರ್ಕಾರಕ್ಕೆ ಆಸಕ್ತಿ ಇಲ್ಲ ಅಂತ ಹೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅವರು ಕೇಳಿದ ಪ್ರಶ್ನೆಗೆ ಉತ್ತರ ಹೇಳದಿದ್ದರೆ ಅವರು ಕೇಳುವುದು ನ್ಯಾಯವಾದುದು. ನಾನು ಈಗಾಗಲೇ ಅವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ನಾವು ಪ್ರತ್ಯೇಕವಾಗಿ ಇಂಡಸ್ಟ್ರಿಯಲ್ ವರ್ಕರ್ಸ್‌ಗೆ ಹಣವನ್ನು ಇಟ್ಟಿಲ್ಲ ಅಂತ ಹೇಳಿದ್ದೇನೆ. ಇನ್ನು ಯಾವ ಭಾಷೆಯಲ್ಲಿ ಹೇಳ

ಬೇಕೋ ನನಗೆ ಗೊತ್ತಾಗುವುದಿಲ್ಲ. ಇಂಡಸ್ಟ್ರಿಯಲ್ ವರ್ಕರ್ಸ್‌ಗೆ, ವೀಕರ್ ಸೆಕ್ಷನ್‌ಗೆ ಎಲ್.ಐ.ಜಿ, ಎಂ.ಐ.ಜಿ, ಇ.ಡಬ್ಲ್ಯೂ.ಎಸ್. ಹಾಗೂ ಇ.ಎಲ್.ಸಿ.ಹೆಚ್.ಎಸ್. ಯೋಜನೆಯಲ್ಲಿ ಕಟ್ಟಲಾಗುವ ಮನೆಗಳಲ್ಲಿ ಇವರಿಗೂ ಕೊಡತಕ್ಕಂತಹ ಅವಕಾಶವನ್ನು ಕಲ್ಪಿಸಿಕೊಡತಕ್ಕಂತಹ ದೃಷ್ಟಿಯಿಂದ ಇವರಿಗಾಗಿ ಪ್ರತ್ಯೇಕವಾಗಿ ಹಣವನ್ನು ಇಟ್ಟಿಲ್ಲ.

ಶ್ರೀ ಧರ್ಮಸಿಂಗ್.—ಈ ಸರ್ಕಾರ ಇಂಡಸ್ಟ್ರಿಯಲ್ ವರ್ಕರ್ಸ್ ಹಾಗೂ ವೀಕರ್ ಸೆಕ್ಷನ್ ಬಗ್ಗೆ ವಿಚಾರವನ್ನೇ ಮಾಡಿಲ್ಲವೆಂದು ಆಪಾದನೆ ಮಾಡಬೇಕಾಗುತ್ತದೆ. ಇದು ಸಣ್ಣ ಸಣ್ಣ ಜನರಿಗೆ ಸಹಾಯವಾಗತಕ್ಕಂತಹ ಕಾರ್ಯಕ್ರಮ. ಇದಕ್ಕೆ ನೀವು ಆದ್ಯತೆಯನ್ನು ಕೊಡದಿದ್ದರೆ ಸಂಪುಟದಲ್ಲಿ ಏಕೆ ಇದ್ದೀರಿ ನೀವೆಲ್ಲಾ ?

ಶ್ರೀ ಬಿ. ರಾಚಯ್ಯ.—ಏನು ಮಾಡುತ್ತಾರೆಂದು ನಾನು ಕೇಳುವುದಕ್ಕೆ ಇಲ್ಲಿದ್ದೇನೆ. ಇಂಡಸ್ಟ್ರಿಯಲ್ ವರ್ಕರ್ಸ್ ಹಾಗೂ ವೀಕರ್ ಸೆಕ್ಷನ್‌ಗೆ ಸಹಾಯ ಮಾಡಬೇಕೆಂಬ ಬಗ್ಗೆ ನಿಮಗಿಂತ ಹೆಚ್ಚು ಆಸಕ್ತಿ ನಮಗೆ ಇದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ರೀತಿ ಮಾಡುತ್ತಾ ಹೋದರೆ ಇದು ಮುಗಿಯುವುದಿಲ್ಲ. ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೋ ಅದನ್ನು ಪೂರ್ಣವಾಗಿ ಕೇಳಿದ ಮೇಲೆ ವಿವರಣೆಗೆ ಅವಕಾಶ ಮಾಡಿಕೊಡಿ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಮಧ್ಯೆ ಮಧ್ಯೆ ಎದ್ದು ಪ್ರಶ್ನೆಗಳನು ಕೇಳಿದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ;...

ಉಪಾಧ್ಯಕ್ಷರು.—ಹಿರಿಯ ಸದಸ್ಯರಿದ್ದೀರಿ. ಈ ಸಭೆಯ ನಡವಳಿಕೆಯನ್ನು ಯಾವ ರೀತಿ ನಡೆಸಬೇಕೆಂಬುದು ನಮಗಿಂತ ನಿಮಗೆ ಚೆನ್ನಾಗಿ ಗೊತ್ತಿದೆ. ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ, ಪೂರ್ಣವಾಗಿ ಉತ್ತರವನ್ನು ಹೇಳಿದ ಮೇಲೆ ವಿವರಣೆಯನ್ನು ಕೇಳಿ. ಅದನ್ನು ಬಿಟ್ಟು ಹೀಗೆ ಮಧ್ಯೆ ಮಧ್ಯೆ ಎದ್ದು ನಿಂತು ಪ್ರಶ್ನೆಗಳನ್ನು ಕೇಳುವುದಕ್ಕೆ ನಾನು ಯಾವ ಸದಸ್ಯರಿಗೂ ಅವಕಾಶ ಮಾಡಿಕೊಡುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆಮೇಲೆ ಬೇಕಾದರೂ ಹೇಳಿ. ಅದಕ್ಕೆ ನನ್ನ ವಿರೋಧ ಏನೂ ಇಲ್ಲ.

SRI. A. LAKSHMISAGAR.—House sites for the rural poor: Number of houseless and siteless families identified as on 31-3-1983 is 12,59,000, No. of sites distributed upto 31-3-1982 is 9-67-866, No. of sites distributed during 1982–83 is 1,38,134, No. of sites programmed to be distributed during 1983–84 is 75,000 and budget provided is Rs. 72 lakhs, No. of sites during the last quarter between April to June 1983 is 14,522 and No. of sites distributed between January and June 1983 is 34,060. House sites have been distributed. So far it is targeted to cover a balance identified siteless families of 1·53 lakhs by 1984–85. ಅದನ್ನು ಬಿಟ್ಟು ಯಾವಾಗ ಮಾಡುತ್ತೀರಿ ? ಎಂಬುದಾಗಿ ಕೇಳಿದರೆ ಹೇಗೆ ?

ಶ್ರೀ ಧರ್ಮಸಿಂಗ್.—ಈ ಸದನದ ಸದಸ್ಯರಿಗೆ ಸ್ಪಷ್ಟವಾಗಿ ಅರ್ಥವಾಗಬೇಕಲ್ಲ.

SRI. A. LAKSHMISAGAR.—It is targeted to cover the identifie siteless families of 1·53 lakhs by 1984–85. Under People Housing scheme number of sites sanctioned since inception 1973–74 upto 31-3-1983 is 4,25,513 and number of houses completed upto 31-3-1982 is 2,89,023 and number of houses completed during 1982–83 is 54,436. 1981–82 ರಲ್ಲಿ ಒಂದು ಲಕ್ಷ ಮನೆಗಳನ್ನು ಮುಗಿಸಬೇಕೆಂದು ಹೇಳಿದರು. ಅದಕ್ಕೆ ಹಣವನ್ನು ಕೊಟ್ಟಿದ್ದು 1982–83 ರಲ್ಲಿ. ಅವರೆ 1982–83 ರಲ್ಲಿ ಏನು ಮಾಡಿದರು ಅಂದರೆ 1 ಲಕ್ಷದ 2 ಸಾವಿರ ಮನೆಗಳನ್ನು ಕಟ್ಟಬೇಕೆಂದು ತೀರ್ಮಾನವನ್ನೇನೋ ಮಾಡಿದರು. ಆದರೆ ಅದಕ್ಕಾಗಿ ಹಣವನ್ನು ಕೊಡಲಿಲ್ಲ. ಇದಕ್ಕಾಗಿ ಅವರು ಹೊರಡಿಸಿರತಕ್ಕಂತಹ ಆರ್ಡರ್ ಇಲ್ಲೇ ಇದೆ. ಆ ಆರ್ಡರ್‌ನಲ್ಲಿ ಎಲ್ಲೂ ಕೂಡ ಇದಕ್ಕಾಗಿ ಹಣವನ್ನು ಕೊಟ್ಟಿದ್ದೇವೆಂದು ಇದರಲ್ಲಿ ಇಲ್ಲ.

This order is dated 12-5-1982. It is as follows :—

"The Deputy Commissioners are requested to complete all preliminary items of work such as identification of beneficiaries, securing of sites, etc., for the completion of remaining 1,02,000 houses."

ದುಡ್ಡು ಕೊಡಬೇಕೆಂದು ಎಲ್ಲೂ ಇಲ್ಲ. ದುಡ್ಡು ಇರಲಿಲ್ಲ. ಆದರೆ ನಾವು 58 ಸಾವಿರ ಮನೆಗಳನ್ನು ಕಟ್ಟುವು ದಕ್ಕೆ ತೆಗೆದುಕೊಂಡಿದ್ದೇವೆ. ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1,02,000 ಮನೆಗಳನ್ನು ಕಟ್ಟುತ್ತೇವೆಂದು ಆಶ್ವಾಸನೆ ಕೊಟ್ಟಿರುವುದು ಚುನಾವಣೆಯ ಸಮಯದಲ್ಲಿ. ಅದನ್ನು ವಿವರಿಸುವುದಕ್ಕೆ ಸಮಯ ಇಲ್ಲ.

ಒಂದು ಲಕ್ಷ 20 ಸಾವಿರ ಮನೆಗಳನ್ನು ಕಂಪ್ಲೀಟ್ ಮಾಡಬೇಕಾಗಿದೆ. ಈ ವರ್ಷ ಅದನ್ನು ಪೂರ್ಣ ಮಾಡಲು ಯೋಚಿಸಿದ್ದೇವೆ.

ಶ್ರೀ ಧರ್ಮಸಿಂಗ್.—ತಾವು ಚುನಾವಣಾ ಸಮಯದಲ್ಲಿ ಇದರ ಬಗ್ಗೆ ಹೇಳಿದ್ದೀರಲ್ಲಾ ಸ್ವಾಮಿ,

ಶ್ರೀ ಎ. ಲಕ್ಷ್ಮೀಸಾಗರ್.—ನೀವೂ ಸಹ ಚುನಾವಣಾ ಸಮಯದಲ್ಲಿ ಏನು ಬೇಕಾದರೂ ಹೇಳಬಹುದು' ಹಾಗೆ ಹೀಗೆ ಅಂತ ಹೇಳಬಹುದು. ಜನತಾ ಹೌಸಸ್ ಬಗ್ಗೆ ನೀವೂ ಹೇಳಿದ್ದೀರ. ಅದನ್ನೆಲ್ಲಾ ಇಲ್ಲಿ ಹೇಳುವುದು ಇಮ್ಮೆಟೀರಿಯಲ್. ಆದರೆ ತಾವು ಹಿಂದೆ ದುಡ್ಡು ರಿಲೀಸ್ ಮಾಡಿರಲಿಲ್ಲ, ಈಗ ನಾವು ಮಾಡಿದ್ದೇವೆ.

ಶ್ರೀ ಧರ್ಮಸಿಂಗ್.—ಸ್ವಾಮಿ, ಪುನಃ ಅವರು ನ'ಮ್ಮ ಮೇಲೆ ಹೇಳುತ್ತಾರಲ್ಲಾ. ಅವರು ಹೇಳಿದರೆ ನಾವೂ ಸಹ ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು.—ಈವಾಗ ಇವೆಲ್ಲಾ ರನ್ನಿಂಗ್ ಕಾಮೆಂಟರಿ ಮಾಡುವುದು ಬೇಡ. ಮಾನ್ಯ ಮಂತ್ರಿ ಗಳು ತಮ್ಮ ಭಾಷಣವನ್ನು ಮುಗಿಸಿದ ಮೇಲೆ, ಆಮೇಲೆ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವರ್ಷ ನಾವು 58 ಸಾವಿರ ಮನೆಗಳನ್ನು ಕಟ್ಟಿಸಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಧರ್ಮಸಿಂಗ್.—ಸ್ವಾಮಿ, ಇದರ ಬಗ್ಗೆ ತಾವು 2 ಗಂಟೆ ಕಾಲ ಬೇಕಾದರೂ ಒಂದು ಡಿಬೇಟ್ ಇಡಿ. ನಾವು ಅದರ ಬಗ್ಗೆ ಸಲಹೆಗಳನ್ನು ಕೊಡುತ್ತೇವೆ.

MR. DEPUTY SPEAKER.—This is not the forum. ಮಧ್ಯೆ ಮಧ್ಯೆ ಈ ತರಹ ಮಾಡಬೇಡಿ. ಅವರು ಭಾಷಣವನ್ನು ಮುಗಿಸಲಿ.

ಶ್ರೀ ಎ. ಲಕ್ಷ್ಮೀಸಾಗರ್.—1982–83 ಕ್ಕೆ ಅವರು ಹಣವನ್ನು ಒದಗಿಸದೇ ಇದ್ದ ಕಾರಣ 1983–84 ಕ್ಕೆ ನಾವು ರಿಲೀಸ್ ಮಾಡಿ 58 ಸಾವಿರ ಜನತಾ ಮನೆಗಳನ್ನು ಕಟ್ಟಿಸಬೇಕೆನ್ನುವ ತೀರ್ಮಾನವನ್ನು ತೆಗೆದು ಕೊಂಡಿದ್ದೇವೆ. ಈ ಬಗ್ಗೆ ಈಗಾಗಲೇ ನಾವು 386 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಜೊತೆಗೆ 1981–82 ರ ಸೀರೀಸ್ ಏನು ಇದೆ ಆ ಮನೆಗಳನ್ನೂ ಸಹ ಕಟ್ಟುವುದಕ್ಕೆ 400 ಲಕ್ಷ ರೂಪಾಯಿಗಳನ್ನೂ ಬಿಡುಗಡೆ ಮಾಡಿದ್ದೇವೆ. 1981–82 ರಲ್ಲಿ ಸ್ಯಾಂಕ್ಷನ್ ಮಾಡಿರುವ ಮನೆಗಳಿಗೂ ಸಹ ಪೂರ್ತಿಯಾಗಿ ಹಣ ಕೊಟ್ಟಿರಲಿಲ್ಲ. ಇದುವರೆಗೆ ನಾವು ಒಟ್ಟು 786 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರೆ ಇದರ ಬಗ್ಗೆ ಬಡ್ಜೆಟ್ ಗ್ರಾಂಟ್ ಇರತಕ್ಕಂಥಾದ್ದು 11 ಕೋಟಿ 60 ಲಕ್ಷ. ಈಗ ಅದಕ್ಕಿಂತಲೂ ಜಾಸ್ತಿ ಹಣವನ್ನು ರಿಲೀಸ್ ಮಾಡಿದ್ದೇವೆ. ಹಿಂದೆ ಈ ಮನೆಗಳನ್ನು ಕಟ್ಟುವುದಕ್ಕೆ ಹಣ ಸ್ಯಾಂಕ್ಷನ್ ಮಾಡಿ ಆ ಮನೆಗಳು ಪೂರ್ಣ ಹಂತಕ್ಕೆ ಬಂದಿದ್ದರೂ ಕೂಡ ಮಳೆಯ ಪರಿಣಾಮವಾಗಿ ಕೆಲವು ಮನೆಗಳು ಬಿದ್ದುಹೋಗತಕ್ಕಂಥ ಸನ್ನಿವೇಶ ಇದ್ದುದ ರಿಂದ ಆ ಮನೆಗಳನ್ನು ಪೂರ್ಣಗೊಳಿಸುವುದಕ್ಕೆ ತಕ್ಷಣ ಇನ್ನಷ್ಟು ಹಣವನ್ನು ಬಿಡುಗಡೆ ಮಾಡಿದೆವು. ಮಾನ್ಯ ಸದಸ್ಯರಾದ ಪಂಪಾಪತಿಯವರು ಮತ್ತು ಸತ್ಯಮೂರ್ತಿಯವರು ಇನ್ನೂ ಇತರ ಸದಸ್ಯರು ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಹಿಂದೆ ಅವರು ಇದಕ್ಕೆ ಏನು ಬಡ್ಜೆಟ್ ಪ್ರಾವಿಜನ್ ಇಟ್ಟಿದ್ದರು ಅದರಲ್ಲಿ ಅರ್ಧಕ್ಕಿಂತ ಜಾಸ್ತಿ ನಾವು ಈಗಾಗಲೇ ಕೊಟ್ಟಿದ್ದೇವೆ. ಇನ್ನು ಸೆಪ್ಟಂಬರ್ ಮೂವತ್ತನೇ ತಾರೀಕು ಮುಗಿದ ಮೇಲೆ ಉಳಿದ ಹಣವನ್ನು ಕೊಡಲಾಗುತ್ತದೆ ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಒಟ್ಟು 30,579 ಮನೆಗಳನ್ನು ಕಟ್ಟಿದ್ದೇವೆ. ಅದರ ಬಗ್ಗೆ ಎಷ್ಟು ನಾವು ಅಲಾಟ್ ಮಾಡಿದ್ದೇವೆ, ನಮ್ಮ ಸಾಧನೆಯ ವಿವರಗಳನ್ನು ಹೇಳಬಯಸುತ್ತೇನೆ. ಅದು ಈ ರೀತಿ ಇದೆ.

Achievements for the period between January 1983 to June 1983 are as follows :—

Distribution of sites in urban areas : No. of sites distributed up to the end of 31-3-1982 under the scheme is 12,589, No. of sites distributed during 1982–83 is 13,759, No. of sites distributed during the last quarter April to June 1983 is 19,665, total 46,013. Programme for 1983–84 is 43,356 and budget provided is Rs. 54 lakhs. Under low cost housing, *i.e.*, Bhagya Mandir No. of houses sanctioned for the construction between 1979–82 is 25,075 and completed is 14,628 and

number of houses taken up for improvement is 11,146 (sanctioned) and completed is 8,033 and then programmed for 1983–84 for construction is 4,600 and improved is 2,000. Under tribal scheme number of houses sanctioned since inception is 6,610, No. completed is 4,668. Programme for 1983–84 is 850 lakhs, budget provided is Rs. 30 lakhs. Quarters for village level functionaries, No. of houses sanctioned is 5,550, revised cost per quarter is Rs. 20,000. No. of houses sanctioned is 5,550 and No. of houses taken up for construction is 1,173 and No. of houses completed is 200. ಇದೂ ಸಹ ಬಹಳ ಕಡಿಮೆ ಅನ್ನುವುದನ್ನು ನಾನೂ ಸಹ ಒಪ್ಪುತ್ತೇನೆ. ಇದರ ಬಗ್ಗೆ ಇನ್ನೂ ಜಾಸ್ತಿ ಪ್ರಮಾಣದಲ್ಲಿ ಮನೆಗಳು ಕಟ್ಟತಕ್ಕಂಥ ಮನಸ್ಸು ಇದೆ ಎನ್ನುವುದನ್ನು ಈ ಸಭೆಗೆ ತಿಳಿಸಲು ಇಷ್ಟಪಡುತ್ತೇನೆ.

ಮಾನ್ಯ ಉಪಾಧ್ಯಕ್ಷರೇ, ಇನ್ನೊಂದು ವಿಚಾರವನ್ನು ಈ ಸಭೆಗೆ ತಿಳಿಸಬೇಕಾದ್ದು ಆವಶ್ಯಕ ಇದೆ ಎಂದು ನನಗೆ ಅನಿಸಿದೆ. ಈ 58 ಸಾವಿರ ಮನೆಗಳು ಏನು ಇವೆ ಇದನ್ನು ಕಟ್ಟುವುದಕ್ಕೆ ಬೇಕಾದ ಹಣವನ್ನು ಈ 19 ಜಿಲ್ಲೆಗಳಿಗೆ ಒಟ್ಟು 386 ಲಕ್ಷ ರೂಪಾಯಿಗಳನ್ನು ಯಾವ ರೀತಿಯಾಗಿ ವಿತರಣೆ ಮಾಡಿದ್ದೇವೆ ಅನ್ನುವುದರ ಬಗ್ಗೆ ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿವರ ಈ ರೀತಿ ಇದೆ: ಬೆಂಗಳೂರು ಜಿಲ್ಲೆಗೆ 9 ಲಕ್ಷ, ಕೋಲಾರ ಜಿಲ್ಲೆಗೆ 12 ಲಕ್ಷ, ತುಮಕೂರು ಜಿಲ್ಲೆಗೆ 12 ಲಕ್ಷ, ಶಿವಮೊಗ್ಗ ಜಿಲ್ಲೆಗೆ 32 ಲಕ್ಷ, ಚಿತ್ರದುರ್ಗ ಜಿಲ್ಲೆಗೆ 20 ಲಕ್ಷ, ಮೈಸೂರು ಜಿಲ್ಲೆಗೆ 20 ಲಕ್ಷ, ಮಂಡ್ಯ ಜಿಲ್ಲೆಗೆ 20 ಲಕ್ಷ, ದಕ್ಷಿಣ ಕನ್ನಡ ಜಿಲ್ಲೆಗೆ 46 ಲಕ್ಷ, ಹಾಸನ ಜಿಲ್ಲೆಗೆ 25 ಲಕ್ಷ, ಚಿಕ್ಕಮಗಳೂರು ಜಿಲ್ಲೆಗೆ 20 ಲಕ್ಷ, ಬೆಳಗಾಂ ಜಿಲ್ಲೆಗೆ 15 ಲಕ್ಷ, ಧಾರವಾಡ ಜಿಲ್ಲೆಗೆ 20 ಲಕ್ಷ, ಬಿಜಾಪುರ ಜಿಲ್ಲೆಗೆ 12 ಲಕ್ಷ, ಕಾರವಾರ ಜಿಲ್ಲೆಗೆ 50 ಲಕ್ಷ, ಗುಲ್ಬರ್ಗಾ ಜಿಲ್ಲೆಗೆ 15 ಲಕ್ಷ, ಬೀದರ್ ಜಿಲ್ಲೆಗೆ 13 ಲಕ್ಷ, ರಾಯಚೂರು ಜಿಲ್ಲೆಗೆ 15 ಲಕ್ಷ, ಬಳ್ಳಾರಿ ಜಿಲ್ಲೆಗೆ 15 ಲಕ್ಷ. ಈ ರೀತಿ ಹಂಚಲಾಗಿದೆ. ಇವರಲ್ಲಿ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮಳೆ ಜಾಸ್ತಿ ಬೀಳತಕ್ಕಂಥ ಪ್ರದೇಶಗಳಿಗೆ ಸ್ವಲ್ಪ ಹೆಚ್ಚಿನ ಹಣವನ್ನು ಕೊಟ್ಟಿದ್ದೇವೆ. ಕಾರಣ ಎಲ್ಲಿ ಈ ಮಳೆಯಿಂದ ಕಟ್ಟಿದ ಮನೆಗಳು ಬಿದ್ದುಹೋಗುವ ಪರಿಸ್ಥಿತಿಯಾಗುತ್ತದೋ ಅನ್ನುವ ಕಾರಣದಿಂದ ಅಂಥ ಪ್ರದೇಶಕ್ಕೆ ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಮಳೆ ಕಡಿಮೆ ಬೀಳತಕ್ಕಂಥ ಪ್ರದೇಶಕ್ಕೆ ಸ್ವಲ್ಪ ಕಡಿಮೆ ಹಣವನ್ನು ಕೊಟ್ಟಿದ್ದೇವೆ. ಹಿಂದಿನ ಒಂದು ಅನುಭವದ ಮೇಲೆ ಕೊಟ್ಟಿದ್ದೇವೆ.

ಶ್ರೀ ಎಸ್. ಚಿಕ್ಕೇಗೌಡ.—ಹಾಗಾದರೆ ಕೋಲಾರಕ್ಕೆ ಕಡಿಮೆ ಹಣ ಕೊಟ್ಟಿದ್ದೀರಲ್ಲಾ. ಅಲ್ಲಿ ಮಳೆ ಜಾಸ್ತಿ ಎಂತಲೇ? ಕಡಿಮೆ ಎಂತಲೇ?

ಶ್ರೀ ಪಿ. ಲಕ್ಷ್ಮೀಸಾಗರ್.—ನಾನು ಎಲ್ಲವೂ ಹಾಗೆಯೇ ಇದೆ ಅಂತ ಹೇಳುವುದಿಲ್ಲ. ಹಿಂದಿನ ಒಂದು ಅನುಭವದ ಮೇಲೆ. ಮಳೆ ಬೀಳತಕ್ಕಂಥ ಒಂದು ಆಧಾರದ ಮೇಲೆ ಕೆಲವು ಕಡೆ ಜಾಸ್ತಿ ಕೊಟ್ಟಿದ್ದೇವೆ. ಇನ್ನು ಕೆಲವು ಕಡೆ ಕಡಿಮೆ ಹಣ ಕೊಟ್ಟಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ ಈಗ 386 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಉಳಿದ ಹಣವನ್ನು ಸೆಪ್ಟಂಬರ್ 30 ರ ನಂತರ ಕೊಡುತ್ತೇವೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ಒಂದು ಮಾತನ್ನು ಹೇಳಿದ್ದಾರೆ ಈ ಇಂಡಸ್ಟ್ರಿಯಲ್ ವರ್ಕರ್ಸ್‌ಗೆ ಹೋದ ವರ್ಷ 10 ಲಕ್ಷ ಇಟ್ಟಿದ್ದರು, ಈಗ ಅವರನ್ನು ಕೈಬಿಟ್ಟಿದ್ದೀರಿ. ಅವರಿಗೆ ಈಗ ಕೊಟ್ಟಿಲ್ಲ ಅನ್ನುವ ಮಾತನ್ನು ಹೇಳಿದ್ದಾರೆ. ಆದರೆ ನನಗೆ ಬಂದಿರುವ ವರ್ತಮಾನದ ಪ್ರಕಾರ ಹಿಂದೆ ಇವರಿಗೆ ಪ್ರತ್ಯೇಕವಾದ ಮನೆಗಳನ್ನು ಕಟ್ಟುವ ಒಂದು ವ್ಯವಸ್ಥೆ ಇದ್ದರೂ ಸಹ ಈಗ ಇವರು ಬೇರೆಬೇರೆ ಸ್ಕೀಮ್‌ಗಳಲ್ಲಿ ಅಂದರೆ ಎಲ್.ಐ.ಜಿ., ಇ.ಡಬ್ಲ್ಯು.ಎಸ್. ಇ.ಎಲ್.ಸಿ.ಹೆಚ್.ಎಸ್. ಈ ಸ್ಕೀಂಗಳಲ್ಲಿ ಮನೆಗಳನ್ನು ಕಟ್ಟುವ ಒಂದು ವ್ಯವಸ್ಥೆಯೂ ಇರುವುದರಿಂದ ನಾವು ಅವರಿಗೆ ಪ್ರತ್ಯೇಕವಾಗಿ ಹಣ ಇಟ್ಟಿಲ್ಲ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಒಂದು ಮಾತು ಹೇಳುತ್ತೇನೆ. ಇವರಿಗೆ ಮನೆಗಳು ಸಿಕ್ಕುವುದಿಲ್ಲ ಎಂದು ಏನಾದರೂ ತಾವು ತಿಳಿಸುವುದಾದರೆ ಅವರ ಬಗ್ಗೆ ನಾವು ತೆರೆದ ಮನಸ್ಸಿನಿಂದ ಇದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೆಲವು ವಿಚಾರಗಳಿಗೆ ನಾನು ಉತ್ತರ ಕೊಡಬೇಕಾದ್ದು ಇದೆ. ನಾನು ಈಗಾಗಲೇ ಮಾನ್ಯ ಧರ್ಮಸಿಂಗ್‌ರವರು ಕೇಳಿದ ವಿಚಾರಕ್ಕೆ ಉತ್ತರ ಹೇಳಿದ್ದಾಗಿದೆ. ಇನ್ನು ರಾಮಯ್ಯನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರ ಸಂಬಳದ ಬಗ್ಗೆ, ಅವರ ಸೌಲಭ್ಯದ ಬಗ್ಗೆ ಮತ್ತು ನ್ಯಾಯಾಧೀಶರಿಗೆ ಸಂಬಳ ಕಡಿಮೆಯಾಗಿದೆ ಅನ್ನುವುದರ ಬಗ್ಗೆ ಏನು ಹೇಳಿದ್ದಾರೆ ಆ ಮಾತನ್ನು ನಾವು ಒಪ್ಪಿಕೊಂಡರೂ ಕೂಡ ಈ ಒಂದು ವ್ಯವಸ್ಥೆಯನ್ನು ಮಾಡತಕ್ಕಂಥವರು ನಾವಲ್ಲ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

Sri. Mane told about the loss of time. This is an age old problem. I am not belittling it. I will convey the feelings of the Members of this august House to the quarters where it should be conveyed.

ಇನ್ನು ರೀಫಂಡ್ ಆಫ್ ಕೋರ್ಟ್ ಫೀಸ್ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ಇಷ್ಟು ಫ್ರೇಮ್ ಆದಮೇಲೆ ಹೈಕೋರ್ಟ್‌ನವರು ಇದರ ಬಗ್ಗೆ ಕಾಂಪ್ರಮೈಸ್ ಆದರೆ 75 ಪರ್ಸೆಂಟ್ ರೀಫಂಡ್ ಮಾಡಬೇಕು ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ನಾನೇನೂ ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಕೋರ್ಟಿನವರೇ ತೀರ್ಮಾನ ಮಾಡಬೇಕು. ಇದರ ಬಗ್ಗೆ ಕೋರ್ಟ್ ಫೀಸ್ ಆಕ್ಟ್ ಇದೆ. ಅದರ ಕಳವಳ ನನಗೂ ಗೊತ್ತು.

ಆಮೇಲೆ ಡಿಸ್ಟ್ರಿಕ್ಟ್ ಕೋರ್ಟುಗಳು ಮತ್ತು ಸೆಷನ್ ಕೋರ್ಟುಗಳನ್ನು ತಾಲ್ಲೂಕು ಲೆವೆಲ್‌ನಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ನಮಗೆ ತಾಲ್ಲೂಕು ಲೆವೆಲ್‌ನಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟುಗಳನ್ನು ಮಾಡುವ ಕೆಲಸ ಇನ್ನೂ ಪೂರ್ಣವಾಗಿಲ್ಲ ಎಂದು ಹೇಳಿ ಈ ಕೆಲಸವನ್ನು ಇನ್ನೂ ಮಾಡಿಲ್ಲ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. Let us see. It will take some time. I Would like to inform the Hon. Member Sri. Mane that suggestion made is taken note of. we will have to do this firstly in consultation with the High Court and secondly sufficient monies must be provided for this purpose.

Then he has also made a mention....all the judges and staff should have the knowledge of two languages. Then, the Hon. Member has also said about the certified copies. we are at it. We are discussing this matter with the High Court about the rule being amended. We will look into that aspect.

ಆಮೇಲೆ ಮಾನ್ಯ ಸದಸ್ಯರಾದ ನಾಯಕ್ ಅವರು ವಕೀಲರಿಗೆ ಕೊಡುವ ಭತ್ಯದ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಗಂಗಾಧರನ್ ಅವರು ಮನೆಗಳಿಗೆ ಆರು ಸಾವಿರ ರೂಪಾಯಿಗಳನ್ನು ಕೊಡಬೇಕು ಎನ್ನುವ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ವಿಚಾರ ಮಾಡೋಣ ಎನ್ನುವ ಮಾತನ್ನು ಹೇಳುತ್ತೇನೆ. ಆಮೇಲೆ ಸೈಟುಗಳನ್ನು ಆದಷ್ಟು ಬೇಗ ಕೊಡಬೇಕು ಎನ್ನುವ ಮಾತನ್ನೂ ಅವರು ಹೇಳಿದ್ದಾರೆ. ಆದಷ್ಟು ಬೇಗ ಕೊಡುವ ವ್ಯವಸ್ಥೆ ಮಾಡುತ್ತೇವೆ. ಆಮೇಲೆ ಹುಡ್ಕೋ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ನಾನು ಹೇಳುವುದೇನೆಂದರೆ. ಹುಡ್ಕೋದವರು ಯಾವ ಶರತ್ತನ್ನು ಹಾಕುತ್ತಾರೋ. ಮತ್ತು ಅವರು ಅಪ್ರೂವ್ ಮಾಡಿದಂತಹ ಸ್ಕೀಂಗಳನ್ನು ನಾವು ತೆಗೆದುಕೊಳ್ಳಬೇಕು. ಈ ಒಂದು ಶರತ್ತಿನ ಮೇಲೆ ಅವರು ನಮಗೆ ಹಣವನ್ನು ಕೊಡುತ್ತಾರೆನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇವರು ನಾವು ಸಿದ್ಧಪಡಿಸಿದಂಥ ಎಲ್ಲಾ ಸ್ಕೀಂಗಳು ಬೇಗ ಆಗಬೇಕು ಎನ್ನುವ ಆಧಾರವನ್ನಿಟ್ಟುಕೊಂಡು ಬೆಂಗಳೂರು ರೀಜನಲ್ ಆಫೀಸನ್ನು ಸ್ಥಾಪನೆ ಮಾಡಿ ಈಗಾಗಲೇ ಅವರು ಕಾರ್ಯಾರಂಭ ಮಾಡಿದ್ದಾರೆ. ಕ್ಸೆರಾಕ್ಸ್ ಕಾಪಿಗಳನ್ನು ಕೊಡುವ ವಿಚಾರವಾಗಿ ಹೇಳಿದ್ದಾರೆ, ಆಮೇಲೆ ಲೆಜಿಸ್ಲೇಚರ್ ಹೊರಗಡೆ ಮೈಕ್ ಹಾಕಬೇಕು ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದನ್ನು ಮಾನ್ಯ ಅಧ್ಯಕ್ಷರೇ ತೀರ್ಮಾನ ಮಾಡಬೇಕು. ಮಾನ್ಯ ಜಯಪ್ರಕಾಶ್ ನಾರಾಯಣ್ ಅವರ ಫೋಟೋ ಇಲ್ಲಿ ಹಾಕಬೇಕು ಎನ್ನುವ ಬಗ್ಗೆ ಕೆಲವರು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಮಾನ್ಯ ಪಂಪಾಪತಿಯವರು ಜನತಾ ಮನೆಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಮಾಡಬೇಕು ಎಂದು ಹೇಳಿದ್ದಾರೆ, ಇದಕ್ಕೆ ನಾವು 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತು ಇದರ ಜೊತೆಗೆ ಹದಿನಾರೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಸರ್ಕಾರದಿಂದ ಸಿಕ್ಕತಕ್ಕ ಸಾಲದ ಬಾಬತ್ತು, ಹುಡ್ಕೋದಿಂದ ಬರತಕ್ಕದ್ದು ಏನು ಇದೆಯೋ ಅದೆಲ್ಲಾ ಸೇರಿ ನಲವತ್ತೆರಡೂವರೆ ಲಕ್ಷ ರೂಪಾಯಿಗಳನ್ನು ಚಿತ್ರದುರ್ಗ ಜಿಲ್ಲೆಗೆ ಕೊಟ್ಟಿದ್ದೇವೆ. ಇದರಲ್ಲಿ ಮಾನ್ಯ ಪಂಪಾಪತಿಯವರಿಗೆ ಏಕೆ ಹಣ ಕೊಡಲಿಲ್ಲ ಎನ್ನುವ ಮಾಹಿತಿ ನನಗೆ ತಿಳಿದಿಲ್ಲ. ಆ ಜಿಲ್ಲೆಯಲ್ಲಿ 1845 ಮನೆಗಳನ್ನು ಕಟ್ಟುವುದಕ್ಕೆ ಅಡ್ವಾನ್ಸ್ ಸ್ಟೇಜಿನಲ್ಲಿಯೂ ಹಣ ಕೊಡಬೇಕು ಎಂದು ಕೇಳಿದ್ದಾರೆ. ಇದರ ಬಗ್ಗೆ ನಾನು ಅಧಿಕಾರಿಗಳನ್ನು ಕರೆಯಿಸಿ ಅವರ ಜೊತೆಯಲ್ಲಿ ಮಾತನಾಡಿ ಆದಷ್ಟು ಬೇಗ ಹಣವನ್ನು ರಿಲೀಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಪಂಪಾಪತಿ.—ಹೌಸಿಂಗ್ ಬೋರ್ಡ್ ಚೇರ್ಮನ್ ಆಗಿದ್ದವರು ಚಿತ್ರದುರ್ಗದವರು ಅವರು ಅಲ್ಲಿಂದೀ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ದಾವಣಗೆರೆಯಲ್ಲಿ ಅವರು ಒಂದು ಮನೆಯನ್ನೂ ಕಟ್ಟಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನೋಡೋಣ, ಆಮೇಲೆ ಮಾನ್ಯ ಸದಸ್ಯರಾದ ನಾಯಕ್‌ರವರು, ಮಂತ್ರಿಗಳು ಮಾತನಾಡುವುದಕ್ಕೆ ಸಿಕ್ಕುವುದಿಲ್ಲವೆಂದು ಹೇಳಿದ್ದಾರೆ, ಅಧ್ಯಕ್ಷರೇ, ನಾನು ವಿಧಾನಸೌಧಕ್ಕೆ ಬೆಳಿಗ್ಗೆ 9 ಗಂಟೆಗೆ ಬಂದರೆ ರಾತ್ರಿ 8 ಗಂಟೆಯುವರೆಗೂ ಇರುತ್ತೇನೆ. ನಾನು ಇವರಿಗೆ ಸಿಕ್ಕುವುದಿಲ್ಲವೆಂದರೆ ಬೇರೆ ಯಾವ ಮಂತ್ರಿಗಳು ಸಿಕ್ಕುತ್ತಾರೆ ?

ಶ್ರೀ ನಾಯಕ್.—ನಾನು ತಾವು ನಮಗೆ ಸಿಕ್ಕರೂ ಮಾತನಾಡುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅವರೊಂದಿಗೆ ಮಾತನಾಡುವುದಕ್ಕೆ ಸದಾ ಸಿದ್ಧನಿದ್ದೇನೆ. ನಾನು ಸಭೆಯಲ್ಲಿರುವಾಗ ಮತ್ತು ಬೇರೆ ಕೆಲಸದಲ್ಲಿರುವಾಗ ಮಾತ್ರ ಬಿಟ್ಟು ನಾನು ಆಫೀಸಿನಲ್ಲಿರುವಾಗ ಯಾವಾಗಲೂ ಬರುವುದಕ್ಕೆ ನಾವು ಬಾಗಿಲನ್ನು ಸದಾ ತೆರೆದಿರುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಎಲ್ಲರಿಗೂ ಹೀಗೆ ಹೇಳಿಬಿಟ್ಟರೆ ಹೇಗೆ, ಇಂಥ ಸಮಯಕ್ಕೆ ಬನ್ನಿ ಎಂದು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿದ ಉತ್ತರವನ್ನು ಅವರು ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗೆ ಸಂಬಂಧಪಟ್ಟಂತೆ ಸಭೆಯ ಮುಂದೆ ನಾನು ಪ್ರಸ್ತಾಪ ಮಾಡಿದ್ದೇನೆ, ಹಾಗೂ ಮಾನ್ಯ ಸದಸ್ಯರುಗಳು ವ್ಯಕ್ತಮಾಡಿದ ಎಲ್ಲಾ ಅಭಿಪ್ರಾಯಗಳಿಗೂ ಕೂಡ ಸಮಾಧಾನಕರವಾದ ಉತ್ತರವನ್ನು ಕೊಟ್ಟಿದ್ದೇನೆಂದು ನನಗೆ ನಂಬಿಕೆ ಇದೆ. ಆದ್ದರಿಂದ ಈ ಬೇಡಿಕೆಗಳಿಗೆ ತಾವು ಮಂಜೂರಾತಿಯನ್ನು ಕೊಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಮನೆಗಳನ್ನು ಕಟ್ಟುವ ಕಾರ್ಯಕ್ರಮಕ್ಕಾಗಿ ನಾವು 1981–82 ರಲ್ಲಿ 16 ಕೋಟಿ ರೂಪಾಯಿಗಳನ್ನು ಮಾಡಿದ್ದೇವೆ. 1982–83 ರಲ್ಲಿ 20 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ, ಅಲ್ಲದೆ ಪ್ರತಿ ತಾಲ್ಲೂಕಿನಲ್ಲಿಯೂ ಒಂದು ಸಾವಿರ ಮನೆಗಳನ್ನು ಕಟ್ಟಬೇಕು, ಪ್ರತಿ ಊರಿನಲ್ಲಿಯೂ ಹತ್ತು ಮನೆಗಳನ್ನು ಕಟ್ಟಬೇಕು ಎಂದು ನಾವು ನಿರ್ದಿಷ್ಟವಾಗಿ ಆದೇಶವನ್ನು ಕೊಟ್ಟಿರುತ್ತೇವೆ. ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೂ ಇದು ತಿಳಿದಿದೆ. ಈಗ ತಾವು ಇವುಗಳನ್ನು ಐಡೆಂಟಿಫೈ ಮಾಡಬೇಕು. 54 ಸಾವಿರ ಎಕರೆಯ ಮೇಲೆ ಜನತಾ ಮನೆಗಳನ್ನು ಕಟ್ಟಬೇಕು ಎಂದು ಈ ಜಮೀನನು; ನಮ್ಮ ಪೊಜಿಷನ್‌ಗೆ ತೆಗೆದುಕೊಂಡು ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಮತ್ತು ಹೈಕೋರ್ಟಿನಲ್ಲಿರುವ ಕೇಸುಗಳನ್ನು ಡಿಸ್ಪೋಸ್ ಮಾಡಬೇಕು ಎನ್ನುವುದಕ್ಕೆ ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. 1973 ರಲ್ಲಿ ಪ್ರಾರಂಭವಾದಂಥ ಈ ಯೋಜನೆಯಡಿಯಲ್ಲಿ 2·76 ಸಾವಿರ ಮನೆಗಳನ್ನು ಕಟ್ಟುವುದರಲ್ಲಿ 1·17 ಸಾವಿರ ಮನೆಗಳು ಇನ್‌ಕಂಪ್ಲೀಟ್ ಆಗಿದ್ದರೂ ಕೂಡ 1981–82 ರಲ್ಲಿ ಒಟ್ಟು 2·57 ಸಾವಿರ ಮನೆಗಳನ್ನು ನಾವು ಪೂರ್ಣಮಾಡಿದ್ದೇವೆ. ಇಷ್ಟು ಮನೆಗಳನ್ನು ಕಟ್ಟುವುದಕ್ಕೆ ನಾವು ನಮ್ಮ ಅವಧಿಯಲ್ಲಿ 26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎರಡನೆಯದಾಗಿ ಇಂಡಸ್ಟ್ರಿಯಲ್ ವರ್ಕರ್ಸ್ ಸಬ್ಸಿಡಿ ಸ್ಕೀಂಗಳನ್ನು ಪ್ರಾರಂಭ ಮಾಡಿ ಸುಮಾರು 2 ಲಕ್ಷ ರೂಪಾಯಿಗಳನ್ನು 1981–82 ರಲ್ಲಿಯೂ, 1982–83 ರಲ್ಲಿ 10 ಲಕ್ಷ ರೂಪಾಯೀಗಳನ್ನು ನಾವು ಕೊಟ್ಟಿದ್ದೇವೆ. ಇದನ್ನು ತಾವು ಮುಂದುವರಿಸಿಕೊಂಡು ಹೋಗಬೇಕಾಗಿತ್ತು. ವೀಕರ್ ಸೆಕ್ಷನ್ಸ್‌ನಲ್ಲಿ ಹಮಾಲರು ಎಂದು ಇದ್ದಾರೆ, ಇವರಿಗೆ ನಾವು ಬಿಜಾಪುರದಲ್ಲಿ 294 ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದೇವೆ. ದಾವಣಗೆರೆಯಲ್ಲಿ ಮಂಡಕ್ಕಿ ಭಟ್ಟಿಯಲ್ಲಿ ಕೆಲಸ ಮಾಡತಕ್ಕವರಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೆವು. ಅದನ್ನು ತಾವು ಮುಂದುವರಿಸಿಕೊಂಡು ಹೋಗಬೇಕು. ಆಮೇಲೆ ವಿಲೇಜ್ ಅಕೌಂಟೆಂಟರು ಏನು ಇದ್ದಾರೆ ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ 1982–83 ರಲ್ಲಿ ಸುಮಾರು 42 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಹುಡ್ಕೋ ಮತ್ತಿತರ ಸಂಸ್ಥೆಗಳೊಂದಿಗೆ ನಾವು ಮಾತನಾಡಿ ಸಾಕಷ್ಟು ಹಣವನ್ನು ಈ ಯೋಜನೆಗಳಿಗೆ ತಂದಿದ್ದೇವೆ. ಎಲ್ಲಾ ಕಡೆಯಲ್ಲಿ ಬಡವರಿಗೆ ಮನೆಗಳನ್ನು ಕಟ್ಟಬೇಕು, ಸೈಟುಗಳನ್ನು ಕೊಡಬೇಕು ಎಂದು ಅತಿ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿ ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. ತಾವು ವಿರೋಧ ಪಕ್ಷದಲ್ಲಿದ್ದಾಗ ಇದೇ ವಿಚಾರವನ್ನು ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಾತನಾಡುತ್ತಿದ್ದದ್ದು ಈಗ ಅಧಿಕಾರದಲ್ಲಿದ್ದು ಬಡವರಿಗೆ ಅನುಕೂಲ ಮಾಡತಕ್ಕ ರೀತಿಯಲ್ಲಿ ತಾವು ಏಕೆ ಪ್ರಯತ್ನ ಮಾಡಬಾರದು ಎಂದು ತಮ್ಮನ್ನು ಕೇಳುತ್ತಿದ್ದೇನೆ. ಇವತ್ತು ತಾವು ಅರ್ಬನ್ ಡೆವಲಪ್‌ಮೆಂಟನ್ನು ಬೇರ್ಪಡಿಸಿದ ಮೇಲೆ ಪಬ್ಲಿಕ್ ಗ್ರಿವನ್ಸಸ್, ಕೋರ್ಟು ಕಛೇರಿ ಎಲ್ಲಾ ಮಾಡಿದಿರಿ. ಇದನ್ನೆಲ್ಲಾ ಯಾರೂ ಕೇಳುವುದಿಲ್ಲ.. ಮುಖ್ಯವಾಗಿ ಬಡವರಿಗೆ ಸಹಾಯವಾಗತಕ್ಕ ಕಾರ್ಯಕ್ರಮವನ್ನು ಮುಂದುವರಿಸಬೇಕು. ಆ ಬಗ್ಗೆ ಚಿಂತನೆ ಮಾಡಬೇಕು. ಆದರೆ ಅಧಿಕಾರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಕೊಡುತ್ತಿಲ್ಲ, ಅವರನ್ನು ಪದೇ ಪದೇ ಕರೆಸಿ ಸಮಾಲೋಚನೆ ಮಾಡಿ ಇವರ ಬಗ್ಗೆ ಕಾಳಜಿ ವಹಿಸುವಂತೆ ಮಾಡಬೇಕು. ಈ ಕಾರ್ಯಕ್ರಮ ಶ್ರೀಮಾನ್ ದೇವರಾಜ ಅರಸ್ ಅವರ ಕಾರ್ಯಕ್ರಮ. ನಿನ್ನೆ ತಾನೇ ಶ್ರೀಮಾನ್ ದೇವರಾಜ ಅರಸ್ ಅವರ ದಿನಾಚರಣೆಯನ್ನು ಮಾಡಿದಿರಿ. ಪ್ರಧಾನ ಮಂತ್ರಿಗಳ 20 ಅಂಶಗಳ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಬೇಕು. ರಾಜ್ಯದಲ್ಲಿ ಬಡವರಿಗೆ ಅನುಕೂಲವಾಗತಕ್ಕ ಈ ಎಲ್ಲಾ

ಕಾರ್ಯಕ್ರಮಗಳನ್ನೂ ಮುಂದುವರೆಸಿಕೊಂಡು ಹೋಗಬೇಕು, ಹೋಗತಕ್ಕದ್ದರಲ್ಲಿ ಅನುಮಾನವಿದೆ. ಇದರ ಕಡೆ ಹೆಚ್ಚಿನ ಗಮನ ಕೊಟ್ಟು, ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಬೇಕು ಎಂದು ಹೇಳುತ್ತೇನೆ. ತಮ್ಮಿಂದ ನನಗೆ ಉತ್ತರ ಬೇಕಾಗಿಲ್ಲ. ಎಲ್ಲಾ ಹೇಳಿದ್ದೀರಿ. ಈಗ 8 ತಿಂಗಳಾಗಿದೆ. ಬಡವರಿಗೆ ಅನುಕೂಲವಾಗ ತಕ್ಕ ಕಾರ್ಯಕ್ರಮಗಳ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಇದರ ಕಡೆ ಹೆಚ್ಚಿನ ಗಮನ ಕೊಡಿ ಎಂದು ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಬಡವರ ಬಗ್ಗೆ ಈ ಸರ್ಕಾರಕ್ಕೆ ಕಾಳಜಿ ಇಲ್ಲ, ನಾವು ಚೆನ್ನಾಗಿ ಮಾಡಿದೆವು, ಜಾಸ್ತಿ ಹಣ ಖರ್ಚು ಮಾಡಿದ್ದೇವೆ ಎನ್ನುವ ಮಾತನ್ನು ನಾಲ್ಕೈದು ಸಲ ಪುನರುಚ್ಚಾರ ಮಾಡಿದ್ದಾರೆ, ಅದನ್ನು ಇಲ್ಲ ಎಂದು ಹೇಳೇ ಇಲ್ಲ. ಮತ್ತು ಈ ಹಿನ್ನೆಲೆಯಲ್ಲಿ ನೀವು ಕಡಿಮೆ ಹಣ ಇಟ್ಟಿದ್ದೀರಿ, ಬಡವರ ಬಗ್ಗೆ ಕಾಳಜಿ ಇಲ್ಲ, ಆಕಾಶ ಮಾತ್ರ ಅವರ ತಲೆ ಮೇಲೆ ಇರಬೇಕೇ, ಇವರಿಗೆ ಕಾಳಜಿ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ, ಟೀಕೆ ಮಾಡಿದರೆ ಮತ್ತೆ ವಾದವಿವಾದ ಬರುತ್ತದೆ. ಹಣದ ಮುಗ್ಗಟ್ಟಿನ ವಿಚಾರವನ್ನು ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ರೀಅಪ್ರೊಪ್ರಿಯೇಷನ್‌ಗೆ ಅವಕಾಶ ಉಂಟು, 11 ಕೋಟಿ 60 ಲಕ್ಷ ಇಟ್ಟಿದ್ದೇವೆ. ಅವರು 20 ಕೋಟಿ ಇಟ್ಟಿದ್ದೆವು ಎಂದು ಹೇಳಿದರು. ಬಡವರ ಬಗ್ಗೆ ನಮಗೆ ಚಿಂತನೆ ಏನೇನೂ ಕಡಿಮೆಯಾಗಿಲ್ಲ. ಅವರು ಬರೀ ಘೋಷಣೆಯ ಚಿಂತನೆ ಮಾಡಿದರೇ ಹೊರತು ನಿಜವಾಗಿಯೂ ಬಡವರಿಗೆ ಸಹಾಯ ಮಾಡುವುದಕ್ಕೆ ಅವರು ಏನೂ ಮಾಡಲಿಲ್ಲ.

ಶ್ರೀ ಧರ್ಮಸಿಂಗ್.—ಪರ್‌ಫಾರ್ಮೆನ್ಸ್ ಬಡ್ಜೆಟ್ ನಿಮ್ಮ ಮುಂದೆ ಇದೆ, ಅದನ್ನು ನೋಡಿ ಹೇಳಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನು ಕೋರ್ಟ್ ಕೇಸಸ್ ಬಗ್ಗೆ ಏನು ಮಾಡಿದ್ದಿರಿ ಎಂದು ಕೇಳಿದ್ದಾರೆ. 35,380 ಸೈಟುಗಳನ್ನು ಒಳಗೊಂಡಿರತಕ್ಕ ಕೇಸುಗಳು ಹೈಕೋರ್ಟಿನಲ್ಲಿವೆ. ಇದರ ಬಗ್ಗೆ ಸಂಬಂಧಪಟ್ಟವರೊಡನೆ ಮಾತನಾಡಿ ಈ ಕೇಸುಗಳನ್ನು ಬೇಗ ಇತ್ಯರ್ಥಮಾಡಬೇಕು ಎಂದು ಅವರಲ್ಲಿ ಮನವಿ ಸಲ್ಲಿಸಲಾಗಿದೆ. ಇವುಗಳನ್ನು ಪ್ರತ್ಯೇಕವಾಗಿ ತೆಗೆದುಕೊಂಡು ತೀರ್ಮಾನ ಮಾಡಬೇಕು ಎನ್ನತಕ್ಕಂಥ ಮನವಿಯನ್ನು ಸಲ್ಲಿಸಿದ್ದೇವೆ. ಆಮೇಲೆ ವಿಲೇಜ್ ಅಕೌಂಟೆಂಟ್ಸ್‌ಗೆ ನೀವು ಕೊಟ್ಟಿರತಕ್ಕ ಹಣ ಕಡಿಮೆ ಎಂದು ಹೇಳಿದ್ದಾರೆ, ಇದು ನಿಜ, ಇದನ್ನು ಜಾಸ್ತಿ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಆಮೇಲೆ ಬರೀ ಪಬ್ಲಿಕ್ ಗ್ರೀವನ್ಸಸ್ ಒಂದೇ ನೋಡಿಕೊಂಡಿದ್ದರೆ ಆಗುವುದಿಲ್ಲ, ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ಹೇಳಿದ್ದಾರೆ. ನಾವು ಎರಡನ್ನೂ ಮಾಡುತ್ತೇವೆ, ಅವರ ಸಲಹೆ, ಅಭಿಪ್ರಾಯ ಸದುದ್ದೇಶದಿಂದ ಕೂಡಿದೆ, ಅವರು ಹೇಳಿರತಕ್ಕ ಮಾತನ್ನು ಒಳ್ಳೆಯ ರೀತಿಯಲ್ಲಿ ಗ್ರಹಿಸುತ್ತೇನೆ, ಸಂಭಾವಿತ ರೀತಿಯಲ್ಲಿ ಅದನ್ನು ಗ್ರಹಿಸುತ್ತೇನೆ ಎನ್ನುವ ಮಾತನ್ನು ಮಾನ್ಯ ಧರ್ಮಸಿಂಗ್‌ರವರಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ತಾವು ಕೊಟ್ಟಂಥ ಅಂಕಿ ಅಂಶಗಳು ಇಲ್ಲಿವೆ ಜನತಾ ಗೃಹ ನಿರ್ಮಾಣ ಯೋಜನೆ ಬಗ್ಗೆ. ಇದರಲ್ಲಿ ಯಾವ ಆಧಾರದ ಮೇಲೆ ಜಿಲ್ಲಾವಾರು ಹಂಚಿದ್ದೀರಿ. ನೀವು ಉತ್ತರ ಕೊಡುತ್ತಾ ಮಳೆ ಹೆಚ್ಚಾಗಿರುವ ಕಡೆ ಹೆಚ್ಚು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಬೆಂಗಳೂರು ಜಿಲ್ಲೆ, ಕೋಲಾರ ಜಿಲ್ಲೆ, ಚಿತ್ರದುರ್ಗ ಜಿಲ್ಲೆಗಳಿಗೆ 9 ಲಕ್ಷ, 12 ಲಕ್ಷ, 30 ಲಕ್ಷ ಕೊಟ್ಟಿದೆಯೆಂದು ಹೇಳಿದಿರಿ. ಇದನ್ನು ಯಾವ ಆಧಾರದ ಮೇಲೆ ಕೊಟ್ಟಿರಿ, ಕೋಲಾರ ಚಿತ್ರದುರ್ಗ ಜಿಲ್ಲೆಗಳಲ್ಲಿ ಮಳೆ ಜಾಸ್ತಿ ಬರುತ್ತದೆ ಎನ್ನುವ ಕಲ್ಪನೆ ಏನಾದರೂ ತಮಗೆ ಇದೆಯೇ, ಯಾವ ಆಧಾರದ ಮೇಲೆ ಕೊಟ್ಟಿರಿ ಎಂದು ಕೇಳುತ್ತೇನೆ. ಎರಡನೆಯ ಪ್ರಶ್ನೆ ಏನೆಂದರೆ ಜನತಾ ಗೃಹನಿರ್ಮಾಣ ಯೋಜನೆಗೆ ಹಿಂದಿನ ಸರ್ಕಾರ 1 ಲಕ್ಷ 20 ಸಾವಿರ ಮನೆಗಳಿಗೆ ಮಂಜೂರಾತಿ ಕೊಟ್ಟರೂ ಹಣ ಕೊಟ್ಟಿಲ್ಲ ಎಂದು ತಾವು ಹೇಳಿದಿರಿ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿರತಕ್ಕಂಥದ್ದಕ್ಕೆ ಹಣ ಇಲ್ಲದೆ ಇದ್ದರೂ ಕೂಡ ಹಣ ಖರ್ಚು ಮಾಡಿರುವುದು ಇಲ್ಲವೇ ? ಹಳ್ಳಿಗಾಡಿನಲ್ಲಿ ಬಡವರಿಗೆ ಸೈಟುಗಳನ್ನು ಹಂಚಿರ ತಕ್ಕಂಥಾದ್ದು ಎಷ್ಟು.? ತಾಲ್ಲೂಕು ಮಟ್ಟದಲ್ಲಿ ನಾನೂ ಒಬ್ಬ ಅಧ್ಯಕ್ಷನಾಗಿದ್ದೇನೆ. 20 ಪಾಯಿಂಟ್ ಪ್ರೋಗ್ರಾಂ ಸಭೆಗೆ ಅಧ್ಯಕ್ಷನಾಗಿದ್ದೇನೆ, ಬೇರೆ ಎಲ್ಲಾ ಶಾಸಕರು ಇದ್ದಾರೆ. ಬಹುಶಃ ನಾಲ್ಕಾರು ಜಿಲ್ಲೆಗಳಲ್ಲಿ ಈ 7–8 ತಿಂಗಳಲ್ಲಿ ಎಲ್ಲೂ ಸೈಟುಗಳನ್ನು ಹಂಚಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ತಾವು ಕೊಟ್ಟಿರತಕ್ಕಂಥ ಅಂಕಿ ಅಂಶಗಳನ್ನು ನೋಡಿದರೆ ಎಲ್ಲೂ ಸೈಟುಗಳನ್ನು ಕೊಟ್ಟಿಲ್ಲ. ನಾವು 20 ಪಾಯಿಂಟ್ ಪ್ರೋಗ್ರಾಂ ಮೀಟಿಂಗ್‌ನಲ್ಲಿ ಸುಮ್ಮನೆ ಕುಳಿತುಕೊಂಡು ಎದ್ದು ಬರತಕ್ಕಂಥಾದ್ದು ನಡೆಯುತ್ತಾ ಇರುವುದು, ಇದು ವಾಸ್ತವಾಂಶ. ನಾನು ಒಬ್ಬ ಜವಾಬ್ದಾರಿ ಮನುಷ್ಯನಾಗಿ ಹೇಳುತ್ತಿದ್ದೇನೆ. ತಾವು ಈ 20 ಪಾಯಿಂಟ್ ಪ್ರೋಗ್ರಾಮನ್ನು ನ್ಯಾಷನಲ್ ಪ್ರೋಗ್ರಾಂ ಎಂದು ತಿಳಿದುಕೊಂಡಿದ್ದೀರೋ ಅಥವಾ ಶ್ರೀಮತಿ ಇಂದಿರಾ ಗಾಂಧಿಯವರು ವೈಯಕ್ತಿಕವಾಗಿ ಕೊಟ್ಟಿರತಕ್ಕ ಪ್ರೋಗ್ರಾಂ ಎಂದು ತಿಳಿದುಕೊಂಡಿದ್ದೀರೋ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ನಾನು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರಾದ ಚಿಕ್ಕೇಗೌಡರು ನಾನು ಪೂರ್ಣವಾಗಿ ಉತ್ತರ ಕೊಡತಕ್ಕ ಸಮಯದಲ್ಲಿ ಇದ್ದಹಾಗೆ ಕಾಣಲಿಲ್ಲ. ನಾವು ಯಾವ ಆಧಾರದ ಮೇಲೆ ಮಾಡಿದ್ದೇವೆ ಎನ್ನುವ ಆಧಾರವನ್ನು ಈಗಾಗಲೇ ಹೇಳಿದ್ದೇನೆ. ಅವರು ಕೇಳಿದಂಥ 234 ಲಕ್ಷ ರೂಪಾಯಿಗಳ ಪೂರ್ಣ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದೇನೆ. ಅವರ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಉತ್ತರ ಹೇಳಿದೆ. ಅವರು ಯಾವ ಆಧಾರದ ಮೇಲೆ ಕೊಟ್ಟಿರಿ ಎಂದು ಕೇಳಿದ್ದಾರೆ. ಮೊದಲನೇ ಆಧಾರ ಏನೆಂದರೆ. ಮಳೆ ಜಾಸ್ತಿಯಾಗಿ ಮನೆ ಹೆಚ್ಚಿನ ಮಟ್ಟಕ್ಕೆ ಬಂದು ಅಂದರೆ ಅಡ್ವಾನ್ಸ್ಡ್ ಸ್ಟೇಜಿಗೆ ಬಂದು ಬಿದ್ದುಹೋಗತಕ್ಕ ಪರಿಸ್ಥಿತಿ ಯಾವ ಜಿಲ್ಲೆಗಳಲ್ಲಿದೆಯೋ ಆಯಾ ಜಿಲ್ಲೆಗಳಿಗೆ ಸ್ವಲ್ಪ ಹೆಚ್ಚಿಗೆ ಕೊಟ್ಟಿದ್ದೇವೆ. ಇದು ಮೊದಲನೇ ಆಧಾರ. ಎರಡನೇ ಆಧಾರ ಅಂದರೆ, ಆ ಜಿಲ್ಲೆಯ ಡೆಪ್ಯುಟಿಕಮಿಷನರುಗಳಿಂದ ಮನೆಗಳು ಯಾವ ಯಾವ ಅಂತಸ್ತಿಗೆ ಬಂದಿವೆ ಎಂಬ ಮಾಹಿತಿಯನ್ನು ತಿಳಿದುಕೊಂಡು ಆ ಆಧಾರದ ಮೇಲೆ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಜಿಲ್ಲಾಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡು ಆ ಒಂದು ಆಧಾರದ ಮೇಲೆ ಹೇಳುತ್ತಾ ಇದ್ದೇನೆ. ಇನ್ನು ಸೈಟುಗಳನ್ನು ಎಲ್ಲೂ ಕೊಟ್ಟಿಲ್ಲ ಎಂದು ಮಾನ್ಯ ಚಿಕ್ಕೇಗೌಡರು ಹೇಳಿದರು. ಬಹುಶಃ ಮಾನ್ಯ ಚಿಕ್ಕೇಗೌಡರ ಕ್ಷೇತ್ರದಿಂದ ಹೇಳಿದರೆ ಅದಕ್ಕೆ ಕಿಂಚಿತ್ತಾದರೂ ಮಾನ್ಯತೆ ಕೊಡಬಹುದು. ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಸೈಟುಗಳನ್ನು ಕೊಟ್ಟಿಲ್ಲ ಅಂದರೆ ನಮಗೆ ಬಂದಿರತಕ್ಕ ವರದಿ ಪ್ರಕಾರ ನಾನು ಅಂಕಿಅಂಶಗಳನ್ನು ಇಟ್ಟಿದ್ದೇನೆ. ಮಾನ್ಯ ಸದಸ್ಯರ ಹತ್ತಿರ ಬೇರೆ ಏನಾದರೂ ಮಾಹಿತಿ ಇದ್ದರೆ ನನ್ನ ಹತ್ತಿರ ಕೊಡಿ. ತಪ್ಪು ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದರೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳೋಣ ಎನ್ನುವ ಮಾತನ್ನು ಮಾನ್ಯ ಚಿಕ್ಕೇಗೌಡರಿಗೆ ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್,—ನಾನು ನಾಲ್ಕೈದು ಪ್ರಶ್ನೆಗಳನ್ನು ಕೇಳಬೇಕಾಗಿದೆ. ಈ ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ನೋಡಿದರೆ ಎರಡು, ಮೂರು ಅಂಶಗಳ ಬಗ್ಗೆ ತಾವು ಹೇಳಬೇಕಾಗಿದೆ. ಒಂದನೆಯದು, ಹಿಂದಿನ ಪರ್‌ಫಾರ್ಮೆನ್ಸ್ ಆಗಿದ್ದರೆ ನೀವು ಹೇಗೆ ಉತ್ತರ ಕೊಡುವುದಕ್ಕೆ ಆಗುತ್ತದೋ ಗೊತ್ತಿಲ್ಲ. ಹಿಂದಿನ ಪರ್‌ಫಾರ್ಮೆನ್ಸ್ ಬಡ್ಜೆಟ್ ಕೊಟ್ಟಿರುವುದು 1983–84 ಆಗಿದ್ದರೂ ಇದರೊಳಗೆ ಪರ್‌ಫಾರ್ಮೆನ್ಸ್ ಕೊಟ್ಟಿರುವುದು 1981–82 ರವರೆಗೆ ಅಥವಾ 1982–83 ಕ್ಕೆ. 1981–82 ರಲ್ಲಿ ಏನು ನಡೆಯಲಿಲ್ಲವೋ ಅದನ್ನು 1982–83 ರಲ್ಲಿ ಸೇರಿಸಿಕೊಂಡಿದ್ದಾರ. ಇವರು ಬಂದಮೇಲೆ ಪರ್‌ಫಾರ್ಮೆನ್ಸ್ ಇದರೊಳಗೆ ಏನೂ ಇಲ್ಲ. ಹಿಂದಿನದು ಎಲ್ಲಾ ನೋಡಿದರೆ ಡಿಸ್ಮಲ್ ಪರ್‌ಫಾರ್ಮೆನ್ಸ್ ಇದು; ಮೋಸದ ಪರ್‌ಫಾರ್ಮೆನ್ಸ್ ಎಂದು ನನ್ನ ಅಭಿಪ್ರಾಯ. ಅದರ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶವಿಲ್ಲ, ನಾನು ಕಳೆದುಕೊಂಡಿದ್ದೇನೆ. ಆದರೆ ಒಂದು ಮಾತ್ರ ಹೇಳುತ್ತೇನೆ. ಈ ಪರ್‌ಫಾರ್ಮೆನ್ಸ್‌ನ್ನು ಪರಿಪೂರ್ಣವಾಗಿ ತಾವು ಪುನರ್ವಿಮರ್ಶೆ ಮಾಡಬೇಕಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಸಬ್ಸಿಡೈಸ್ ಇಂಡಸ್ಟ್ರಿಯಲ್ ಹೌಸಿಂಗ್ ಸ್ಕೀಂ ಬಗ್ಗೆ ತಾವು ಹೇಳಿದಿರಿ. ಇಲ್ಲಿ ನೋಡಿದರೆ ಒಂದು ವರ್ಷಕ್ಕೆ ಅಂದರೆ 1982–83 ಕ್ಕೆ 54 ಮನೆಗಳನ್ನು ಮಾತ್ರ ಕಟ್ಟಿದ್ದಾರೆ. ಇದರ ಬಗ್ಗೆ ನಮಗೆ ಉತ್ತರ ಕೊಡಬೇಕಾಗಿದೆ. ನೀವು ಬೇರೆ ಬೇರೆ ರೀತಿಯಲ್ಲಿ ಇ.ಡಬ್ಲ್ಯು.ಎಸ್. ಎಲ್ಲಾ ಸೇರಿ ಮಾಡುತ್ತೇವೆಂದು ಹೇಳಿದಿರಿ. ಆದರೆ ನಾನು ಕೇಳುವುದು ಏನೆಂದರೆ, ಸಬ್ಸಿಡೈಸ್ಡ್ ಇಂಡಸ್ಟ್ರಿಯಲ್ ಹೌಸಿಂಗ್ ಸ್ಕೀಂ ಸೆಂಟ್ರಲ್ ಗವರ್ನಮೆಂಟ್ ಸ್ಕೀಂ, ಅವರು ಅದಕ್ಕೆ ಸಬ್ಸಿಡಿ ಕೊಡುತ್ತಾರೆ. ಫ್ಯಾಕ್ಟರಿ ಮಾಲೀಕರುಗಳು ಯಾರೂ ಮನೆಗಳನ್ನು ಕಟ್ಟುವುದಕ್ಕೆ ತಯಾರಾಗಿಲ್ಲ. ಈ ಸಬ್ಸಿಡೈಸ್ಡ್ ಇಂಡಸ್ಟ್ರಿಯಲ್ ಪ್ಲಾಂಟೇಷನ್ ವರ್ಕರ್ಸ್‌ಗೆ ಮನೆಗಳನ್ನು ಕಟ್ಟುವುದಿಲ್ಲ, ಯಾರಿಗೂ ಕಟ್ಟುವುದಿಲ್ಲ. ಆದುದರಿಂದ ನನ್ನ ಸಲಹೆ ಏನೆಂದರೆ, ಮಾಲೀಕರ ಮೇಲೆ ಸೆಸ್‌ಹಾಕಿ. ಅವರು ಮನೆ ಕಟ್ಟಿಸಿಕೊಡಬೇಕು ಎಂದು ಕಂಡೀಷನ್ ಹಾಕಿ. ಆಮೇಲೆ ನೀವು ಲೈಸನ್ಸ್ ಕೊಡುತ್ತೀರಾ. ಈ ಒಂದು ಕಂಡೀಷನ್ ಹಾಕುತ್ತೀರಾ? ಇದು ಮೊದಲನೆಯದು.

ಈ ಸೆಸ್ಸನ್ನು ಫ್ಯಾಕ್ಟರಿಯಾಗಲೀ ಅಥವಾ ಇನ್ನು ಪ್ಲಾಂಟೇಷನ್ ಮಾಲೀಕರಿದ್ದರೆ ಅವರ ಮೇಲೆ ಹಾಕಿ ಮನೆಗಳನ್ನು ಕಟ್ಟುವುದಕ್ಕೆ ಅವರಿಂದ ವಸೂಲಿ ಮಾಡಿ. ಇದು ಕೇಂದ್ರದ ಗೃಹಮಂತ್ರಿಗಳವರ ಮತ್ತು ಗೃಹನಿರ್ಮಾಣ ಮಂತ್ರಿಯವರು ಯಾರಿದ್ದಾರೆ ಅವರ ಮುಂದೆ ಸಹ ಈ ಪ್ರಶ್ನೆ ಬಂದಿದೆ. ಆದುದರಿಂದ ಇದರ ಬಗ್ಗೆ ತಾವು ಏನು ಮಾಡುತ್ತಿದ್ದೀರಿ ಎನ್ನುವುದನ್ನು ನಾನು ಕೇಳ ಬಯಸುತ್ತಿದ್ದೇನೆ. ಇದು ಬಹಳ ಮುಖ್ಯವಾಗಿದ್ದು ಇದರ ಬಗ್ಗೆ ತಮ್ಮ ಪರ್‌ಫಾರ್ಮೆನ್ಸ್ ಡಿಸ್ಮಲ್ ಆಗಿದೆ ಎಂದು ಹೇಳಬೇಕಾಗಿದೆ. ಇದೇ ರೀತಿಯಲ್ಲಿ ಭಾಗ್ಯಮಂದಿರದಲ್ಲಿ conversion of thatched to tiled roof houses.... ಇದು ಒಂದು ಬಹಳ ಒಳ್ಳೆಯ ಯೋಜನೆ ಇದೆ. ಇದು ಬಡವರಿಗೆ ಬಹಳ ಅನುಕೂಲವಾಗತಕ್ಕ ಯೋಜನೆ ಇದೆ. ಇದರಿಂದ ಮುಖ್ಯವಾಗಿ ಹರಿಜನರಿಗೆ ಗಿರಿಜನರಿಗೆ ಅನುಕೂಲವಾಗುವ ಯೋಜನೆಯಾಗಿದೆ. ಇದು 1982 ನೇ ಇಸ್ವಿಯಲ್ಲಿ ಶುರುವಾಗಿರಬಹುದು. ಆದರೆ 1983 ರಲ್ಲಿ ಯಾವ ಕೆಲಸವೂ ಆಗಿಲ್ಲ. 5 ಸಾವಿರ ಮನೆಗಳಿಗೆ ಮಾತ್ರ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಇದಕ್ಕಿಂತ ಹೆಚ್ಚಿನ ರೀತಿಯಲ್ಲಿ ಮಾಡುವುದಕ್ಕೆ

ತಾವು ಕಾಳಜಿ ವಹಿಸಬೇಕು. ಇದು ಬಹಳ ಮುಖ್ಯವಾದುದು. ಆದುದರಿಂದ ಇದರ ಬಗ್ಗೆ ತಾವು ಏನು ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದೀರಿ ಎಂಬುದರ ಬಗ್ಗೆ ಉತ್ತರ ನೀಡಬೇಕು.

ಇನ್ನು ಮುನ್ನಡೆ ಸ್ಕೀಂ ಎಂದು ಇದೆ. ಅದನ್ನು ಹಿಂದಿನವರು ಮಾಡಿರಬಹುದು. ಆದರೆ ಆ ಮುನ್ನಡೆ ಸ್ಕೀಂ ಏನಿದೆ ಅದು ಹಿನ್ನಡೆ ಆಗಿದೆ. ಇದರಲ್ಲಿ 2.799 ಜನರಿಗೆ ಮಾತ್ರ ಬೆನಿಫಿಟ್ ಆಗಿದೆ. ಈ ಸ್ಕೀಂ ಬಹಳ ಒಳ್ಳೆಯದು.

ಉಪಾಧ್ಯಕ್ಷರು.— ಇದು ಅವರಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲ.

ಶ್ರೀ ಎಂ.ಎಸ್. ಕೃಷ್ಣನ್.— ಇದು ಅವರಿಗೆ ಬರುವುದಿಲ್ಲವೇ ಹಾಗಿದ್ದರೆ ಅದನ್ನು ಬಿಟ್ಟುಬಿಡುತ್ತೇನೆ. ಇನ್ನು ಕೊನೆಯದಾಗಿ, ಮಾಸ್ಟರ್ ಹೌಸಿಂಗ್ ಕಟ್ಟಡಗಳನ್ನು ಕಟ್ಟುವ ಬಗ್ಗೆ ಇವತ್ತಿನ ದಿವಸ ಮಾತನಾಡುತ್ತಾ ಅದರ ಗಾತ್ರ ಪ್ರಮಾಣ ಎಲ್ಲಾ ಹೇಳಿದ್ದಾರೆ. ಇದಕ್ಕೆ 190 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಆದರೆ ಅದನ್ನು ಯಾವ ರೀತಿಯಾಗಿ ಮಾಡುತ್ತಾರೆ, ಯಾವ ರೀತಿಯಾಗಿ ಹಣ ಪಡೆದುಕೊಳ್ಳುತ್ತಾರೆಂಬುದರ ಬಗ್ಗೆ ಹೇಳಿಲ್ಲ. ಅದಕ್ಕೆ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಅದು ಏನೆಂದರೆ ಮೊದಲನೆಯದಾಗಿ, ನಾನು ಆಗಲೇ ಹೇಳಿದ ಹಾಗೆ 5–10 ಪರ್ಸೆಂಟ್ ಸಬ್ಸಿಡಿ ಸೆಸ್ಸನ್ನು ಫ್ಯಾಕ್ಟರಿ ಮಾಲೀಕರಿಂದ ವಸೂಲಿ ಮಾಡುವ ಬಗ್ಗೆ ಪ್ರಯತ್ನ ಮಾಡುವುದು. ಎರಡನೆಯದಾಗಿ ರಿಜರ್ವ್ ಬ್ಯಾಂಕ್‌ನವರಿಗೆ ಗೈಡ್‌ಲೈನ್ಸ್ ಇಶ್ಯೂ ಮಾಡಿ ಕಮರ್ಷಿಯಲ್ ಬ್ಯಾಂಕ್‌ನಿಂದ ಹಣಪಡೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುವುದು, ಮೂರನೆಯದಾಗಿ ಎಲ್.ಐ.ಸಿ.ಯಿಂದ ಮತ್ತು ಯೂನಿಟ್ ಟ್ರಸ್ಟ್ ಆಫ್ ಇಂಡಿಯಾದವರಿಂದ ಹೆಚ್ಚಿನ ರೀತಿಯಲ್ಲಿ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ? ನಾಲ್ಕನೆಯದಾಗಿ ಮುದ್ರೋ ಯೋಜನೆಗೆ ಫಿನಾನ್ಸ್ ಹೌಸಿಂಗ್ ಕಾರ್ಪೊರೇಷನ್ನಿನಿಂದ ಬರುತ್ತಿರುವುದರಿಂದ ಇಂಟ್ರೆಸ್ಟ್ ರೇಟ್ ಜಾಸ್ತಿಯಾಗಿದೆ. ಇದರಲ್ಲಿ ಪ್ರೊಸೀಜರಲ್ ಡಿಫೆಕ್ಟ್ಸ್ ಇವೆ, ಇದನ್ನು ಸರಿಪಡಿಸುತ್ತೀರಾ ಎಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳನ್ನು ನಾನು ಗಮನದಲ್ಲಿಟ್ಟುಕೊಂಡಿರುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಕೃಷ್ಣನ್‌ರವರಿಗೆ ಹೇಳಬೇಕು ಎಂದರೆ... Subsidised Housing Scheme has been discontined by the Government of India. Earlier, the Government of India was providing 50% of the cost of the house as subsidy. This has been discontinued.

SRI. M. S. KRISHNAN.—Why not you compel the employers to construct the houses?

SRI. A. LAKSHMISAGAR.—I will consider that suggestion.

ಶ್ರೀ ಬಿ. ಭೈರಪ್ಪಾಜಿ.—ಜನವರಿ ತಿಂಗಳಿಂದ ಇಲ್ಲಿಯವರೆಗೆ ಸೈಟುಗಳನ್ನು ಹಂಚೇ ಇಲ್ಲ, ಆದುದರಿಂದ ಐಡೆಂಟಿಫೈ ಮಾಡಿರುವ ಪ್ರಕಾರ ಅಥವಾ ಗಣತಿ ಆಗಿರುವ ಪ್ರಕಾರ ಸೈಟುಗಳನ್ನು ಹಂಚುವುದಕ್ಕೆ ನಿರ್ದಿಷ್ಟವಾದ ಆದೇಶವನ್ನು ನೀಡುತ್ತೀರಾ? ಎರಡನೆಯದಾಗಿ ಮಳೆ ಬರುತ್ತಿರುವುದರಿಂದ ಅನೇಕ ಮನೆಗಳು ಬಿದ್ದುಹೋಗುತ್ತಿವೆ, ಅದಕ್ಕೋಸ್ಕರ ತಾಲ್ಲೂಕು ಬೋರ್ಡ್‌ನಲ್ಲಿ ಹಣವಿರುತ್ತದೆ, ಅಂಥಾ ಕಡೆಯಲ್ಲಿಯಾದರೂ ಹಣವನು ಒದಗಿಸಿಕೊಟ್ಟು ಆ ಮನೆಗಳನ್ನು ಪೂರ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಸೈಟ್‌ಗಳ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. 1984–85 ರೊಳಗೆ 1·53 ಲಕ್ಷ ಸೈಟ್‌ಗಳನ್ನು ಹಂಚಬೇಕೆಂದು ನಮ್ಮ ಟಾರ್ಜೆಟ್ ಇದೆ. ಅವುಗಳನ್ನು ಆದಷ್ಟು ಬೇಗ ಸೈಟ್ ಇಲ್ಲದವರಿಗೆ ಒದಗಿಸಿಕೊಡಬೇಕು ಎನ್ನತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಇನ್ನು ಎರಡನೆಯದಾಗಿ, ಟಿ.ಡಿ.ಬಿ.ಯಲ್ಲಿ ಹಣವಿದೆ. ಅದನ್ನು ತೆಗೆದುಕೊಡುತ್ತೇವೆಂದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಕೊಡಲೇಬೇಕಾದಂಥ ಹಣವನ್ನು ಸೆಪ್ಟೆಂಬರ್ ಮುಗಿದ ತಕ್ಷಣವೇ ಕೊಟ್ಟು ಪೂರ್ತಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬಹಳ ದಿವಸಗಳಿಂದಲೂ ಹುಬ್ಬಳ್ಳಿ–ಧಾರವಾಡದಲ್ಲಿ ಒಂದು ಹೈಕೋರ್ಟ್ ಬೆಂಚನ್ನು ಕೊಡುವ ಬಗ್ಗೆ ಸರ್ಕಾರದ ಮುಂದೆ ಬೇಡಿಕೆ ಇತ್ತು, ಅದು ಈಗ ಯಾವ ಸ್ಟೇಜ್‌ನಲ್ಲಿದೆ? ಮತ್ತು ಜನತಾ ಹೌಸಿಂಗ್ ಸ್ಕೀಂನಲ್ಲಿ ಯಾವ ರೀತಿಯಾಗಿ ಅಲಾಟ್‌ಮೆಂಟ್ ಮಾಡಿದ್ದೀರಿ ಎಂಬುದು ಗೊತ್ತಾಗಲಿಲ್ಲ. ಮಳೆ ಆಧಾರದ ಮೇಲೆ ಕೊಟ್ಟಿದ್ದೇವೆಂದು ತಾವು ಹೇಳಿದಿರಿ, ಆದರೆ ನಮ್ಮ ಬಿಜಾಪುರ ಜಿಲ್ಲೆಗೆ 12 ಲಕ್ಷ ಕೊಟ್ಟಿದ್ದೀರಿ, ಇದು ಅನ್‌ಪ್ರೊಪೋರ್ಷನೇಟ್ ಅಲಾಟ್‌ಮೆಂಟ್ ಆಗಿರುವುದರಿಂದ ಇದನ್ನು ರಿಅಲೋಕೇಷನ್ ಮಾಡುವುದಕ್ಕೆ ಏನಾದರೂ ಅರೇಂಜ್‌ಮೆಂಟ್ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಹಣ ಕೊಟ್ಟಿರತಕ್ಕದ್ದು ಇದು ಕೊನೇ ತೀರ್ಮಾನವೇನೂ ಅಲ್ಲ. ಎಲ್ಲೆಲ್ಲಿ ಎಷ್ಟೆಷ್ಟು ಮನೆಗಳು ಯಾವಯಾವ ಹಂತಕ್ಕೆ ಬಂದಿವೆ ಎನ್ನತಕ್ಕ ಮಾಹಿತಿಯನ್ನು ಜಿಲ್ಲಾಧಿಕಾರಿಗಳವರಿಂದ ತರಿಸಿಕೊಂಡು ಅದರ ಆಧಾರದ ಮೇಲೆ ಕೊಟ್ಟಿದ್ದೇವೆ ಎನ್ನತಕ್ಕ ಮಾತನ್ನು ಈಗಾಗಲೇ ಹೇಳಿದ್ದೇನೆ. ಇನ್ನು ಹುಬ್ಬಳ್ಳಿ–ಧಾರವಾಡದಲ್ಲಿ ಒಂದು ಹೈಕೋರ್ಟ್ ಬೆಂಚ್ ಬಂದರೆ ನನ್ನದೇನೂ ಅಭ್ಯಂತರವಿಲ್ಲ ಎನ್ನತಕ್ಕ ಮಾತನ್ನೂ ಸಹ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಶಾಸಕಾಂಗ ಸ್ವತಂತ್ರವಾಗುವ ಬಗ್ಗೆ ಬಹಳ ಪ್ರತಿಪಾದನೆ ಮಾಡಿದವರು ತಾವು. ಇದಕ್ಕೆ ಆರ್ಟಿಕಲ್ 154 ವಿರುದ್ಧವಾಗುತ್ತದೆ. ಅದು ಆಗಬಾರದೆಂದು ಅಡ್ಡಕಟ್ಟೆ ಹಾಕಿದ್ದಾರೆ. ಅದನ್ನು ಬಿಡಿಸತಕ್ಕ ರಾಜಕೀಯ ಇಚ್ಛಾಶಕ್ತಿ ಮೊಟಕಾಗುತ್ತಿದೆ. ಇದನ್ನು ಯಾವಾಗ ಮಾಡಿಕೊಡುತ್ತೀರಿ ? ಪೀಪಲ್ಸ್ ಹೌಸಿಂಗ್ ಪ್ರೋಗ್ರಾಂ ಮತ್ತು ಬಡವರಿಗೆ ಮನೆ ಕಟ್ಟುವ ಯೋಜನೆಗೆ 1973–74 ರಿಂದ ನಮ್ಮ ಕಾಲದವರೆಗೆ 76 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಹಿಂದೆ ಅದರ ಬಗ್ಗೆ ಆಲೋಚನೆ ಮಾಡಿರಲಿಲ್ಲ. ಆದರಲ್ಲಿ ನಾವು 3 ವರ್ಷಗಳಲ್ಲಿ 47 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇದರ ಬಗ್ಗೆ ನೀವು ಈ ಸಾರಿ ಬಹಳ ಕಡಿಮೆ ಖರ್ಚು ಮಾಡಿದ್ದೀರಿ. ಬಡವರಿಗೆ ಮನೆಗಳನ್ನು ಕಟ್ಟಿಕೊಡುವ ಕಾರ್ಯಕ್ರಮದಲ್ಲಿ ನಿಮಗೆ ವಿಶ್ವಾಸ ಇಲ್ಲವೆಂದು ಕಂಡುಬಂದಿದೆ. ವೀಕರ್ ಸೆಕ್ಷನ್ಸ್‌ಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಜವಾಬ್ದಾರಿ ನಮಗೆ ಬಂದಿದೆ. ಏಕೆಂದರೆ ಇಂಡಸ್ಟ್ರಿಯಲ್ ಕಾರ್ಯಕ್ರಮದಲ್ಲಿ ಸೆಂಟ್ರಲೈಸ್ಡ್ ಸ್ಪಾನ್ಸರ್ಡ್ ಸ್ಕೀಂಗಳು ಎಲ್ಲ ಸ್ಟೇಟ್ ಗೌರ್ನ್‌ಮೆಂಟ್‌ಗಳಿಗೆ ಹೋದದ್ದರಿಂದ ಈ ರೀತಿ ಆಗಿದೆ. ಅದಕ್ಕಾಗಿ ಎರಡುವರ್ಷಗಳಿಂದ ಬಡವರಿಗೆ ಮತ್ತು ಇಂಡಸ್ಟ್ರಿಯಲ್ ವರ್ಕರ್ಸ್‌ಗೆ ಮನೆ ಕಟ್ಟಿಕೊಡುವ ಸಲುವಾಗಿ ನಾವು ಬಡ್ಜೆಟ್ಟಿನಲ್ಲಿ ಸಬ್ಸಿಡಿ ಪ್ರೊವೈಡ್ ಮಾಡಿದ್ದವು ಕಳೆದ ವರ್ಷ 10 ಲಕ್ಷ ರೂಪಾಯಿಗಳನ್ನು ಇಂಥ ಸಬ್ಸಿಡಿ ಸ್ಕೀಂಗಳಿಗೆಂದು ಏನು ಬಡ್ಜೆಟ್‌ನಲ್ಲಿ ಸೇರಿಸಿದ್ದವು ಅದನ್ನು ನೀವು ತೆಗೆದುಹಾಕಿದ್ದೀರಿ. ಬಹುಶಃ ನಿಮಗೆ ಇಂಡಸ್ಟ್ರಿಯಲ್ ವರ್ಕರ್ಸ್ ಮೇಲೆ ವಿಶ್ವಾಸ ಇಲ್ಲವೆಂದು ಕಾಣುತ್ತದೆ. ಇನ್ನು ಮುಂದೆ ಅಲ್ಲಲ್ಲಿ ಕೊಡುತ್ತೇವೆಂದು ಹೇಳತಕ್ಕ ಹಾರಿಕೆ ಮಾತು ಏನಿದೆ ಅದರಿಂದ ತೃಪ್ತಿಯಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅವರಿಗೆ ಉತ್ತರ ಹೇಳಬಲ್ಲೆ. ಆದರೆ ಇದು ಕ್ಲಾರಿಫಿಕೇಷನ್. ಶ್ರೀ ರಾಮಕೃಷ್ಣ ಹೆಗಡೆಯವರು ಹಿಂದೆ ಮಂತ್ರಿಗಳಾಗಿದ್ದರು. ಆಗ ಅವರು ಮನೆಗಳನ್ನು ಕಟ್ಟಿಸಿಕೊಟ್ಟರೆ ಎಂದು ಕೇಳಬಹುದು. ಆದರೆ ಅದೆಲ್ಲ ಈಗ ಬರುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ, ವಿಧಾನ ಮಂಡಲದ ಕಾರ್ಯಾಲಯವನ್ನು ಸ್ವತಂತ್ರ ಅಂಗವಾಗಿ ಮಾಡಬೇಕೆಂದು ತೀರ್ಮಾನಿಸಿದ್ದೇವೆ. ಆದ್ದರಿಂದ ಹಿಂದೆ ಹೋಗತಕ್ಕದ್ದು ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವಾಗ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಯಾವಾಗ ಮಾಡುತ್ತೀರೆಂದು ಕೇಳುವುದಕ್ಕೆ ಇವರಿಗೆ ನೈತಿಕ ಹಕ್ಕು ಇಲ್ಲ. ಕಳೆದ 35 ವರ್ಷಗಳಿಂದ ಒಂದೇ ಸಮನೆ ಅಧಿಕಾರದಲ್ಲಿದ್ದು ಇವರ ಕೈಯಲ್ಲಿ ಮಾಡುವುದಕ್ಕಾಗಿಲ್ಲ. ನಾವು ಮೇ ತಿಂಗಳಿನಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ ಮತ್ತು ಆ ತೀರ್ಮಾನದಿಂದ ಹಿಂದೆ ಹೋಗುವುದಿಲ್ಲವೆಂದು ಹೇಳಿದ್ದೇನೆ. ಅದಕ್ಕೆ ಎಷ್ಟು ವೆಚ್ಚ ತಗಲುತ್ತದೆ ಎಂಬುದನ್ನೆಲ್ಲಾ ಲೆಕ್ಕ ಹಾಕುತ್ತಿದ್ದೇವೆ. ಒಟ್ಟಿನಲ್ಲಿ ಆದಷ್ಟು ಜಾಗ್ರತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾವು ಅಧಿಕಾರದಲ್ಲಿರುವಾಗ ಮಾಡುತ್ತೀರಾ ಅಥವಾ ಅಧಿಕಾರದಿಂದ ಹೋದಮೇಲೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ದಿನ, ವಾರ ಕೊಡುವುದಿಲ್ಲ. ಇವರು 35 ವರ್ಷಗಳ ಕಾಲ ಮಾಡದೆ ನೆನೆಗುದಿಗೆ ಬಿದ್ದ ವಿಚಾರದ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಆ ತೀರ್ಮಾನವನ್ನು ಬಿಟ್ಟು ಹೋಗುವುದಿಲ್ಲ. ಹೇಗಾದರೂ ಮಾಡಿ ನಾವು ತೆಗೆದುಕೊಂಡ ತೀರ್ಮಾನದಂತೆ ನಡೆದುಕೊಳ್ಳುತ್ತೇವೆ. ತತ್ಸಂಬಂಧವಾಗಿ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ. ತಾರೀಖು ವಾರ ಹೇಳುತ್ತೀರಾ ಅಂದರೆ ಆಗುವುದಿಲ್ಲ. ನಾನು ಈ ಬಗ್ಗೆ ಪದೇ ಪದೇ ಹೇಳಿದ್ದೇನೆ. ಇನ್ನು ನಮ್ಮ ಹತ್ತಿರ ಹಣ ಎಷ್ಟಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮನೆ ಕಟ್ಟುವುದಾಗಿ ಹೇಳಿದ್ದೇವೆ. ಹಿಂದಿನ ಸರ್ಕಾರದವರು ಇದಕ್ಕೆ ಕಾರಣವೆಂದರೆ ರಾಜಕೀಯ ಎನ್ನುತ್ತಾರೆ. ಅದನ್ನು ನಾನು ಪ್ರಸ್ತಾಪ ಮಾಡುವುದಿಲ್ಲ ಎಂದರೆ, ನಿಮಗೆ 20 ಅಂಶಗಳ ಕಾರ್ಯಕ್ರಮದ ಮೇಲೆ ನಂಬಿಕೆ ಇಲ್ಲವೆಂದು ಅವರು ಹೇಳಿದರೆ ಅದು ಶುದ್ಧ ಒರಟು ಮಾತು. ಏಕೆಂದರೆ ನಾವು ಯಾವತ್ತೂ ಇಲ್ಲವೆಂದು ಹೇಳಿಲ್ಲ. ಆರ್ಥಿಕ ಮುಗ್ಗಟ್ಟಿನಿಂದಾಗಿ ಕಾರ್ಯಕ್ರಮ ಹಾಕಿಕೊಳ್ಳದೆ ಇರಬೇಕಾಗಿ ಬಂತು. ಅದಕ್ಕೆ ಭಾಗಶಃ ಹಣದ ಮುಗ್ಗಟ್ಟೇ ಕಾರಣವೆಂದು ಹೇಳಿದರೆ ರಾಜಕೀಯವೆಂದು ತಿಳಿದುಕೊಳ್ಳಬಾರದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರಿಗೆ ಇದಕ್ಕಿಂತ ಹೆಚ್ಚಾಗಿ ಕಳವಳ ಇದೆ. ನಾವೆಲ್ಲ ಬಡವರ ಕಡೆಯಿಂದ ಬಂದವರು. ಅವರು ಇಂದಿರಾ ಗಾಂಧಿಯ ಹೆಸರು ಹೇಳಿಕೊಂಡು ರಾಜಕೀಯ ಮಾಡುತ್ತಿದ್ದಾರೆ.

ಶ್ರೀ ಧರ್ಮಸಿಂಗ್.—ಚಿಕ್ಕಪೇಟೆಯಲ್ಲಿ ಬಡವರು ಯಾರಿದ್ದಾರೆ ?

ಶ್ರೀ ಎ. ಲಕ್ಷ್ಮೀಸಾಗರ್.—ನಿಮಗೆ ಗೊತ್ತಿಲ್ಲ. ಜೇವರ್ಗಿಯಲ್ಲಿ ಮಾತ್ರ ಬಡವರಿದ್ದಾರೆಂದು ತಿಳಿದುಕೊಂಡಿದ್ದೀರಿ. ನಿಮಗೆ ಕಾಣತಕ್ಕ ಜನ ಬೇರೆ. ನಿಮಗೆ ಕಾಣಿಸುವವರು ಸಾಹುಕಾರರು, ಶ್ರೀಮಂತರು. ನನಗೆ, ಓಟು ಕೊಡುವವರು ಬಡವರೇ ಹೊರತು ಸಾಹುಕಾರರಲ್ಲ. ವೀರಪ್ಪ ಮೊಯ್ಲಿಯವರು ಕೇಳಿದಾಗ ಅವರ ಉದ್ದೇಶ ಏನಿತ್ತು ಎಂದರೆ, ನಾವು ಏನೋ ಮಾಡಬಾರದ್ದು ಮಾಡಿದ್ದೇವೆ, ಬಡವರಿಗೆ ಅನ್ಯಾಯ ಮಾಡಿದ್ದೇವೆ. ನಮಗೆ 20 ಅಂಶದ ಕಾರ್ಯಕ್ರಮದಲ್ಲಿ ನಂಬಿಕೆ ಇಲ್ಲ ಎಂದು.

ಶ್ರೀ ಧರ್ಮಸಿಂಗ್.—ಜನರು ಆ ರೀತಿ ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಜನರು ಏನು ತೀರ್ಮಾನ ಮಾಡಿದ್ದಾರೆಂಬುದು ನಮಗೆ ಗೊತ್ತು. ಕುರುಡನಿಗೆ ಕಣ್ಣು ಕೊಡುವುದಕ್ಕಾಗುವುದಿಲ್ಲ. ಕಣ್ಣಿಲ್ಲದವನಿಗೆ ಶಾಸನ ಹೇಳಿದರೆ ಕಣ್ಣು ಬರುತ್ತದೆಯೇ ? ಕನ್ನಡಕ ಹಾಕಿದರೆ ಕಣ್ಣು ಬರುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಕಣ್ಣಿದ್ದೂ ಕುರುಡರಾಗುತ್ತಿದ್ದಾರಲ್ಲ !

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಆ ರೀತಿ ಆಗುತ್ತಿರುವವರು. ಸಬ್ಸಿಡಿ ಸ್ಕೀಂ ಅನ್ನು ಕೇಂದ್ರ ಸರ್ಕಾರದವರು ಕೈಬಿಟ್ಟಿದ್ದಾರೆಂದು ಹೇಳಿದೆ. ಹೋದ ವರ್ಷ ನಾವು ಹಣ ಇಟ್ಟಿದ್ದೆವು, ನೀವು ಈ ವರ್ಷ ಇಡಲಿಲ್ಲವೆಂದಿರಿ. 50 ಪರ್ಸೆಂಟ್ ಸಬ್ಸಿಡಿ ಕೊಡತಕ್ಕ ಕೇಂದ್ರ ಸರ್ಕಾರ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಹೇಳುವವರೆಗೆ ಸ್ವಲ್ಪ ಇರಿ. ಬಡವರ ಹಿತರಕ್ಷಣೆಯನ್ನು ಹೇಗೆ ಮಾಡಬೇಕೆಂಬುದು ಮೊಯ್ಲಿ ಅವರಿಗೆ, ಧರ್ಮಸಿಂಗ್‌ರಿಗೆ ಗೊತ್ತಿಲ್ಲ. ಅವರ ಭವಿಷ್ಯವನ್ನು ತೀರ್ಮಾನಿಸತಕ್ಕ ಶಕ್ತಿ ಬಡವರಿಗೆ ಇದೆ. ಇದನ್ನು ಚುನಾವಣೆಯಲ್ಲಿ ತೋರಿಸಿದ್ದಾರೆ. ಮೊನ್ನೆ ಕಾರ್ಪೊರೇಷನ್ ಚುನಾವಣೆಯಲ್ಲಿ ಕೂಡ ತೋರಿಸಿದ್ದಾರೆ. ಇಷ್ಟೂ ಗೊತ್ತಿಲ್ಲದಿದ್ದರೆ ನಾನು ಬುದ್ಧಿ ಹೇಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರು ಸಬ್ಸಿಡಿ ಕೊಡದಿರುವುದರಿಂದ ನಾವು ಬಿಟ್ಟಿದ್ದೇವೆ. ಆದರೆ ತೆರೆದ ಮನಸ್ಸಿನಿಂದ ಯೋಚನೆ ಮಾಡುವುದಕ್ಕೆ ಸದಾ ಸಿದ್ಧರಿದ್ದೇವೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—10 ಲಕ್ಷ ರೂಪಾಯಿ ಇಟ್ಟದ್ದು ಏನಾಯಿತು ಎಂದು ಕೇಳುತ್ತೇನೆ.

ಉಪಾಧ್ಯಕ್ಷರು.—ಎಲ್ಲವನ್ನೂ ಹೇಳಿದ್ದಾರೆ, ಕುಳಿತುಕೊಳ್ಳಿ. ಈ ಬಗ್ಗೆ ಚರ್ಚೆಯಾಗಿ ಮಂತ್ರಿಗಳು ಉತ್ತರಿಸಿದ್ದಾರೆ. ಈಗ ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ. :—

" 31ನೇ ಮಾರ್ಚ್ 1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 30, 35, 36ನೇ ಬೇಡಿಕೆಗಳ ಬಗ್ಗೆ ಸರ್ಕಾರದವರು ಸದರಿ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ಈ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಅಂಗೀಕೃತವಾದ ಬೇಡಿಕೆಗಳ ಪಟ್ಟಿ ಈ ಕೆಳಗೆ ನಮೂದಿಸಿದೆ.)

ಅಭಿಯಾಚನೆ ಕ್ರಮಾಂಕ 30—ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು)

31–3–1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,90,40,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,92,00,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 35—ರಾಜ್ಯ ವಿಧಾನಸಭೆ

31–3–1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಸಭೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,34,59,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 36—ನ್ಯಾಯ ಪರಿಪಾಲನೆ

31–3–1984 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,90,66,000 ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿ ದಂತೆ ಮುಜೂರು ಮಾಡುವುದು.